

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 24 ಬುಧವಾರ 2024

ಸಂಪುಟ: 44 | ಸಂಚಿಕೆ: 277 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಬಿಹಾರದ ಮಾಜಿ ಸಿಎಂ ದಿವಂಗತ ಕರ್ಪೂರಿ ಠಾಕೂರ್‌ಗೆ 'ಭಾರತ ರತ್ನ'


ಬಿಹಾರದ ಮಾಜಿ ಮುಖ್ಯಮಂತ್ರಿ ದಿವಂಗತ ಕರ್ಪೂರಿ ಠಾಕೂರ್.

ದೆಹಲಿ, ಜ.23–ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರಿಗೆ ಮರಣೋತ್ತರ 'ಭಾರತ ರತ್ನ' ಪುರಸ್ಕಾರ ಘೋಷಣೆ ಮಾಡಲಾಗಿದೆ. ಠಾಕೂರ್ ಅವರು ಹಿಂದುಳಿದ ವರ್ಗಗಳ ಹೋರಾಟಕ್ಕಾಗಿ ಹೆಸರುವಾಸಿಯಾಗಿದ್ದರು. ಕರ್ಪೂರಿ ಎರಡು ಬಾರಿ ಬಿಹಾರದ ಉಪಮುಖ್ಯಮಂತ್ರಿ, ಎರಡು ಬಾರಿ ಮುಖ್ಯಮಂತ್ರಿ ಮತ್ತು ದಶಕಗಳ ಕಾಲ ವಿರೋಧ ಪಕ್ಷದ ನಾಯಕರಾಗಿದ್ದರು. 1952ರಲ್ಲಿ ಮೊದಲ ವಿಧಾನ ಸಭೆ ಚುನಾವಣೆಯಲ್ಲಿ ಗೆದ್ದ ನಂತರ ಅವರು ಬಿಹಾರ ವಿಧಾನಸಭೆ ಚುನಾವಣೆಯಲ್ಲಿ ಒಮ್ಮೆಯೂ ಸೋಲು ಕಂಡಿಲ್ಲ.

ಕರ್ಪೂರಿ ಠಾಕೂರ್ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಲು(ಮರಣೋತ್ತರ) ರಾಷ್ಟ್ರಪತಿಗಳು ಸಂತಸ ವ್ಯಕ್ತಪಡಿಸಿದ್ದಾರೆ ಎಂದು ರಾಷ್ಟ್ರಪತಿ ಭವನದ ಪ್ರಕಟಣೆಯು ಠಾಕೂರ್ ಅವರ 100ನೇ ಜನ್ಮ ವಾರ್ಷಿಕೋತ್ಸವದ ಒಂದು ದಿನ ಮೊದಲು ಹೇಳಿದೆ. ಕರ್ಪೂರಿ ಠಾಕೂರ್ ಡಿಸೆಂಬರ್ 1970 ಮತ್ತು ಜೂನ್ 1971ರ ನಡುವೆ ಹಾಗೂ ಡಿಸೆಂಬರ್ 1977–ಏಪ್ರಿಲ್ 1979ರವರೆಗೆ ಬಿಹಾರದ ಮುಖ್ಯಮಂತ್ರಿಯಾಗಿದ್ದರು. ಠಾಕೂರ್ ಅವರ ಪುತ್ರ ರಾಮ್‌ನಾಥ್ ಠಾಕೂರ್ ನಿತೀಶ್‌ಕುಮಾರ್ ನೇತೃತ್ವದ ಜೆಡಿಯು ನಿಂದ ರಾಜ್ಯಸಭಾ ● 9ನೇ ಪುಟಕ್ಕೆ

ಪ್ರಧಾನಿ ಮೋದಿ ಸಂತಸ



ಸಾಮಾಜಿಕ ನ್ಯಾಯದ ದಾರಿದೀಪ, ಮಹಾನ್ ಜನನಾಯಕ ಕರ್ಪೂರಿ ಠಾಕೂರ್‌ಜೀ ಅವರಿಗೆ ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ 'ಭಾರತ ರತ್ನ' ಪ್ರಶಸ್ತಿ ನೀಡಲು ಭಾರತ ಸರ್ಕಾರ ನಿರ್ಧರಿಸಿರುವುದು ನನಗೆ ಸಂತೋಷ ತಂದಿದೆ. ಈ ಪ್ರತಿಷ್ಠಿತ ಮನ್ನಣೆಯು ಸಾಮಾಜಿಕ ನ್ಯಾಯ ಪರವಾಗಿ ಮತ್ತು ಸಮಾನತೆ ಮತ್ತು ಸಬಲೀಕರಣದ ಧೀಮಂತರಾಗಿ ಅವರ ನಿರಂತರ ಪ್ರಯತ್ನಗಳಿಗೆ ಸಾಕ್ಷಿಯಾಗಿದೆ. ದೀನದಲಿತರನ್ನು ಮೇಲಕ್ಕೆತ್ತಲು ಅವರ ಅಚಲ ಬದ್ಧತೆ ಮತ್ತು ಅವರ ದೂರದೃಷ್ಟಿಯ ನಾಯಕತ್ವವು ಭಾರತದ ಸಾಮಾಜಿಕ–ರಾಜಕೀಯದಲ್ಲಿ ಅಳಿಸಲಾಗದ ಗುರುತು ಹಾಕಿದೆ. ಈ ಪ್ರಶಸ್ತಿಯು ಅವರ ಗಮನಾರ್ಹ ಕೊಡುಗೆಗಳನ್ನು ಗೌರವಿಸುವುದು ಮಾತ್ರವಲ್ಲದೆ ಹೆಚ್ಚು ನ್ಯಾಯಯುತ ಮತ್ತು ಸಮಾನ ಸಮಾಜವನ್ನು ರಚಿಸುವ ಅವರ ಧ್ಯೇಯವನ್ನು ಮುಂದುವರಿಸಲು ನಮಗೆ ಸ್ಫೂರ್ತಿ ನೀಡುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಒಂದೇ ದಿನ ಐದು ಲಕ್ಷ ಭಕ್ತರಿಂದ ಬಾಲರಾಮನ ದರ್ಶನ

ಅಯೋಧ್ಯೆ: ಅಯೋಧ್ಯೆಯ ರಾಮಮಂದಿರದಲ್ಲಿ ಇಂದು 5 ಲಕ್ಷ ಭಕ್ತರು ಬಾಲರಾಮನ ದರ್ಶನ ಪಡೆದು, ಪ್ರಾರ್ಥನೆ ಸಲ್ಲಿಸಿದ್ದಾರೆ. ಅಷ್ಟೇ ಸಂಖ್ಯೆಯ ಭಕ್ತರು ದರ್ಶನಕ್ಕಾಗಿ ಕಾಯುತ್ತಿದ್ದಾರೆ ಎಂದು ರಾಜ್ಯ ಸರ್ಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಅಯೋಧ್ಯೆಯ ರಾಮಮಂದಿರಕ್ಕೆ ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿದ್ದರಿಂದ, ಉತ್ತರಪ್ರದೇಶ ಸರ್ಕಾರದ ಹಿರಿಯ ಅಧಿಕಾರಿಗಳು ದೇವಾಲಯದ ಆವರಣದಲ್ಲಿ ಭಕ್ತರ ಕ್ರಮಬದ್ಧ ಚಲನವಲನವನ್ನು ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಉತ್ತರ ಪ್ರದೇಶದ ವಿಶೇಷ ಡಿಜಿ (ಕಾನೂನು ಮತ್ತು ಸುವ್ಯವಸ್ಥೆ) ಪ್ರಶಾಂತ್ ಕುಮಾರ್ ಮತ್ತು ಪ್ರಧಾನ ಕಾರ್ಯದರ್ಶಿ (ಗೃಹ) 'ಗರ್ಭ ಗೃಹ'ದೊಳಗೆ ಪರಿಸ್ಥಿತಿಯನ್ನು ಮೇಲ್ವಿಚಾರಣೆ ಮಾಡಿದರು. ಜನವರಿ 22 ರಂದು 'ಪ್ರಾಣ ಪ್ರತಿಷ್ಠಾ' ಸಮಾರಂಭವನ್ನು ನೆರವೇರಿಸಿದ ನಂತರ ಮಂಗಳವಾರ ರಾಮಮಂದಿರವನ್ನು ಸಾರ್ವಜನಿಕರಿಗೆ ತೆರೆಯಲಾಯಿತು. ಅಧಿಕಾರಿಗಳ ಪ್ರಕಾರ, ಪರಿಸ್ಥಿತಿಯನ್ನು ನಿಯಂತ್ರಿಸಲು 8,000ಕ್ಕೂ ಹೆಚ್ಚು ಭದ್ರತಾ ಸಿಬ್ಬಂದಿ ನಿಯೋಜಿಸಲ್ಪಟ್ಟಿದ್ದಾರೆ. ಬೆಳಗ್ಗೆಯಿಂದಲೇ ಭಕ್ತರು ದೇವಸ್ಥಾನಕ್ಕೆ ಆಗಮಿಸಿ ಪೂಜೆ ಸಲ್ಲಿಸಿದರು.


ನಾವು ತುಂಬಾ ಸಂತಸಗೊಂಡಿದ್ದೇವೆ. ನಾವು ಬಾಲ ರಾಮನ 'ದರ್ಶನ'ವನ್ನು ಪಡೆಯಲಿದ್ದೇವೆ ಎಂಬುದು ನಮ್ಮನ್ನು ಪುಳಕಿತಗೊಳಿಸುತ್ತಿದೆ ● 9ನೇ ಪುಟಕ್ಕೆ


ಅಯೋಧ್ಯೆಯ ರಾಮಮಂದಿರದಲ್ಲಿ ಮಂಗಳವಾರ 5 ಲಕ್ಷ ಭಕ್ತರು ಬಾಲರಾಮನ ದರ್ಶನ ಪಡೆದರು.



ಟೋಲ್‌ನಿಂದ ತಪ್ಪಿಸಿಕೊಳ್ಳಲು ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಕೆಲ ವಾಹನ ಚಾಲಕರ ಕಣ್ಣಾಮುಚ್ಚಾಲೆ!

ಇನ್ನು ಭಾರಿ ದಂಡದ ಬರೆ



ಮೈಸೂರು, ಜ. 23(ಆರ್‌ಕೆ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಟೋಲ್ ತಪ್ಪಿಸಿಕೊಳ್ಳಲು ವಾಹನ ಚಾಲಕರು ಕಣ್ಣಾಮುಚ್ಚಾಲೆಯಾಡುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು ಕಠಿಣ ಕ್ರಮಕ್ಕೆ ಮುಂದಾಗಿದ್ದಾರೆ. ಹೀಗೆ ಸಂಚಾರ ನಿಯಮ ಉಲ್ಲಂಘಿಸುವ ವಾಹನಗಳ ಚಾಲಕರು ಹಾಗೂ ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲಿಸುತ್ತಿದ್ದಾರೆ.

ಟೋಲ್ ಶುಲ್ಕ ಪಾವತಿಸುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಮಂಡ್ಯ, ಮದ್ದೂರು, ಚನ್ನಪಟ್ಟಣ ಹಾಗೂ ರಾಮನಗರ ವ್ಯಾಪ್ತಿಯ ಎಕ್ಸ್‌ಪ್ರೆಸ್‌ವೇ ಪ್ರವೇಶ ಮತ್ತು ನಿರ್ಗಮನಗಳಲ್ಲಿ ಮನಬಂದಂತೆ ವಾಹನ ಚಾಲನೆ ಮಾಡುತ್ತಿರುವ ಪ್ರಕರಣಗಳು ಇತ್ತೀಚೆಗೆ ಜಾಸ್ತಿಯಾಗಿದ್ದು, ಇಂತಹ ವರ್ತನೆ ಅಪಘಾತಗಳಿಗೂ ಕಾರಣವಾಗುತ್ತಿದ್ದು, ಅಮಾಯಕರು ಬಲಿಯಾಗುತ್ತಿದ್ದಾರೆ. ಇತ್ತೀಚೆಗೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇಯ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣಾ ವ್ಯಾಪ್ತಿಯಲ್ಲಿ ಬೆಂಗಳೂರಿನಿಂದ ಮೈಸೂರು ಕಡೆಗೆ ಬರುತ್ತಿದ್ದ ಕಾರೊಂದು ಗಣಂಗೂರು ಬಳಿ ಟೋಲ್ ತಪ್ಪಿಸಲು ಸರ್ವೀಸ್ ರಸ್ತೆಗಿಳಿದು, ಮತ್ತೆ ಮುಖ್ಯ ಪಥಕ್ಕೆ ಪ್ರವೇಶಿಸುತ್ತಿದ್ದಂತೆಯೇ, ಬೆಂಗಳೂರಿನಿಂದ ಮೈಸೂರು ಕಡೆಗೆ ವೇಗವಾಗಿ ಬರುತ್ತಿದ್ದ ಕಾರು (2024ರ ಜನವರಿ 1ರ ಮುಂಜಾನೆ 2.30 ಗಂಟೆ ವೇಳೆ) ಅಪ್ಪಳಿಸಿದ ಪರಿಣಾಮ ಯುವಕ ಮತ್ತು ಯುವತಿ ಸ್ಥಳದಲ್ಲೇ ಸಾವನ್ನಪ್ಪಿ, ಇತರೆ ಐವರು ಗಾಯಗೊಂಡಿದ್ದರು. ಟೋಲ್ ಪ್ಲಾಜಾಗಳಲ್ಲಿ ಶುಲ್ಕ ● 9ನೇ ಪುಟಕ್ಕೆ



ನನ್ನ ವಿರೋಧಿಗಳ ಜೊತೆ ಕೈಜೋಡಿಸಿದವರಿಗೆ ನಿಗಮ–ಮಂಡಳಿ ಸ್ಥಾನಮಾನ

ನಾನು ಸಹಿಸಲ್ಲ


ಮುಖ್ಯಮಂತ್ರಿ ಸಿದ್ದರಾಮಯ್ಯ

❝ ಎಲ್ಲರ ಸಲಹೆಗಳನ್ನೂ ಆಲಿಸಿ, ಸಮಾಧಾನಪಡಿಸುವುದು ಕಷ್ಟ. ನಾವು ವಿವಿಧ ಮಂಡಳಿಗಳು ಮತ್ತು ನಿಗಮಗಳಲ್ಲಿ (ಪಕ್ಷದ ಹೈಕಮಾಂಡ್‌ಗೆ) ನೇಮಕಾತಿಗಾಗಿ ಹೆಸರುಗಳನ್ನು ಶಿಫಾರಸು ಮಾಡಿದ್ದೇವೆ. ಇದರಲ್ಲಿ ಈಗ ನಮಗೆ ಯಾವುದೇ ಪಾತ್ರವಿಲ್ಲ. ಈ ಮಂಡಳಿಗಳು ಮತ್ತು ನಿಗಮಗಳಲ್ಲಿ ಪಕ್ಷದ ಕಾರ್ಯಕರ್ತರನ್ನು ನೇಮಿಸುವ ಬಗ್ಗೆ, ನಾನು, ಉಪ ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಮತ್ತು ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ವಿಸ್ತೃತ ಚರ್ಚೆ ನಡೆಸಿ ನಂತರ ಪಕ್ಷದ ಹೈಕಮಾಂಡ್ ಅನುಮೋದನೆಗಾಗಿ ಪಟ್ಟಿಯನ್ನು ಸುರ್ಜೇವಾಲಾ ಅವರಿಗೆ ನೀಡಲಾಗಿದೆ. ಪಟ್ಟಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸಹಿಯಾಗಬೇಕಿದೆ. ಎಲ್ಲರ ಸಲಹೆಗೆ ಕಿವಿಗೊಡುವುದು ಕಷ್ಟ.
– ಸಿದ್ದರಾಮಯ್ಯ

ಬೆಂಗಳೂರು, ಜ.23(ಕೆಎಂಶಿ)– ಕಳೆದ ವಿಧಾನಸಭಾ ಚುನಾವಣೆಯಲ್ಲಿ ತಮ್ಮನ್ನು ಸೋಲಿಸಲು ವಿರೋಧಿಗಳ ಜೊತೆ ಕೈಜೋಡಿಸಿದವರಿಗೆ ಹಾಗೂ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳದೆ ನಾಯಕರ ಮನೆ ಮುಂದೆ ಸುಳಿದಾಡುವವರಿಗೆ ನಿಗಮ–ಮಂಡಳಿಗಳಲ್ಲಿ ಅವಕಾಶ ಮಾಡಿಕೊಡುತ್ತಿರುವುದಕ್ಕೆ ವರಿಷ್ಠರ ವಿರುದ್ಧವೇ ಮುಖ್ಯಮಂತ್ರಿ ಸಿದ್ದರಾಮಯ್ಯ ಸಿಡಿದೆದ್ದಿದ್ದಾರೆ.

ರಾಜ್ಯದ ಉಸ್ತುವಾರಿ ಹೊಣೆ ಹೊತ್ತ ರಣದೀಪ್ ಸಿಂಗ್ ಸುರ್ಜೇವಾಲ ಅಧ್ಯಕ್ಷತೆಯಲ್ಲಿ ರಾಜ್ಯದ ಪ್ರಮುಖ ನಾಯಕರು ಕುಳಿತು ಪಟ್ಟಿ ಸಿದ್ಧಪಡಿಸಿ, ವರಿಷ್ಠರಿಗೆ ಕಳುಹಿಸಿದ ನಂತರ ಅದರಲ್ಲಿ ಕೆಲವು ಬದಲಾವಣೆ ಮಾಡಿ 12 ಮಂದಿಯನ್ನು ಹೊಸದಾಗಿ ಸೇರ್ಪಡೆ ಮಾಡಿರುವುದು ಮುಖ್ಯಮಂತ್ರಿ ಅವರ ಕೆಂಗಣ್ಣಿಗೆ ಗುರಿಯಾಗಿದೆ. ವರಿಷ್ಠರು ಕಳುಹಿಸಿರುವ ಪಟ್ಟಿಗೆ ತಾವು ಆದೇಶ ಮಾಡುವುದಿಲ್ಲ ಎಂದು ಪಟ್ಟು ಹಿಡಿದಿರುವ ಮುಖ್ಯಮಂತ್ರಿ ಅವರನ್ನು ಸಮಾಧಾನಪಡಿಸಿ ಪಟ್ಟಿ ಪರಿಷ್ಕರಿಸಲು ಸುರ್ಜೇವಾಲ ಇದೇ ಗುರುವಾರ ರಾಜ್ಯಕ್ಕೆ ಬರುತ್ತಿದ್ದಾರೆ. ನಿಗಮ–ಮಂಡಳಿ ನೇಮಕಾತಿಗೆ ಸಂಬಂಧಿಸಿದಂತೆ ಜನವರಿ 25ರ ಗುರುವಾರದಂದು ಮತ್ತೆ ಮುಖಂಡರು ಸಭೆ ಸೇರಿ, ಅಂತಿಮಗೊಳಿಸಲು ಪಕ್ಷ ನಿರ್ಧರಿಸಿದೆ. ಕಾಂಗ್ರೆಸ್ ಕಚೇರಿಯಲ್ಲಿ ಅತಿಥಿ ಸೇವೆ ವಿಭಾಗ ನೋಡಿಕೊಳ್ಳುವ ಸುಧೀಂದ್ರ, ಮೈಸೂರಿನಲ್ಲಿ ತಮ್ಮ ವಿರುದ್ಧ ಕೆಲಸ ಮಾಡಿದ ಮುಖಂಡರೊಬ್ಬರು ಸೇರಿದಂತೆ 12 ಮಂದಿಯನ್ನು ಹೊಸದಾಗಿ ಪಟ್ಟಿಗೆ ಸೇರಿಸಿರುವುದು ಮುಖ್ಯಮಂತ್ರಿ ಅವರಿಗೆ ಸಹಿಸಲಾಗುತ್ತಿಲ್ಲ. ಕೆಲವು ಸಚಿವರು ತಮ್ಮ ಬೆಂಬಲಿಗರನ್ನು ಅಧ್ಯಕ್ಷ ಸ್ಥಾನಕ್ಕೆ ತರಲು ವರಿಷ್ಠರ ಮೇಲೆ ಒತ್ತಡ ತಂದು ಪಟ್ಟಿಯಲ್ಲಿ ಸೇರ್ಪಡೆಗೊಳಿಸಿದ್ದಾರೆ. ಸಭೆಯಲ್ಲಿ ಯಾರ ಹೆಸರುಗಳನ್ನು ತಿರಸ್ಕರಿಸಲಾಗಿತ್ತೋ ಅಂತಹ ಹೆಸರುಗಳು ಮತ್ತೆ ಪಟ್ಟಿಗೆ ಸೇರ್ಪಡೆಗೊಂಡಿರುವುದು ಮುಖ್ಯಮಂತ್ರಿ ಅವರಿಗೆ ಸಿಟ್ಟು ತರಿಸಿದೆ. ಪಕ್ಷದ ಹಿರಿಯ ಶಾಸಕರಿಗಷ್ಟೇ ನಿಗಮಗಳ ಅಧ್ಯಕ್ಷ ಸ್ಥಾನ ● 7ನೇ ಪುಟಕ್ಕೆ

ನಮ್ಮ ಅಭಿಪ್ರಾಯ ಯಾರೂ ಕೇಳಿಲ್ಲ!


ಜಿ.ಪರಮೇಶ್ವರ್

ಬೆಂಗಳೂರು, ಜ.23(ಕೆಎಂಶಿ)– ನಿಗಮ–ಮಂಡಳಿಗಳಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ನೇಮಕ ವಿಚಾರದಲ್ಲಿ ತಮ್ಮ ಅಭಿಪ್ರಾಯ ಕೇಳಿಲ್ಲ. ಒಂದೆರಡು ಹೆಸರು ಕೊಡಿ ಅಂದಾಗ ಕೊಟ್ಟಿದ್ದೇನೆ. ನಮ್ಮ ಜತೆ ಮಾತಾಡಿ ಪಟ್ಟಿ ಮಾಡಿಲ್ಲ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಜಿಲ್ಲಾ ನಾಯಕರ ಜತೆ ಚರ್ಚಿಸಿ ಪಟ್ಟಿ ಸಿದ್ಧ ಪಡಿಸಬೇಕು. ಅದರೆ ಪಕ್ಷದ ಪ್ರಧಾನ ಕಾರ್ಯದರ್ಶಿಯವರೇ ಮಾಡುತ್ತಿದ್ದಾರೆ. ಪಟ್ಟಿ ಸಿದ್ಧಪಡಿಸುವುದು ನಿಧಾನವಾಗಿದೆ, ನೋಡೋಣ ಏನು ಮಾಡ್ತಾರೆ ಎಂದರು. ನಾನು 8 ವರ್ಷ ಪಕ್ಷದ ರಾಜ್ಯಾಧ್ಯಕ್ಷನಾಗಿದ್ದೆ, ಯಾರ್‍ಯಾರು ಕೆಲಸ ಮಾಡಿದ್ದಾರೆ ಎಂಬುದು ಗೊತ್ತಿದೆ. ಹತ್ತಾರು ವರ್ಷ ಪಕ್ಷಕ್ಕೆ ದುಡಿದವರಿದ್ದಾರೆ, ಅವರಿಗೆ ಅಧಿಕಾರ ಕೊಡಬೇಕು. ಕೆಲಸ ಮಾಡದವರಿಗೆ ಅಧಿಕಾರ ಕೊಟ್ಟರೆ, ಕೆಲಸ ● 9ನೇ ಪುಟಕ್ಕೆ

ಅನಧಿಕೃತ ತಂಬಾಕು ದಂಡರಹಿತ ಮಾರಾಟಕ್ಕೆ ಅನುಮತಿ



ಮೈಸೂರು,ಜ.23(ಪಿಎಂ)– ಅಧಿಕೃತ ಬೆಳೆಗಾರರ ಹೆಚ್ಚುವರಿ ತಂಬಾಕು ಹಾಗೂ ಅನಧಿಕೃತ ಬೆಳೆಗಾರರು ಬೆಳೆದ ತಂಬಾಕನ್ನು ದಂಡರಹಿತವಾಗಿ ಕರ್ನಾಟಕ ರಾಜ್ಯದ ತಂಬಾಕು ಮಂಡಳಿಯ ಹರಾಜು ವೇದಿಕೆಗಳಲ್ಲಿ ಮಾರಾಟ ಮಾಡಲು ಅವಕಾಶ ಕಲ್ಪಿಸಿ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ತಂಬಾಕು ಮಂಡಳಿ ಕಾಯ್ದೆ 1975 (4 ಆಫ್ 1975) ಮೂಲಕ ವಿಧಿಸಲಾದ ನಿರ್ಬಂಧಗಳನ್ನು ಸಡಿಲಿಸಿ ತಂಬಾಕು ಮಾರಾಟ ಮಾಡಲು ಅವಕಾಶ ಕಲ್ಪಿಸಿರುವುದಾಗಿ ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಸಂಸದ ಪ್ರತಾಪ್ ಸಿಂಹ ಅವರ ಸತತ ಪ್ರಯತ್ನದ ಫಲವಾಗಿ ಅನಧಿಕೃತ ಹಾಗೂ ಹೆಚ್ಚುವರಿ ತಂಬಾಕು ಮಾರಾಟ ಮಾಡಲು ಕೇಂದ್ರ ವಾಣಿಜ್ಯ ಇಲಾಖೆಯಿಂದ ಅನುಮತಿ ದೊರಕಿಸಿಕೊಡುವಲ್ಲಿ ಸಫಲರಾಗಿದ್ದಾರೆ. ಸಂಸದರ ಪ್ರಯತ್ನದ ಫಲವಾಗಿ ಮೈಸೂರು ಜಿಲ್ಲೆಯ ಹುಣಸೂರು, ಪಿರಿಯಾಪಟ್ಟಣ, ಕೆಆರ್ ನಗರ, ಹೆಚ್‌ಡಿ ಕೋಟೆ ಹಾಗೂ ಹಾಸನ ಜಿಲ್ಲೆಯ ಹೊಳೆನರಸೀಪುರ, ಅರಕಲಗೂಡು ತಾಲೂಕುಗಳ ಸಾವಿರಾರು ರೈತರಿಗೆ ಅನುಕೂಲವಾಗಲಿದೆ.

ದೆಹಲಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮಿಗ್–29 ಯುದ್ಧ ವಿಮಾನ ಹಾರಾಟ ಸಾಹಸಕ್ಕೆ ಸಜ್ಜಾಗಿರುವ ಮೈಸೂರಿನ ಪುಣ್ಯಾ ನಂಜಪ್ಪ





● ಬಾಪುಲಿಂಗರಾಜ್ ಅರಸ್

ಮೈಸೂರು, ಜ.23–ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಜನವರಿ 26 ರಂದು ನಡೆಯುವ ಐತಿಹಾಸಿಕ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮೈಸೂರಿನಲ್ಲಿ ಹುಟ್ಟಿ ಬೆಳೆದ ಕೊಡಗು ಮೂಲದ ಪುಣ್ಯಾ ನಂಜಪ್ಪ ಮಿಗ್–29 ವಿಮಾನದಲ್ಲಿ ಸಾಹಸ ಪ್ರದರ್ಶನ ಮೆರೆಯಲಿದ್ದಾರೆ. ಗಣರಾಜ್ಯೋತ್ಸವದಲ್ಲಿ ಇದೇ ಮೊದಲ ಬಾರಿಗೆ ನಾರಿ ಶಕ್ತಿ ಮೇಳೈಸಲಿದ್ದು, ಇದರಲ್ಲಿ ಪುಣ್ಯಾ ನಂಜಪ್ಪ ಯುದ್ಧ ವಿಮಾನದ ಹಾರಾಟ ಸಾಹಸಕ್ಕಿಳಿದಿರುವುದು ಮೈಸೂರಿಗರಿಗೆ ಹೆಮ್ಮೆಯ ಸಂಗತಿಯಾಗಿದೆ. ಮೈಸೂರಿನಲ್ಲಿ ಹುಟ್ಟಿ ಬೆಳೆದ ಕೊಡಗಿನ ಕುವರಿ ಪುಣ್ಯ ನಂಜಪ್ಪ ಅಪ್ರತಿಮ ಪ್ರತಿಭೆ. ಅವರ ತಂದೆ ದಿವಂಗತ ಸಿ.ಪಿ. ನಂಜಪ್ಪ ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕಿನ ಚೆಂಬೆ ಬೆಳ್ಳೂರಿನವರು. ತಾಯಿ ಅನುರಾಧ ಮೈಸೂರಿನ ವಿಜಯನಗರದ ಸೇಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್‌ನಲ್ಲಿ ಶಿಕ್ಷಕಿಯಾಗಿದ್ದರು. ಪುಣ್ಯಾ ನಂಜಪ್ಪ, ಇದೇ ಸ್ಕೂಲ್‌ನಲ್ಲಿ 10ನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿದ್ದರು. ಮೊದಲಿನಿಂದಲೂ ಭಾರತೀಯ ವಾಯು ಸೇನೆಗೆ ಸೇರುವ ಉತ್ಸುಕತೆ ಹೊಂದಿದ್ದರು. ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವದ ವೇಳೆ ನಡೆಯುವ ಏರ್ ಶೋ ವೀಕ್ಷಿಸುವ ವೇಳೆ ಈ ಬಗ್ಗೆ ಅತೀವ ಆಸಕ್ತಿ ಬೆಳೆಸಿಕೊಂಡರು. ಈ ಕನಸು ನನಸಾಗಿಸಿಕೊಳ್ಳಲು ಪುಣ್ಯಾ ನಂಜಪ್ಪ ಎನ್‌ಸಿಸಿಗೆ ಸೇರಿದ್ದರು.

ಮೈಸೂರಿನ ಸದ್ವಿದ್ಯಾ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡಿದ ನಂತರ ಮೈಸೂರಿನ ಎನ್‌ಐಇ ಕಾಲೇಜಿನಲ್ಲಿ ಬಿಇ ಪದವಿ ಪಡೆದರು. ತರುವಾಯ ನ್ಯಾಷನಲ್ ಡಿಫೆನ್ಸ್ ಅಕಾಡೆಮಿ(ಎನ್‌ಡಿಎ) ಸೇರಬೇಕೆಂಬ ಆಸೆ ಇಟ್ಟುಕೊಂಡರು. ಆದರೆ ಅಲ್ಲಿ ಮಹಿಳೆಯರಿಗೆ ಅವಕಾಶ ಇರಲಿಲ್ಲವಾದ ಕಾರಣ ಇವರ ಆಸೆ ಈಡೇರಲಿಲ್ಲ. ● 7ನೇ ಪುಟಕ್ಕೆ

● ಕರ್ನಾಟಕದ ಏಕೈಕ ಮಹಿಳಾ ಪೈಲಟ್
● ಮೈಸೂರಿನಲ್ಲಿ ಓದಿದ ಸಾಹಸಿ ಸಾಹಸಗಾಥೆ

ನನ್ನ ಹಲವು ವರ್ಷಗಳ ಆಸೆ ಈಡೇರುತ್ತಿದೆ

❝ ಈ ಬಾರಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಮಿಗ್–29 ಯುದ್ಧ ವಿಮಾನ ಹಾರಾಟ ನಡೆಸುತ್ತಿರುವುದು ನನಗೆ ಸಂತಸ ತಂದಿದೆ. ಈ ಮೂಲಕ ನನ್ನ ಹಲವು ವರ್ಷಗಳ ಆಸೆ ಈಡೇರುತ್ತಿದೆ. ಮಿಗ್–29ರ ಕಾಕ್ ಪಿಟ್‌ನಲ್ಲಿ ಕುಳಿತು ಹಾರಾಟ ನಡೆಸುತ್ತಿರುವುದು ವಿಶಿಷ್ಟ ಅನುಭವ. ಅದರಲ್ಲೂ ಜನವರಿ 26 ರಂದು ರಾಷ್ಟ್ರ ರಾಜಧಾನಿಯಲ್ಲಿ ನಡೆಯುವ ಐತಿಹಾಸಿಕ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಯುದ್ಧ ವಿಮಾನದ ಹಾರಾಟ ನಡೆಸುವುದು ಹೆಮ್ಮೆಯ ಸಂಗತಿ. ವಾಯು ಪಡೆಯ ಯುದ್ಧ ವಿಮಾನ ಹಾರಾಟ ನಡೆಸುವ ನನ್ನ ಹಲವು ವರ್ಷಗಳ ಕನಸು ನನಸಾಗುತ್ತಿದೆ. ಈ ವಿಚಾರ ನನ್ನ ಅಮ್ಮನಿಗೂ ಹೆಮ್ಮೆಯ ಸಂಗತಿ. ಈಗಾಗಲೇ ಮೂರು ಬಾರಿ ರಿಹರ್ಸಲ್ ಮಾಡಿದ್ದೇನೆ. ಈ ಬಾರಿಯ ಗಣರಾಜ್ಯೋತ್ಸವದಲ್ಲಿ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡುವುದು ಕೇಂದ್ರ ಸರ್ಕಾರದ ಪ್ರಮುಖ ವಿಚಾರವಾಗಿದೆ. ಇದರಿಂದ ನಾನು ಸೇರಿದಂತೆ ಬಹಳಷ್ಟು ಮಹಿಳೆಯರಿಗೆ ಅವಕಾಶ ದೊರೆತಿದೆ.
–ಪುಣ್ಯಾ ನಂಜಪ್ಪ, ಮಿಗ್–29 ಯುದ್ಧ ವಿಮಾನದ ಪೈಲಟ್


ಪುಣ್ಯಾ ನಂಜಪ್ಪ

ದೆಹಲಿಯಲ್ಲಿ ಮೇಳೈಸುವ ನಾರಿ ಶಕ್ತಿ

ಈ ಬಾರಿಯ ಗಣರಾಜ್ಯೋತ್ಸವದಲ್ಲಿ 51 ವಿಮಾನಗಳು ಹಾರಾಟ ನಡೆಸಲಿದ್ದು, ಅದರಲ್ಲಿ ಭಾರತೀಯ ಭೂ ಸೇನೆಯ 4 ಹಾಗೂ ನೌಕಾ ಪಡೆಯ 1 ವಿಮಾನ ಸೇರಿವೆ. 15 ವಿವಿಧ ವಿಮಾನ ಹಾರಾಟ ನಡೆಸಿ ನಾರಿಯರು ಪರಾಕ್ರಮ ಪ್ರದರ್ಶಿಸಲಿದ್ದಾರೆ. ಇದರಲ್ಲಿ ಅತೀ ಮುಖ್ಯವಾಗಿ 6 ಯುದ್ಧ ವಿಮಾನಗಳ ಹಾರಾಟದಲ್ಲಿ ಮೈಸೂರಿನ ಪುಣ್ಯಾ ನಂಜಪ್ಪ ಮಿಗ್–29ರ ಮೂಲಕ ತಮ್ಮ ಸಾಹಸ ಮೆರೆಯಲಿದ್ದಾರೆ. ರಫೆಲ್, ಜಾಗ್ವಾರ್ ಸೇರಿದಂತೆ ಇತರೆ ವಿಮಾನಗಳ ಮೂಲಕ ಧ್ವಜ, ರುದ್ರ, ಬಾಜ್, ಪ್ರಚಂಡ, ನೇತ್ರ, ವರುಣ ಸೇರಿದಂತೆ ಹಲವು ವಿನ್ಯಾಸಗಳಲ್ಲಿ ಅದ್ಭುತ ಪ್ರದರ್ಶನವಿದೆ. ಭಾರತೀಯ ವಾಯು ಸೇನೆಯ 6 ವಿವಿಧ ಸ್ಥಳಗಳಿಂದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿಮಾನಗಳು ಹಾರಾಟ ನಡೆಸಲಿವೆ.

ಕ್ರೀಡಾ ವಸತಿ ನಿಲಯಗಳ ಪ್ರವೇಶಾತಿಗೆ ಮೈಸೂರಲ್ಲಿ ಪರೀಕ್ಷೆ; 625 ಮಂದಿ ಉದಯೋನ್ಮುಖ ಕ್ರೀಡಾಪಟುಗಳ ಹಾಜರಿ





ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಕ್ರೀಡಾಶಾಲೆ ಹಾಗೂ ವಸತಿನಿಲಯಗಳಿಗೆ ಕ್ರೀಡಾಪಟುಗಳ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿರುವ ಉದಯೋನ್ಮುಖ ಕ್ರೀಡಾಪಟುಗಳು.

ಮೈಸೂರು,ಜ.23(ಎಂಟಿವೈ)–ಕ್ರೀಡಾ ಇಲಾಖೆಯ ಕ್ರೀಡಾ ಶಾಲೆ ಹಾಗೂ ವಸತಿ ನಿಲಯಗಳಿಗೆ ಪ್ರವೇಶಾತಿಗೆ ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ನಡೆಸಿದ ರಾಜ್ಯಮಟ್ಟದ ಆಯ್ಕೆ ಪ್ರಕ್ರಿಯೆಯಲ್ಲಿ ಮೈಸೂರು ವಿಭಾಗದ 6 ಜಿಲ್ಲೆಗಳಿಂದ 625 ಉದಯೋನ್ಮುಖ ಕ್ರೀಡಾಪಟುಗಳು ಕ್ರೀಡಾ ಪರೀಕ್ಷೆ ಎದುರಿಸಿದರು.

ಮೈಸೂರಿನ ನಜ಼ರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಕಳೆದ ಎರಡು ದಿನಗಳಿಂದ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಕ್ರೀಡಾಶಾಲೆ ಮತ್ತು ವಸತಿ ನಿಲಯಗಳಿಗೆ ಪ್ರತಿಭಾನ್ವಿತ ಕ್ರೀಡಾಪಟುಗಳ ರಾಜ್ಯಮಟ್ಟದ ಆಯ್ಕೆ ಪ್ರಕ್ರಿಯೆ ನಡೆಯುತ್ತಿದ್ದು, ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ, ಹಾಸನ, ಚಿಕ್ಕಮಗಳೂರು, ಉಡುಪಿ ಜಿಲ್ಲೆಗಳಿಂದ 625ಕ್ಕೂ ಹೆಚ್ಚು ಕ್ರೀಡಾಪಟುಗಳು ಪರೀಕ್ಷೆಗೆ ಹಾಜರಾದರು.

ಅಥ್ಲೆಟಿಕ್ಸ್, ಹಾಕಿ, ಫುಟ್ಬಾಲ್, ಜಿಮ್ನಾಸ್ಟಿಕ್, ಕುಸ್ತಿ, ವಾಲಿಬಾಲ್, ಬಾಸ್ಕೆಟ್ ಬಾಲ್, ಜೂಡೋ ಕ್ರೀಡೆಗಳಿಗೆ ಉದಯೋನ್ಮುಖ ಕ್ರೀಡಾಪಟುಗಳನ್ನು ಆಯ್ಕೆ ಮಾಡಿ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, 14 ವರ್ಷದೊಳಗಿನ(ಜೂನಿಯರ್ ಬಾಲಕ ಮತ್ತು ಬಾಲಕಿಯರು) 18 ವರ್ಷದೊಳಗಿನ(ಸೀನಿಯರ್ ಬಾಲಕ ಮತ್ತು ಬಾಲಕಿಯರು) ವಿಭಾಗದಲ್ಲಿ 5, 7 ಮತ್ತು 10ನೇ ತರಗತಿಯಲ್ಲಿ ಓದುತ್ತಿರುವ ಕ್ರೀಡೆಯಲ್ಲಿ ಆಸಕ್ತಿಯುಳ್ಳ ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ಕ್ರೀಡಾಶಾಲೆ ಮತ್ತು ವಸತಿ ನಿಲಯಗಳಿಗೆ ಆಯ್ಕೆ ಮಾಡಿಕೊಳ್ಳಲಾಗುತ್ತಿದ್ದು, ರಾಜ್ಯದ ವಿವಿಧ ವಿಭಾಗಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆಸಲಾಗುತ್ತಿದೆ.

ಮೈಸೂರು ವಿಭಾಗ ಮಟ್ಟದಲ್ಲಿ ನಡೆದ ಪರೀಕ್ಷೆಯಲ್ಲಿ ಜೂನಿಯರ್ ವಿಭಾಗದಲ್ಲಿ 231 ಬಾಲಕರು, 108 ಬಾಲಕಿಯರು, ಸೀನಿಯರ್ ವಿಭಾಗದಲ್ಲಿ 201 ಬಾಲಕರು ಹಾಗೂ 65 ಬಾಲಕಿಯರು ಸೇರಿ ಒಟ್ಟು 625 ಮಕ್ಕಳು ಪಾಲ್ಗೊಂಡಿದ್ದರು.

ಹಾಕಿ ಮತ್ತು ಅಥ್ಲೆಟಿಕ್ಸ್ ವಿಭಾಗದಲ್ಲಿ ಹೆಚ್ಚಿನ ಕ್ರೀಡಾಪಟುಗಳು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದು ವಿಶೇಷ. 35 ಮಂದಿ ತರಬೇತಿದಾರರು ಆಯಾ ಕ್ರೀಡೆಗೆ ಸಂಬಂಧಿಸಿದಂತೆ ನಿಗದಿತ ಮಾನದಂಡದಲ್ಲಿ ಪರೀಕ್ಷೆ ನಡೆಸಿದರು. ಮಾರ್ಚ್ ಕೊನೆ ಅಥವಾ ಏಪ್ರಿಲ್‌ನಲ್ಲಿ ಆಯ್ಕೆಯಾದವರ ಹೆಸರು ಪ್ರಕಟಿಸಲಾಗುತ್ತದೆ. ಈ ಸಂದರ್ಭದಲ್ಲಿ ಯುವಜನ ಮತ್ತು ಕ್ರೀಡಾ ಇಲಾಖೆ ಉಪನಿರ್ದೇಶಕ ಭಾಸ್ಕರ್ ನಾಯಕ್ ಆಯ್ಕೆ ಪ್ರಕ್ರಿಯೆ ಮೇಲುಸ್ತುವಾರಿ ನೋಡಿಕೊಂಡರು.

ನಾಳೆ ಸುತ್ತೂರು ಮಠದಲ್ಲಿ ವಿದುಷಿ ಸಂಗೀತಾಕಟ್ಟಿ ಕುಲಕರ್ಣಿ ಬೆಳದಿಂಗಳ ಸಂಗೀತ



ವಿದುಷಿ ಸಂಗೀತಾ ಕಟ್ಟಿ ಕುಲಕರ್ಣಿ



ಪಂಡಿತ್ ಉಮಾಕಾಂತ ಪುರಾಣಿಕ್



ಪಂ. ವಿಶ್ವನಾಥ ನಾಕೋಡ

ಮೈಸೂರು, ಜ. 23–ಮೈಸೂರಿನ ಶ್ರೀ ಸುತ್ತೂರು ಮಠದಲ್ಲಿ ಜ.25ರಂದು ಗುರುವಾರ ಸಂಜೆ 6 ಗಂಟೆಗೆ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಸಾನ್ನಿಧ್ಯದಲ್ಲಿ ಬೆಳದಿಂಗಳ ಸಂಗೀತ–263ರ ಅಂಗವಾಗಿ ವಿದುಷಿ ಸಂಗೀತಾಕಟ್ಟಿ ಕುಲಕರ್ಣಿ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ವಿದುಷಿ ಸಂಗೀತಾಕಟ್ಟಿ ಕುಲಕರ್ಣಿ, ಸುಮಾರು 40 ವರ್ಷಗಳಿಂದ ಕರ್ನಾಟಕದ ಸಂಗೀತ ಕ್ಷೇತ್ರದಲ್ಲಿ ಕಂಗೊಳಿಸುತ್ತಿರುವ ಅಪೂರ್ವ ಕಲಾವಿದರು. ಇವರ ಆರಂಭಿಕ ಸಂಗೀತಾಭ್ಯಾಸ ಪಂ. ಶೇಷಗಿರಿ ದಂಡಾಪುತ್‌ರವರ ಬಳಿ ನಡೆಯಿತು. ಅನಂತರ ಧಾರವಾಡದ ಪಂ. ಚಂದ್ರಶೇಖರ ಪುರಾಣಿಕಮಠ ಅವರಲ್ಲಿ ಖ್ಯಾಲ್ ಗಾಯನವನ್ನು, ಬಳಿಕ ಪದ್ಮಭೂಷಣ ಪಂ. ಬಸವರಾಜ ರಾಜಗುರುಗಳ ಬಳಿ ಕಿರಾಣಾ–ಗ್ವಾಲಿಯರ್ ಘರಾಣೆಯಲ್ಲಿ ಕಲಿತರು. ಜೈಪುರ್–ಅತ್ರೌಲಿ ಘರಾಣೆಯಲ್ಲಿ ಗಾನಕಲಾಸರಸ್ವತಿ ಪದ್ಮವಿಭೂಷಣ ಶ್ರೀಮತಿ ಕಿಶೋರಿ ಅಮೊನ್‌ಕರ್ ಬಳಿ ಸಂಗೀತದ ಹೊಸ ಆಯಾಮಗಳನ್ನು ಕರಗತ ಮಾಡಿಕೊಂಡರು. ಧಾರವಾಡದ ಶ್ರೀ ಅನಂತಾಚಾರ್ ಕಟಗೇರಿಯವರ ಬಳಿ ದಾಸವಾಣಿ, ಸಂತವಾಣಿ ಪ್ರಸ್ತುತಿಯಲ್ಲಿ ತರಬೇತಿ ಪಡೆದರು. ಇದುವರೆಗೆ ಇವರ ಸುಮಾರು 500ಕ್ಕೂ ಹೆಚ್ಚು ಧ್ವನಿಸುರುಳಿಗಳು ಹೊರಬಂದಿವೆ.

ಸಂಗೀತ ಕ್ಷೇತ್ರದ ಎಲ್ಲ ದಿಗ್ಗಜರೊಡನೆಯೂ ವೇದಿಕೆ ಹಂಚಿಕೊಂಡಿದ್ದಾರೆ. ಕನ್ನಡ, ತಮಿಳು ಸಿನಿಮಾಗಳ ಹಿನ್ನೆಲೆ ಗಾಯಕರಾಗಿ 500ಕ್ಕೂ ಹೆಚ್ಚು ಗೀತೆಗಳನ್ನು ಹಾಡಿದ್ದಾರೆ. ಟಿವಿ ಧಾರಾವಾಹಿಗಳಿಗೆ ಹಾಡಿರುವ ಗೀತೆಗಳು ಅಸಂಖ್ಯಾತ. ಟಿವಿ ವಾಹಿನಿಗಳ ಹಲವಾರು ಯೋಜನೆಗಳ ಹಿಂದಿನ ರೂವಾರಿಗಳು. ಸಂಗೀತ ನಿರ್ದೇಶನದಲ್ಲೂ ಸಿದ್ಧಹಸ್ತರು. ಇವರು ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರು. ಚಲನಚಿತ್ರ ವಿಮರ್ಶಕರ ಶ್ರೇಷ್ಠ ಚಿತ್ರಗೀತೆ ಗಾಯಕಿ ಪ್ರಶಸ್ತಿ, ಉದಯ ಟಿವಿಯ "ನಾಕೌಟ್" ಪ್ರಶಸ್ತಿ, ಈ ಟಿವಿಯ ಶ್ರೇಷ್ಠ ಸಂಗೀತಗಾರ್ತಿ ಪ್ರಶಸ್ತಿ, ಪಂ. ಬಸವರಾಜ ರಾಜಗುರು ರಾಷ್ಟ್ರೀಯ ಪುರಸ್ಕಾರ, ಶೃಂಗೇರಿ ಶಾರದಾ ಪೀಠದ ಆಸ್ಥಾನವಿದುಷಿ, ಬಸವ ವೇದಿಕೆಯ ವಚನ ಸಾಹಿತ್ಯಶ್ರೀ ಪ್ರಶಸ್ತಿ, ರಮಣಶ್ರೀ ಶರಣ ಪ್ರಶಸ್ತಿ, ರಾಷ್ಟ್ರೀಯ ಟಿವಿ ವಾಹಿನಿ ಸಿಎನ್‌ಎನ್ ನ್ಯೂಸ್–18 ನೀಡಿದ "ಸಾರ್ಥಕ್ ನಾರಿ" ಪ್ರಶಸ್ತಿ, ಹಾರಕೂಡ ಶ್ರೀ ಚನ್ನವೀರ ಬಸವ ಪ್ರಶಸ್ತಿ ಮುಂತಾದ ಪ್ರತಿಷ್ಠಿತ ಪ್ರಶಸ್ತಿಗಳು ಇವರಿಗೆ ಲಭಿಸಿವೆ.

ಹಾರ್ಮೋನಿಯಂ ವಾದನದಲ್ಲಿ ಪಂಡಿತ್ ಉಮಾಕಾಂತ ಪುರಾಣಿಕ್, ತಬಲಾದಲ್ಲಿ ಪಂಡಿತ್ ವಿಶ್ವನಾಥ ನಾಕೋಡ ಅವರು ಸಾಥ್ ನೀಡಲಿದ್ದಾರೆ.

ಗಂಡ–ಹೆಂಡತಿ ಜಗಳ ಬಿಡಿಸಲು ಬಂದ ಮಹಿಳೆ ಹತ್ಯೆ; ಆರೋಪಿಗೆ ಜೀವಾವಧಿ ಶಿಕ್ಷೆ

ಮೈಸೂರು,ಜ.23(ಆರ್‌ಕೆ)–ತನ್ನ ಪತ್ನಿ ಜೊತೆ ನಡೆಸುತ್ತಿದ್ದ ಜಗಳ ಬಿಡಿಸಲು ಬಂದಿದ್ದ ಪಕ್ಕದ ಮನೆ ಮಹಿಳೆಯನ್ನು ಹತ್ಯೆಗೈದಿದ್ದ ಆರೋಪಿಗೆ ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಕಠಿಣ ಜೀವಾವಧಿ ಶಿಕ್ಷೆ ಹಾಗೂ 50,000 ರೂ. ದಂಡ ವಿಧಿಸಿದೆ.

ಮೈಸೂರಿನ ವೀರನಗೆರೆ ನಿವಾಸಿ ಆಲ್ವಿನ್ ಶಿಕ್ಷೆಗೆ ಗುರಿಯಾದ ಕೊಲೆ ಆರೋಪಿ. 2020ರ ಅ.17ರಂದು ಪತ್ನಿ ಸೋನುವಿನೊಂದಿಗೆ ಜಗಳವಾಡುತ್ತಿದ್ದ ಆಲ್ವಿನ್, ಜಗಳ ಬಿಡಿಸಲು ಬಂದಿದ್ದ ಪಕ್ಕದ ಮನೆಯ ಮಹದೇವಮ್ಮ(56) ಅವರನ್ನು ಚಾಕುವಿನಿಂದ ಇರಿದು ಹತ್ಯೆಗೈದು ಪರಾರಿಯಾಗಿದ್ದ. ಪ್ರಕರಣ ದಾಖಲಿಸಿಕೊಂಡಿದ್ದ ಲಷ್ಕರ್ ಠಾಣೆ ಅಂದಿನ



ಇನ್ಸ್‌ಪೆಕ್ಟರ್ ಸುರೇಶ್ ಕುಮಾರ್, ಎಎಸ್‌ಐ ಸಿದ್ದರಾಜು, ಸಿಬ್ಬಂದಿಗಳಾದ ಲಿಂಗರಾಜು, ಸತ್ಯ, ಮಹೇಶ ಹಾಗೂ ಇತರರು, ಶೋಧನೆ ನಡೆಸಿ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸಿದ್ದರು.

ತನಿಖೆ ನಡೆಸಿದ ಸುರೇಶ್‌ಕುಮಾರ್, ಅಗತ್ಯ ಸಾಕ್ಷ್ಯಾಧಾರಗಳೊಂದಿಗೆ ನ್ಯಾಯಾಲಯಕ್ಕೆ ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಪ್ರಭಾವತಿ ಎಂ. ಹಿರೇಮಠ, ಸಾಕ್ಷ್ಯಾಧಾರಗಳಿಂದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿ ಆಲ್ವಿನ್‌ಗೆ ಜೀವಾವಧಿ ಶಿಕ್ಷೆ ಹಾಗೂ 50,000 ರೂ. ದಂಡ ವಿಧಿಸಿ ಜನವರಿ 18ರಂದು ತೀರ್ಪು ನೀಡಿದ್ದಾರೆ.

ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕರಾದ ಹೆಚ್.ಇ. ಚಿನ್ನಪ್ಪ ಮತ್ತು ರಂಜನಾರಾವ್ ವಾದ ಮಂಡಿಸಿದ್ದರು. ಶಿಕ್ಷೆಗೊಳಗಾದ ಆಲ್ವಿನ್, ಈ ಹಿಂದೆ 2004ರಲ್ಲಿ ಎನ್‌ಆರ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಕೊಲೆ ಪ್ರಕರಣ ಸಂಬಂಧ 14 ವರ್ಷ ಶಿಕ್ಷೆಯಾಗಿದ್ದು, ಜೈಲಿನಿಂದ ಬಂದ ಮೇಲೆ ಆಲನಹಳ್ಳಿ ಮತ್ತು ಎನ್‌ಆರ್ ಠಾಣೆಗಳಲ್ಲಿ ಆತನ ವಿರುದ್ಧ 5 ಕೊಲೆ ಪ್ರಯತ್ನ ಪ್ರಕರಣಗಳು ದಾಖಲಾಗಿದ್ದವು.



ಅಯೋಧ್ಯೆಯಲ್ಲಿ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಕೆ.ಆರ್.ಆಸ್ಪತ್ರೆ ರಸ್ತೆಯಲ್ಲಿರುವ ವ್ಯಾಪಾರಿಗಳ ಒಕ್ಕೂಟದಿಂದ ಶ್ರೀರಾಮನಿಗೆ ವಿಶೇಷ ಪೂಜೆ ಸಲ್ಲಿಸಿ, ಪ್ರಸಾದ ವಿತರಿಸಲಾಯಿತು. ಈ ವೇಳೆ ಶ್ರೀನಿವಾಸ, ಬಂಟಿ, ಅಜಯ್, ವಿನೋದ್, ವಿಜಿ, ಶಿವು, ಸಾಗರ್, ಪುಕ್‌ರಾಜ್ ಇನ್ನಿತರರಿದ್ದರು.

ಬಸವಣ್ಣ ಕರ್ನಾಟಕದ ಸಾಂಸ್ಕೃತಿಕ ನಾಯಕರು

ರಾಜ್ಯ ಸರ್ಕಾರದ ತೀರ್ಮಾನ ಸ್ವಾಗತಿಸಿ, ಸಂಭ್ರಮಾಚರಣೆ



ಮಾಜಿ ಶಾಸಕ ಎಂಕೆ.ಸೋಮಶೇಖರ್ ನೇತೃತ್ವದಲ್ಲಿ ಮೈಸೂರಿನ ಗನ್‌ಹೌಸ್ ವೃತ್ತದಲ್ಲಿ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು.

ಮೈಸೂರು,ಜ.23(ಪಿಎಂ)–ಸಾಮಾಜಿಕ ನ್ಯಾಯದ ಹರಿಕಾರ ಬಸವಣ್ಣ ಅವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕರು ಎಂದು ರಾಜ್ಯ ಸರ್ಕಾರ ಘೋಷಿಸಿರುವುದನ್ನು ಸ್ವಾಗತಿಸಿ, ಮಾಜಿ ಶಾಸಕ ಎಂಕೆ. ಸೋಮಶೇಖರ್ ನೇತೃತ್ವದಲ್ಲಿ ಮೈಸೂರಿನ ಗನ್‌ಹೌಸ್ ವೃತ್ತದಲ್ಲಿ ಬಸವೇಶ್ವರರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಸಂಭ್ರಮಾಚರಣೆ ನಡೆಸಲಾಯಿತು.

ಇದೇ ವೇಳೆ ಮಾತನಾಡಿದ ಎಂ.ಕೆ. ಸೋಮಶೇಖರ್, ಮುಖ್ಯಮಂತ್ರಿ ಸಿದ್ದರಾಮಯ್ಯರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಇಂತಹ ಐತಿಹಾಸಿಕ ತೀರ್ಮಾನ ಕೈಗೊಂಡಿದ್ದು, ಇದನ್ನು ನಾಡಿನ ಜನತೆ ಸಂತಸದಿಂದ ಸ್ವಾಗತಿಸಿದ್ದಾರೆ. ನಮ್ಮ ಸರ್ಕಾರದ ಈ ತೀರ್ಮಾನ ಕೇವಲ ಘೋಷಣೆಯಲ್ಲ, ಬಸವ ತತ್ವದ ಮೇಲಿರುವ ನಮ್ಮ ನಂಬಿಕೆ ಮತ್ತು ಬದ್ಧತೆ ಎಂದು ಹರ್ಷ ವ್ಯಕ್ತಪಡಿಸಿದರು.

ಬಸವಣ್ಣನವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಬೇಕೆಂದು ನಾಡಿನ ಲಿಂಗಾಯತ ಮಠಗಳ ಸ್ವಾಮೀಜಿಗಳು ಸಿದ್ದರಾಮಯ್ಯರಲ್ಲಿ ಮನವಿ ಮಾಡಿದ್ದರು. ಅವರ ಬೇಡಿಕೆ ಈಡೇರಿಸಿದ ತೃಪ್ತಿ ನಮ್ಮ ಸರ್ಕಾರಕ್ಕೆ ಇದೆ. ಈ ಎಲ್ಲಾ ಸ್ವಾಮೀಜಿಗಳ ಆಶೀರ್ವಾದ ನಮ್ಮ ಸರ್ಕಾರದ ಮೇಲೆ ಇರಲೆಂದು ಪ್ರಾರ್ಥಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ. ಸೋಮಶೇಖರ್, ಶ್ರೀಧರ್, ಮುಖಂಡರಾದ ರವಿಶಂಕರ್, ಪ್ರಕಾಶ್, ವಿಜಯ್ ಕುಮಾರ್, ಡೈರಿ ವೆಂಕಟೇಶ್, ಶಿವಮಲ್ಲಪ್ಪ, ಪುಟ್ಟಪ್ಪ, ಕೇಬಲ್ ಮಹಾದೇವು, ಟೈಲರ್ ಮಹದೇವ್, ಧರ್ಮೇಂದ್ರ, ರಾಜೇಶ್, ಪ್ರತಾಪ್‌ರಾವ್, ವಿನಯ್, ರಾಕೇಶ್, ಫಾರೂಖ್, ನಾಸೀರ್, ಲೋಕೇಶ್ ಮಾದಾಪುರ, ಯೋಗೇಶ್, ರಾಘು, ಮಹೇಂದ್ರ, ಭೈರಪ್ಪ ಕೇಬಲ್ ಶೇಖರ್, ಗಿರೀಶ್, ಇಂದ್ರಮ್ಮ, ಭರತ್ ಮತ್ತಿತರರು ಪಾಲ್ಗೊಂಡಿದ್ದರು.

ಆಯುಷ್ಮಾನ್, ಯಶಸ್ವಿನಿ, ಇಎಸ್‌ಐ ಆರೋಗ್ಯ ಸೇವಾ ದರ ಹೆಚ್ಚಿಸಲು ಖಾಸಗಿ ಆಸ್ಪತ್ರೆಗಳ ಆಗ್ರಹ

ಮೈಸೂರು,ಜ.23–ಕರ್ನಾಟಕ ಸರ್ಕಾರದ ಆಯುಷ್ಮಾನ್, ಇಎಸ್‌ಐ ಆರೋಗ್ಯ ಸೇವೆಗಳನ್ನು ಸರ್ಕಾರ ನೋಂದಾಯಿತ ಖಾಸಗಿ ಆಸ್ಪತ್ರೆಗಳ ಮೂಲಕ ಜನಸಾಮಾನ್ಯರಿಗೆ ಉಚಿತವಾಗಿ ನೀಡುತ್ತಿದೆ. ಈ ಯೋಜನೆಗಳಿಗೆ ತಗಲುವ ವೆಚ್ಚವನ್ನು ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರವೇ ಭರಿಸುತ್ತಿದೆ. ಸುಮಾರು 10 ವರ್ಷಗಳ ಹಿಂದೆ ನಿಗದಿಯಾಗಿರುವ ಸರ್ಕಾರದ ಈ ದರಗಳಿಂದ ಖಾಸಗಿ ಆಸ್ಪತ್ರೆಗಳು ತೀವ್ರ ನಷ್ಟವನ್ನು ಅನುಭವಿಸುತ್ತಿದ್ದರೂ ಮಾನವೀಯತೆಯ ದೃಷ್ಟಿಯಿಂದ ಜನಸಾಮಾನ್ಯರಿಗೆ ಆರೋಗ್ಯ ಸವಲತ್ತುಗಳನ್ನು ಮುಂದುವರೆಸಿಕೊಂಡು ಬರುತ್ತಿವೆ. ಅತೀವ ನಷ್ಟದಿಂದಾಗಿ ಶೇ.67ರಷ್ಟು ಖಾಸಗಿ ಆಸ್ಪತ್ರೆಗಳು ಈಗಾಗಲೇ ಸರ್ಕಾರದ ಈ ಯೋಜನೆಗಳನ್ನು ತಿರಸ್ಕರಿಸಿರುವುದರಿಂದ ಜನಸಾಮಾನ್ಯರು ಅತೀವ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ ಎಂದು ಸರ್ಕಾರಿ ಯೋಜನೆಗಳ ಅನುಷ್ಠಾನಿತ ಖಾಸಗಿ ಆಸ್ಪತ್ರೆಗಳ ಸಂಘದ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ತಿಳಿಸಿದ್ದಾರೆ.



ಡಾ.ಎಸ್.ಪಿ.ಯೋಗಣ್ಣ

ಈ ಎಲ್ಲಾ ನಷ್ಟಗಳಿಗೆ ಪರಿಹಾರ ಕಂಡು ಹಿಡಿಯಲು ಇತ್ತೀಚೆಗೆ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸರ್ಕಾರಿ ಯೋಜನೆಗಳ ಅನುಷ್ಠಾನಿತ ಆಸ್ಪತ್ರೆಗಳ ಸಭೆಯನ್ನು ಕರೆಯಲಾಗಿದ್ದು, ಆ ಸಭೆಯಲ್ಲಿ ಮೈಸೂರಿನ ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣನವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಯೋಜನೆಗಳ ಅನುಷ್ಠಾನಿತ ಆಸ್ಪತ್ರೆಗಳ ಸಂಘವೊಂದನ್ನು ಸ್ಥಾಪಿಸಿ, ಆ ಮೂಲಕ ಸರ್ಕಾರದೊಡನೆ ಈ ಬಗ್ಗೆ ಚರ್ಚಿಸಲು ತೀರ್ಮಾನಿಸಲಾಯಿತು.

ಸಮಿತಿಯಲ್ಲಿ ನಾರಾಯಣ ಸಮೂಹ ಆಸ್ಪತ್ರೆಗಳ ಅಧ್ಯಕ್ಷ ದೇವಿಶೆಟ್ಟಿ, ಐಎಂಎ ರಾಜ್ಯ ಶಾಖೆ ಅಧ್ಯಕ್ಷ ಡಾ.ಶ್ರೀನಿವಾಸ್, ಫಾನಾ ಅಧ್ಯಕ್ಷ ಡಾ.ಗೋವಿಂದಯ್ಯ ಯತೀಶ್, ಐಎಂಎ ಉಪಾಧ್ಯಕ್ಷ ಡಾ. ಮದನ್‌ಕುಮಾರ್ ಪಾಟೀಲ್, ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕರಾದ ಡಾ.ಸಿ.ಎನ್.ಮಂಜುನಾಥ್ ಅವರನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದ್ದು, ಈ ಸಮಿತಿಯು ಆರೋಗ್ಯ ಮಂತ್ರಿ ದಿನೇಶ್ ಗುಂಡೂರಾವ್ ಅವರನ್ನು ಭೇಟಿಯಾಗಿ ಸಮಸ್ಯೆಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಹಾಲಿ ಇರುವ ಆಯುಷ್ಮಾನ್, ಯಶಸ್ವಿನಿ, ಇಎಸ್‌ಐ ಆರೋಗ್ಯ ಯೋಜನೆಗಳ ದರವನ್ನು ಈ ಸಾಲಿನ ಆಯವ್ಯಯದಲ್ಲಿ ಹೆಚ್ಚಿಸಬೇಕೆಂದು ಮನವಿ ಮಾಡಿದರು. ಇಲ್ಲದಿದ್ದಲ್ಲಿ ಈ ಯೋಜನೆಗಳನ್ನು ಇನ್ನು ಮುಂದೆ ಖಾಸಗಿ ಆಸ್ಪತ್ರೆಗಳು ಕಾರ್ಯಗತ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿ, ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಸಕಾರಾತ್ಮಕವಾಗಿ ನಿರ್ಧಾರ ತೆಗೆದುಕೊಳ್ಳುವಂತೆ ಒತ್ತಾಯಿಸಲಾಯಿತು ಎಂದು ಡಾ.ಯೋಗಣ್ಣ ತಿಳಿಸಿದ್ದಾರೆ.





ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಶ್ರೀರಾಮ ಸ್ಮರಣೆ ಮಾಡಲಾಯಿತು. ಚಿತ್ರದಲ್ಲಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಎಸ್.ಜ್ಞಾನಶಂಕರ್, ಡಾ.ಕೆ.ಎಂ. ಮಾದಪ್ಪ, ನಿರ್ದೇಶಕರಾದ ಡಾ.ಜಿ.ಸಿದ್ದೇಶ್, ಹೃದಯ ತಜ್ಞ ಡಾ.ಕೃಷ್ಣ ಪ್ರಸನ್ನ, ರೇಡಿಯೋಲಜಿಸ್ಟ್ ಡಾ.ನಯನ ಮತ್ತು ಸಿಬ್ಬಂದಿ ವರ್ಗ ಶ್ರೀ ರಾಮ ಸ್ಮರಣೆ ಮಾಡಿ ನೆರೆದವರು ಮತ್ತು ಸಿಬ್ಬಂದಿಗೆ ಪಾನಕ, ಮಜ್ಜಿಗೆ ವಿತರಿಸಲಾಯಿತು.



ಮೈಸೂರಿನ ಟೀಚರ್ಸ್ ಲೇಔಟ್‌ನಲ್ಲಿರುವ ರಾಧಾಕೃಷ್ಣನ್ ಪಾರ್ಕ್ ಮುಂಭಾಗ ಶ್ರೀರಾಮ ರಥಯಾತ್ರೆ ನಡೆಸಲಾಯಿತು. ಭಜನೆಯೊಂದಿಗೆ ರಾಮ ಜಪ ಮಾಡಿ, ಪ್ರಸಾದ ವಿತರಿಸಲಾಯಿತು. ಈ ವೇಳೆ ಮೈಕ್ ಪ್ರಕಾಶ್, ರಮೇಶ್, ಸುಭೋದ್, ರುಕ್ಮಿಣಿ, ರಾಜಶೇಖರ್‌ಮೂರ್ತಿ, ಸಂಗೀತ, ಬಡಾವಣೆ ನಿವಾಸಿಗಳು ಉಪಸ್ಥಿತರಿದ್ದರು.



ಸೋಮವಾರ ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಮೈಸೂರಿನ ಮಂಚೇಗೌಡನಕೊಪ್ಪಲಿನ ರಾಮಮಂದಿರದಲ್ಲಿ ರಾಮಮೂರ್ತಿಯ ಭವ್ಯ ಮೆರವಣಿಗೆ ನಡೆಸಲಾಯಿತು. ಈ ವೇಳೆ ಮಾಜಿ ಕಾರ್ಪೋರೇಟರ್ ಪ್ರೇಮಾ ಶಂಕರೇಗೌಡ, ಬಿಜೆಪಿ ಮುಖಂಡ ಪುನೀತ್ ಇತರರಿದ್ದಾರೆ.


ಗ್ರಾಜುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕರಾಗಿ ಆಯ್ಕೆ

ಮೈಸೂರು, ಜ. 23– ಮೈಸೂರಿನ ದಿ ಗ್ರಾಜುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್‌ಗೆ 2024–29ನೇ ಅವಧಿಗೆ ನಡೆದ ಆಡಳಿತ ಮಂಡಳಿ ಚುನಾವಣೆಯಲ್ಲಿ ಆರ್.ಅನಂತರಾಮು, ಎನ್.ಶ್ರೀನಿವಾಸ, ಪ್ರೊ. ಪಿ.ವಿ.ನರಹರಿ, ಟಿ.ಎಸ್.ರವಿಶಂಕರ್, ಎಂ.ಎ.ಹೇಮಲತಾ, ಕೆ.ಜಿ. ಸತೀಶ್, ಎಸ್.ಎನ್.ಜಗದೀಶ್, ಕೆ.ವಿ.ಲಕ್ಷ್ಮೀದೇವಿ, ಸಿ.ಕಮಲಮ್ಮ, ಸುಜಾತ ಶ್ರೀನಿವಾಸರಾವ್, ಎಲ್.ಸೋಮಣ್ಣ, ಸುಜಾತ ವೆಂಕಟರಾಜು, ಆರ್.ವರಲಕ್ಷ್ಮಿ ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಾರ್ವಜನಿಕರಿಂದ ಅಹವಾಲು ಸ್ವೀಕಾರ

ಮೈಸೂರು.ಜ.23–ಮಾನವ ಹಕ್ಕುಗಳ ಸಂರಕ್ಷಣೆ ಹಾಗೂ ಮಾನವ ಹಕ್ಕುಗಳ ಉಲ್ಲಂಘನೆ ಪ್ರಕರಣಗಳಲ್ಲಿ ನೊಂದವರಿಗೆ ಸೂಕ್ತ ನೆರವನ್ನು ಒದಗಿಸುವ ನಿಟ್ಟಿನಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗವು ಜ.30ರಿಂದ ಫೆ.2ರವರೆಗೆ ಜಿಲ್ಲೆಯಲ್ಲಿ ಸಿಟ್ಟಿಂಗ್ಸ್ ನಡೆಸಲು ಹಾಗೂ ಆಯೋಗದಲ್ಲಿ ನೋಂದಣಿಯಾಗಿರುವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಉದ್ದೇಶಿಸಲಾಗಿದೆ. ದೂರುದಾರರು ಹಾಗೂ ಪ್ರತಿವಾದಿ ಪ್ರಾಧಿಕಾರಗಳು ಈ ಸೌಲಭ್ಯದ ಸದುಪಯೋಗಪಡಿಸಿಕೊಳ್ಳಬೇಕು. ಸಾರ್ವಜನಿಕರು ಸದರಿ ದಿನಾಂಕಗಳಂದು ಆಯೋಗದ ಅಧ್ಯಕ್ಷರು, ಸದಸ್ಯರನ್ನು ಸಂಪರ್ಕಿಸಿ, ದೂರುಗಳನ್ನು ಸಲ್ಲಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.1.2024 ಬುಧವಾರ, ಮಳೆ ನಕ್ಷತ್ರ: ಶ್ರವಣ 24.1.2024ರಿಂದ 05.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ,
ಶುಕ್ಲ ಪಕ್ಷ, ತಿಥಿ: ಚತುರ್ದಶಿ, ನಕ್ಷತ್ರ: ಆರಿದ್ರಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ನವ ಕರ್ನಾಟಕ ಪ್ರಕಾಶನ:** ಪುಸ್ತಕ ಪ್ರದರ್ಶನ, ಸ್ಥಳ: ನವ ಕರ್ನಾಟಕ ಪ್ರಕಾಶನ, ರಾಮಸ್ವಾಮಿ ಸರ್ಕಲ್ ಬಳಿ, ಬೆಳಗ್ಗೆ 9.30 ರಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7 ಗಂಟೆವರೆಗೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಹಿಳಾ ಘಟಕ, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಘಟಕ:** 'ಅಭಿನವ ಸಾಮ್ರಾಟ ಡಾ.ಪುನೀತ್ ಚುಟುಕುಗಳು' ಲೋಕಾರ್ಪಣೆ ಸಮಾರಂಭ, ಕೃತಿ ಲೋಕಾರ್ಪಣೆ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕಾರ್ಯಕ್ರಮ ಉದ್ಘಾಟನೆ: ಮಾಜಿ ಗೃಹ ಸಚಿವ ಪಿ.ಜಿ.ಆರ್.ಸಿಂಧ್ಯಾ, ಅಧ್ಯಕ್ಷತೆ: ಚುಟುಕು ಯೋಗಾಚಾರ್ಯ ಡಾ.ಎಂ.ಜಿ.ಆರ್.ಅರಸ್, ಪುನೀತ್ ಭಾವಚಿತ್ರ ಲೋಕಾರ್ಪಣೆ: ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಮುಖ್ಯ ಅತಿಥಿಗಳು : ಚುಟುಕು ಸಿರಿ ಡಾ.ರತ್ನ ಹಾಲಪ್ಪಗೌಡ, ಮಾನ್ಯ ಕಾರ್ಯಪ್ಪ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಚಿತ್ರ ನಿರ್ಮಾಪಕ ಶ್ರೀನಿವಾಸ್, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಡಾ.ಹೆಚ್.ಎನ್.ಲೋಕೇಶಪ್ಪ, ಸ್ಥಳ: ವಿಜಯನಗರದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣ, ಬೆಳಗ್ಗೆ 10.30ಕ್ಕೆ

■ **ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ :** ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ, ಉದ್ಘಾಟನೆ : ರಾಜ್ಯ ಮುಖ್ಯ ಆಯುಕ್ತ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಪಿ.ಜಿ.ಆರ್. ಸಿಂಧ್ಯಾ, ಮುಖ್ಯ ಅತಿಥಿಗಳು : ರೋಟರಿ ಪಂಚಶೀಲಾ ಅಧ್ಯಕ್ಷೆ ಡಾ. ರಚನಾ ನಾಗೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ಯೋಜನಾಧಿಕಾರಿ ಮಂಜುನಾಥ್, ಅಧ್ಯಕ್ಷತೆ : ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಮುಖ್ಯ ಆಯುಕ್ತ ಪಿ. ವಿಶ್ವನಾಥ್, ಸ್ಥಳ: ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್ ಅಂಡ್ ಗೈಡ್ಸ್ ಕೇಂದ್ರ ಕಚೇರಿ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಸಸ್ಯಶಾಸ್ತ್ರ ಅಧ್ಯಯನ ವಿಭಾಗ :** ಶೈಕ್ಷಣಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಡಾ. ಎಂ. ಸಂಜಪ್ಪ, ಮುಖ್ಯ ಅತಿಥಿಗಳು : ಶ್ರೀಮತಿ ಎಸ್.ಬಿ.ಅನಿತಾ, ಡಾ. ಕೆ.ಹೆಚ್. ವಿನಯಕುಮಾರ್, ಪ್ರೊ. ಎಸ್. ಶಂಕರ ಭಟ್, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವ ಪ್ರೊ. ಕೆ.ಎಂ. ಮಹದೇವನ್, ಸ್ಥಳ: ಲೀನಿಯಸ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು :** ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಸ್ಕಿಲ್ ಲ್ಯಾಬ್ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಮುಖ್ಯ ಅತಿಥಿಗಳು : ಡೆಲ್ ಟೆಕ್ನಾಲಜೀಸ್ ಸೀನಿಯರ್ ಡೈರೆಕ್ಟರ್ ಇಂದ್ರಜಿತ್ ಬೆಳಗುಂಡಿ, ಇಂಟೆಲ್ ಸೀನಿಯರ್ ಡೈರೆಕ್ಟರ್ ಶ್ವೇತಾ ಖುರಾನಾ, ಹರೀಶ್ ನರಸಿಂಹನ್, ಪಿ. ವಿಶ್ವನಾಥ್, ಶ್ರೀಶೈಲ ರಾಮಣ್ಣವರ್, ಕಾಲೇಜು ಪ್ರಿನ್ಸಿಪಾಲ್ ಡಾ. ಬಿ. ಸದಾಶಿವೇಗೌಡ, ಡಾ. ಎಂ.ಆರ್.ಪೂಜಾ, ಡಾ. ವಿ. ರವಿಕುಮಾರ್, ಡಾ. ಡಿ.ಸಿ. ವಿನುತಾ, ಸ್ಥಳ: ಎಂ–308 ಎಂ ಬ್ಲಾಕ್, ಮೂರನೇ ಮಹಡಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ವಿವಿ ಅರ್ಥಶಾಸ್ತ್ರ ಮತ್ತು ಸಹಕಾರ ವಿಭಾಗ, ಮೈಸೂರು ಜಿಲ್ಲಾ ಸಹಕಾರ ಯೂನಿಯನ್ :** ವಿವಿಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ, ಅಧ್ಯಕ್ಷತೆ : ಶಾಸಕ ಜಿ.ಟಿ. ದೇವೇಗೌಡ, ಬಹುಮಾನ ವಿತರಣೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಡಾ. ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಮಹಾಮಂಡಳ ಉಪಾಧ್ಯಕ್ಷ ಜಗದೀಶ್ ಎಂ. ಕಮಟಗಿಮಠ, ಎನ್. ಗಂಗಣ್ಣ, ಬಿ.ಸಿ. ಲೋಕಪ್ಪಗೌಡ, ಜಯಕರಶೆಟ್ಟಿ ಬಿ. ಇಂದ್ರಾಳಿ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4.30ಕ್ಕೆ.

■ **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ :** 58ನೇ ವರ್ಷದ ತೈಪೂಜಾ ಮಹೋತ್ಸವ, ಕಲ್ಯಾಣೋತ್ಸವ, ಸ್ಥಳ: ದೇವಸ್ಥಾನದ ಆವರಣ, ವಿಶ್ವೇಶ್ವರನಗರ, ಸಂಜೆ 5ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸ ಗಂಗೋತ್ರಿ:** 74ನೇ ಸಂವಿಧಾನ ದಿನಾಚರಣೆ ಅಂಗವಾಗಿ ವಿಶೇಷ ಉಪನ್ಯಾಸಗಳ ಮಾಲಿಕೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಸಮಾಜ ಕಲ್ಯಾಣ ಇಲಾಖೆ ಸಲಹೆಗಾರ ಡಾ. ಎಸ್. ತುಕಾರಾಂ ಅವರಿಂದ ಭಾರತದ ಸಂವಿಧಾನ ಮತ್ತು ಶೈಕ್ಷಣಿಕ ಸಮಾಜ ಕುರಿತು ಉಪನ್ಯಾಸ, ಅಧ್ಯಕ್ಷತೆ : ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಿಲಯ ಮೇಲ್ವಿಚಾರಕ ಎಸ್. ಸಂತೋಷ್ ಕುಮಾರ್, ಸ್ಥಳ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಡಿ. ದೇವರಾಜ ಅರಸು ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯ, ನಂಜನಗೂಡು, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ– ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ–ಮೂಕನಹಳ್ಳಿ ರಂಗಸ್ವಾಮಿ, 6.40 ಪದ ಸಂಸ್ಕೃತಿ–ಕೆ.ಎಲ್. ಪದ್ಮಿನಿ ಹೆಗಡೆ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ವೃತ್ತಿ ಮಾರ್ಗದರ್ಶನ –ಸಿರಿಕಲ್ಚರ್ ಅಂಡ್ ಸಿರಿಬಯೋಟೆಕ್ನಾಲಜಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ.ಟಿ.ಎಸ್. ಜಗದೀಶ್ ಕುಮಾರ್ ಅವರೊಂದಿಗೆ ಮಾತುಕತೆ. ನಡೆಸಿಕೊಡುತ್ತಾರೆ–ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಸಂಗೀತ, ಅಜಯ್ ಪೋಹಂಕರ್–ಹಾಡುಗಾರಿಕೆ, 11.00ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರನಾಮ–ಕೆ.ಟಿ. ಉದಯಕಿರಣ, ಡಾ. ರಾಜ್‌ಕುಮಾರ್, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಆರ್.ವಿ. ಅನುಪಮಾ, 3.00 ಎ.ಕೆ.ಸಿ. ನಟರಾಜ್–ಕ್ಲಾರಿಯೋನೆಟ್ ವಾದನ, 4.00 ಮಹಿಳಾರಂಗ–ಸ್ತ್ರೀ ಚೇತನ–ಸಂಪನ್ಮೂಲ ವ್ಯಕ್ತಿ ಹಾಗೂ ಕವಯಿತ್ರಿ ಮಂಡ್ಯದ ಶಬಾನಾ ಅವರೊಂದಿಗೆ ಮಾತುಕತೆ, 4.45 ಹಿಂದಿ ಪಾಠ, ಪ್ರಸ್ತುತಿ–ವಿದ್ಯಾಕುಮಾರ್, 6.50 ಕೃಷಿರಂಗ–ರೈತ ವಿಜ್ಞಾನಿಗಳ ಸಹಭಾಗಿತ್ವದಲ್ಲಿ ಬೀಜೋತ್ಪಾದನೆ ಕುರಿತು ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯದ ಅಧಿಕಾರಿ ಡಾ.ಹೆಚ್. ಮಧುಸೂಧನ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಎನ್. ಕೇಶವಮೂರ್ತಿ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಬರ್ಕತ್ ಅಳಿ ಖಾನ್–ಗಾಯನ, 10.00 ಜನಪದ ಸಂಗೀತ, 10.30 ಸವಿನೆನಪು



ಶ್ರೀ ಬಸವೇಶ್ವರ ನವಚೇತನ ವಿಶೇಷ ಮಕ್ಕಳ ಶಾಲೆಯ ಮಕ್ಕಳಿಗೆ ಹಣ್ಣು ಉಪಹಾರ, ನೋಟ್ ಬುಕ್ ವಿತರಿಸುವ ಮೂಲಕ ಜೆಡಿಎಸ್ ಯುವ ಮುಖಂಡ ನಿಖಿಲ್ ಕುಮಾರಸ್ವಾಮಿ ಹುಟ್ಟುಹಬ್ಬವನ್ನು ಅರ್ಥಪೂರ್ಣ ಆಚರಿಸಲಾಯಿತು. ಈ ವೇಳೆ ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಬಳಗದ ಸದಸ್ಯರಾದ ಶ್ರೀನಿವಾಸ್, ಬಾಲಕೃಷ್ಣ, ಧರ್ಮಪಾಲ್‌ಗೌಡ, ಕೆ.ಟಿ.ಸಂದೀಪ್, ಹೇಮಂತ್‌ಕುಮಾರ್, ಪುಟ್ಟಬಸವೇಗೌಡ, ನಾಗರಾಜು, ಚಂದ್ರಶೇಖರ್, ಟ್ರಸ್ಟ್‌ನ ಸಂಸ್ಥಾಪಕ ಮರಿಗೌಡ ಇತರರು ಉಪಸ್ಥಿತರಿದ್ದರು.

ಕೃಷಿ ನವೋದ್ಯಮಗಳಿಗೆ ಸಹಾಯಧನ; ಸಾಮರ್ಥ್ಯಾಭಿವೃದ್ಧಿಗೆ ತಜ್ಞರಿಂದ ತರಬೇತಿ

ರೈತರಿಂದ ಪ್ರಾರಂಭಿಸಲಾದ ಕೃಷಿ ನವೋದ್ಯಮಗಳಿಗೆ ಪ್ರಥಮ ಆದ್ಯತೆ

ಮೈಸೂರು,ಜ.23(ಪಿಎಂ)– ಕೃಷಿ ಇಲಾಖೆ ವತಿಯಿಂದ 2023–24ನೇ ಸಾಲಿನಲ್ಲಿ ಅನುಷ್ಠಾನಗೊಳ್ಳುತ್ತಿರುವ 'ನವೋದ್ಯಮ' ಯೋಜನೆಯಡಿ ಸಹಾಯಧನ ನೀಡಲಾಗುತ್ತಿದೆ ಎಂದು ಕೃಷಿ ಇಲಾಖೆ ತಿಳಿಸಿದೆ.

ಕೃಷಿ ಉತ್ಪನ್ನಗಳು ಮೌಲ್ಯವರ್ಧನೆ ಮತ್ತು ಕೃಷಿ ಮಾರುಕಟ್ಟೆಗೆ ಸಂಬಂಧಿಸಿದ ವಲಯಗಳಲ್ಲಿ ನಾವೀನ್ಯತೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕೃಷಿ ಉದ್ಯಮಗಳಿಗೆ ಉತ್ತೇಜನ ನೀಡಲು ನವೋದ್ಯಮ ಎಂಬ ಹೊಸ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ. ಆಸಕ್ತರು ಕೃಷಿ ಇಲಾಖೆಯಿಂದ ಅಭಿವೃದ್ಧಿಪಡಿಸಿರುವ ಕೆ–ಕಿಸಾನ್ ವೆಬ್ ಪೇಜ್ ಮೂಲಕ ಅರ್ಜಿಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬಹುದು.

ಈ ಯೋಜನೆಯಡಿ ಮೂರು ಘಟಕಗಳಲ್ಲಿ ಪ್ರಯೋಜನ ಪಡೆಯಲು ಅವಕಾಶವಿದ್ದು, ಕೃಷಿ ನವೋದ್ಯಮಗಳಿಗೆ (ಸ್ಟಾರ್ಟ್ ಅಪ್) ಯೋಜನಾ ವರದಿಯ ಶೇ.50 ರಷ್ಟು ಸಹಾಯಧನ (ಕನಿಷ್ಠ 5 ಲಕ್ಷ ರೂ.ನಿಂದ ಗರಿಷ್ಠ 20 ಲಕ್ಷ ರೂ.ವರೆಗೆ) ದೊರೆಯಲಿದೆ. ಈಗಾಗಲೇ ಸ್ಥಾಪಿಸಲಾದ ನವೋದ್ಯಮಗಳ ವಿಸ್ತರಣೆ ಅಥವಾ ಮೇಲ್ದರ್ಜೆಗೇರಿಸಲು (Start up of business / Expansion of established startups) ಯೋಜನಾ ವರದಿಯ ಶೇ.50ರಷ್ಟು ಸಹಾಯಧನ (ಕನಿಷ್ಠ 20 ಲಕ್ಷ ರೂ.ನಿಂದ 50 ಲಕ್ಷ ರೂ.ವರೆಗೆ) ಲಭಿಸಲಿದೆ.

ಕೃಷಿ ನವೋದ್ಯಮಗಳ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮದಡಿ (Mentoring & Acceleration programme-MAP) ಆಯ್ಕೆಯಾದ ನವೋದ್ಯಮಿಗಳ ಸಾಮರ್ಥ್ಯಾಭಿವೃದ್ಧಿಗೆ ವಿಶೇಷ ತಜ್ಞರಿಂದ ತರಬೇತಿಗಳನ್ನು ನೀಡಲಾಗುವುದು (20 ಲಕ್ಷ ರೂ.ವರೆಗೆ ಅನುದಾನ ನಿಗದಿಪಡಿಸಲಾಗಿದೆ).

ಅರ್ಹತೆ, ಷರತ್ತು: ಅರ್ಜಿ ಸಲ್ಲಿಸುವ agri-startupಗಳು Private Limited company companies act 2013) ಅಥವಾ partnership form (registered under section 59 of the partnership Act, 1932) ಅಥವಾ Limited liability partnership (the Limited liability partnership Act, 2008) ಅಡಿ ಕಡ್ಡಾಯವಾಗಿ ಕರ್ನಾಟಕದಲ್ಲಿ ನೋಂದಣಿಯಾಗಿರಬೇಕು.



ನೋಂದಣಿಯಿಂದ ಇಲ್ಲಿಯವರೆಗೆ ಯಾವುದೇ ಆರ್ಥಿಕ ವರ್ಷದಲ್ಲಿ ವ್ಯವಹಾರ ಗಳಿಕೆಯು 5 ಕೋಟಿ ರೂ. ಮೀರಿರಬಾರದು. ಯಾವುದೇ ಅಗ್ರಿ ಸ್ಟಾರ್ಟ್ ಅಪ್‌ಗಳು ಕೃಷಿ ವಲಯಕ್ಕೆ ಸಂಬಂಧಿಸಿದ್ದಾಗಿರಬೇಕು. ನೂತನ ಆವಿಷ್ಕಾರಗಳು, ಉಪಯೋಗಕಾರಿ ಉತ್ಪನ್ನಗಳು ಹಾಗೂ ಸೇವೆಗಳನ್ನು ಒಳಗೊಂಡಿರುವುದೂ ಸೇರಿದಂತೆ ಉದ್ಯೋಗ ಸೃಜನೆ ಸಾಮರ್ಥ್ಯ ಹೊಂದಿರಬೇಕು.

ರೈತರು ಕೃಷಿಯೊಂದಿಗೆ ಇತರೆ ಪೂರಕ ಉಪ ಕಸುಬುಗಳಲ್ಲಿ ತೊಡಗಿಸಿಕೊಂಡು ಉದ್ಯಮಿಗಳಾಗಿ ಪರಿವರ್ತನೆ ಹೊಂದಲು ಉತ್ತೇಜನ ನೀಡುವ ಸಲುವಾಗಿ ರೈತರಿಂದ ಪ್ರಾರಂಭಿಸಲಾದ ಕೃಷಿ ನವೋದ್ಯಮಗಳಿಗೆ ಪ್ರಥಮ ಆದ್ಯತೆ ನೀಡಲಾಗುವುದು. ಇತರೆ ಇಲಾಖೆಯಲ್ಲಿ ಅಥವಾ ಯೋಜನೆಗಳಡಿ ಸಹಾಯಧನದ ಫಲಾನುಭವಿ ಆಗಿರಬಾರದು.

ಆಯ್ಕೆ ವಿಧಾನ: ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯಲ್ಲಿ ಅರ್ಜಿಗಳನ್ನು ಪರಿಶೀಲಿಸಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಧ್ಯಕ್ಷತೆಯ ಜಿಲ್ಲಾ ಮಟ್ಟದ ಚಾಲನಾ ಸಮಿತಿಗೆ ಕಳುಹಿಸಿ ಕೊಡಲಾಗುವುದು. ತದನಂತರ ಜಿಲ್ಲಾಮಟ್ಟದ ಚಾಲನಾ ಸಮಿತಿಯು ಆಯ್ಕೆಯಾದ ಅರ್ಹ ಕೃಷಿ ನವೋದ್ಯಮವನ್ನು ಪರಾಮರ್ಶಿಸಿ ರಾಜ್ಯಮಟ್ಟದ ಅನುಮೋದನಾ ಸಮಿತಿಗೆ ಅಂತಿಮ ಅನುಮೋದನೆಗಾಗಿ ಸಲ್ಲಿಸಲಿದೆ. ಕೃಷಿ ಆಯುಕ್ತರ ಅಧ್ಯಕ್ಷತೆಯ ರಾಜ್ಯ ಮಟ್ಟದ ಅನುಮೋದನಾ ಸಮಿತಿಯಲ್ಲಿ ಅಂತಿಮ ಅನುಮೋದನೆ ನೀಡಲಾಗುತ್ತದೆ ಎಂದು ಮೈಸೂರು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಹೈಟೆಕ್ ಹಾರ್ವೆಸ್ಟರ್ ಹಬ್' ಸ್ಥಾಪನೆಗೆ ಸಹಾಯಧನ

ಮೈಸೂರು: ರೈತರಿಗೆ ಬಾಡಿಗೆ ಆಧಾರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸಲು ಹೈಟೆಕ್ ಹಾರ್ವೆಸ್ಟರ್ ಹಬ್ ಸ್ಥಾಪಿಸಲು ಸಹಾಯಧನ ನೀಡುತ್ತಿದ್ದು, ಆಸಕ್ತರು ಹತ್ತಿರದ ರೈತ ಸಂಪರ್ಕ ಕೇಂದ್ರ ಮತ್ತು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಸಂಪರ್ಕಿಸಬಹುದು ಎಂದು ಮೈಸೂರು ಜಂಟಿ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2023–24ನೇ ಸಾಲಿನಲ್ಲಿ ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ವೈಯಕ್ತಿಕ ಫಲಾನುಭವಿ, ಸಂಘ–ಸಂಸ್ಥೆಗಳು (ಚಾಲ್ತಿಯಲ್ಲಿರುವ ಕೃಷಿ ಯಂತ್ರಧಾರೆ ಕೇಂದ್ರಗಳು, ಸೇವಾದಾರ ಸಂಸ್ಥೆಗಳು, ಕೃಷಿ ಯಂತ್ರೋಪಕರಣಗಳ ಬ್ಯಾಂಕ್ ಹಾಗೂ ನೋಂದಾಯಿತ ಸಂಘ–ಸಂಸ್ಥೆಗಳು) ಸಹಾಯಧನ ಪಡೆದು ಹೈಟೆಕ್ ಹಾರ್ವೆಸ್ಟರ್ ಹಬ್ ಸ್ಥಾಪಿಸಲು ಅವಕಾಶವಿದೆ. ವೈಯಕ್ತಿಕ ಫಲಾನುಭವಿಗಳಿಗೆ ಸಾಮಾನ್ಯ–ಶೇ.50ರಷ್ಟು, ವಿಶೇಷ ಘಟಕ ಯೋಜನೆಯಡಿ–ಶೇ.70ರಷ್ಟು ಸಹಾಯಧನ ಹಾಗೂ ಸಂಘ–ಸಂಸ್ಥೆಗಳಿಗೆ ಶೇ.70ರಷ್ಟು ಸಹಾಯಧನ ದೊರೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಬಹುರೂಪಿ ರಂಗೋತ್ಸವಕ್ಕೆ ನಾಟಕಗಳ ಆಹ್ವಾನ



ಮೈಸೂರು, ಜ.23– ಕರ್ನಾಟಕ ಸರ್ಕಾರದ 'ರಂಗಾಯಣ ಮೈಸೂರು' ಸಂಸ್ಥೆಯ ರಂಗ ಯೋಜನೆಯಾದ 'ಬಹುರೂಪಿ ರಾಷ್ಟ್ರೀಯ ರಂಗೋತ್ಸವ'ವನ್ನು ಮಾರ್ಚ್ 7ರಿಂದ 11ರವರೆಗೆ ರಂಗಾಯಣದ ಆವರಣದಲ್ಲಿ ನಡೆಸಲಾಗುತ್ತಿದ್ದು, ರಾಜ್ಯ ಮತ್ತು ಹೊರರಾಜ್ಯದ ರಂಗತಂಡಗಳಿಂದ ಕನ್ನಡ ಮತ್ತು ಇತರೆ ಭಾಷೆಗಳ ನಾಟಕಗಳನ್ನು ಆಹ್ವಾನಿಸಲಾಗಿದೆ.

ಉತ್ಸವದಲ್ಲಿ ಭಾಗವಹಿಸಲು ಇಚ್ಛೆಯುಳ್ಳ ರಂಗತಂಡಗಳು ರಂಗಾಯಣದ ವೆಬ್‌ಸೈಟ್ https://rangayanamysore.karnataka.gov.inನಲ್ಲಿ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ತಮ್ಮ ತಂಡ ಹಾಗೂ ನಾಟಕದ ವಿವರಗಳನ್ನು ಭರ್ತಿ ಮಾಡಿ, ನಾಟಕದ ಡಿ.ವಿ.ಡಿ ಅಥವಾ ಪೆನ್ ಡ್ರೈವ್ ಅನ್ನು ಫೆ.5 ರೊಳಗಾಗಿ ರಂಗಾಯಣಕ್ಕೆ ತಲುಪಿಸಬೇಕು. ರಂಗಾಯಣದ ಇಮೇಲ್ ವಿಳಾಸ bahuroopifestival@gmail.com ಗೆ ನಾಟಕದ ಯೂಟ್ಯೂಬ್ ಲಿಂಕ್‌ನ್ನೂ ಕಳುಹಿಸಬಹುದು. ಉತ್ಸವಕ್ಕೆ ಆಯ್ಕೆಯಾಗುವ ನಾಟಕ ತಂಡಗಳಿಗೆ ರಂಗಾಯಣದ ನಿಯಮಾನುಸಾರ ಗೌರವ ಸಂಭಾವನೆ, ಪ್ರಯಾಣ ವೆಚ್ಚ ಪಾವತಿಸಲಾಗುವುದು ಎಂದು ರಂಗಾಯಣದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಉಪವಾಸದ ಬಗ್ಗೆ ಅನುಮಾನ

ಮೊಯಿಲಿಯವರದ್ದು ಕೊಳಕು ಮನಸ್ಥಿತಿ

ಬೆಂಗಳೂರು,ಜ.23–ರಾಮಮಂದಿರ ವಿಚಾರವಾಗಿ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರ ಹೇಳಿಕೆ ಅವರ ಕೊಳಕು ಮನಃಸ್ಥಿತಿಯನ್ನು ತೋರಿಸುತ್ತದೆ ಎಂದು ಬಿಜೆಪಿ ಓಬಿಸಿ ಮೋರ್ಚಾ ರಾಜ್ಯ ಅಧ್ಯಕ್ಷ ರಘು ಕೌಟಿಲ್ಯ ಹೇಳಿದ್ದಾರೆ.

ನಗರದ ಮಲ್ಲೇಶ್ವರದಲ್ಲಿರುವ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಂಗಳವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ಅಯೋಧ್ಯೆಯಲ್ಲಿ ಬಾಲರಾಮ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಪ್ರಧಾನಿ ಮೋದಿ ಅವರ ಉಪವಾಸ ವ್ರತವನ್ನು ಅನುಮಾನಿಸಿರುವ ಬಗ್ಗೆ ಪ್ರತಿಕ್ರಿಯಿಸಿದರು.

ಪ್ರಧಾನಿ ಮೋದಿ ಅವರು ಉಪವಾಸ ವ್ರತ ಮಾಡಿರುವುದೇ ಅನುಮಾನ. ಅಷ್ಟು ದಿನ ಉಪವಾಸವಿದ್ದು ಬದುಕಲು ಸಾಧ್ಯವಿಲ್ಲ ಎಂದು ವೈದ್ಯರು ಹೇಳಿದ್ದಾರೆ. ಹಾಗೇನಾದರೂ ವ್ರತ ಮಾಡದೆ ರಾಮ ಮಂದಿರದ ಗರ್ಭಗುಡಿಗೆ ಹೋಗಿದ್ದರೆ ಅದು ಅಪವಿತ್ರವೇ ಸರಿ ಎಂದು ಮೊಯಿಲಿ ಅವರು ಹೇಳಿದ್ದಾರೆ. ಒಬ್ಬ ಹಿಂದುಳಿದ ವರ್ಗದ ಪ್ರಮುಖರಾಗಿ, ವೈಚಾರಿಕ ಹಾಗೂ ಸಾಹಿತ್ಯಕ ಹಿನ್ನೆಲೆಯಿರುವ ಅವರಿಂದ ಇಂಥ ಕೊಳಕು ಹೇಳಿಕೆಯನ್ನು ಜನರು ನಿರೀಕ್ಷಿಸಿರಲಿಲ್ಲ ಎಂದು ತಿಳಿಸಿದ್ದಾರೆ.

ಸನಾತನ ಹಿಂದೂ ಧರ್ಮದಲ್ಲಿ ಬಹು ದೊಡ್ಡ ಸುಧಾರಣೆಯ ಕ್ರಾಂತಿ ಆಗುತ್ತಿದೆ. ಸಮಾನತೆ, ನಾವೆಲ್ಲರೂ ಒಂದು, ನಾವೆಲ್ಲರೂ ಹಿಂದುಗಳು ಎಂಬ ಭಾವನೆ ಗಟ್ಟಿಗೊಳ್ಳುತ್ತಿದೆ. ಅಯೋಧ್ಯೆಯಲ್ಲಿ ಬಾಲರಾಮನ ವಿಗ್ರಹ ಪ್ರತಿಷ್ಠಾಪನೆ ಮಾಡಿರುವುದು ಹಿಂದೂ ಧರ್ಮದ ಸಮಾನತೆಯ ಸಂಕೇತವಾಗಿದೆ. ಪ್ರಧಾನಮಂತ್ರಿಗಳು ಬಾಲರಾಮನ ಪ್ರತಿಷ್ಠೆ ಮಾಡಿದ್ದು, ಇಡೀ ಜಗತ್ತಿನ ಹಿಂದೂಗಳ ಪಾಲಿಗೆ ಅತ್ಯಂತ ಸಂಭ್ರಮದ ಸಂಗತಿಯಾಗಿದೆ. ಇದನ್ನು ವೀರಪ್ಪ ಮೊಯಿಲಿಯವರು ಪ್ರಶಂಸೆ ಮಾಡಬೇಕಿತ್ತು ಎಂದು ರಘು ಹೇಳಿದ್ದಾರೆ.

> “ಸನಾತನ ಹಿಂದೂ ಧರ್ಮದಲ್ಲಿ ಭಗವಂತನನ್ನು ಒಪ್ಪಿಕೊಳ್ಳಲು, ಅಪ್ಪಿಕೊಳ್ಳಲು, ಆರಾಧಿಸಲು ಅವಕಾಶವಿದೆ. ಆದರೆ, ವೀರಪ್ಪ ಮೊಯಿಲಿ ಅವರು ಹತಾಶೆಯಿಂದ ಈ ರೀತಿ ಹೇಳಿಕೆ ನೀಡಿದ್ದಾರೆ. ಈ ಮೂಲಕ ಅವರ ಘನತೆ ತಗ್ಗಿದಂತಾಗಿದೆ. ತಮ್ಮ ಸಂಸ್ಕಾರಕ್ಕೆ ತಾವೇ ಮಸಿ ಬಳಿದುಕೊಂಡಿದ್ದಾರೆ. ಮೊಯಿಲಿ ಅವರ ಹೇಳಿಕೆಯನ್ನು ಯಾರೂ ಒಪ್ಪುವುದಿಲ್ಲ. ಇದಕ್ಕೆ ಜನರೇ ಸರಿಯಾದ ಉತ್ತರ ನೀಡುತ್ತಾರೆ.
> –ರಘು ಕೌಟಿಲ್ಯ, ಬಿಜೆಪಿ ಓಬಿಸಿ ಮೋರ್ಚಾ ರಾಜ್ಯ ಅಧ್ಯಕ್ಷ





ಹೆಚ್.ಡಿ.ಕೋಟೆ ತಾಲೂಕು ವ್ಯಾಪ್ತಿಯ ಕಾಕನಕೋಟೆ ಸಫಾರಿ ಕೇಂದ್ರದಿಂದ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಂತರಸಂತೆ ವಲಯದಲ್ಲಿ ಸಫಾರಿ ವಾಹನದ ಬಳಿಯೇ ಹುಲಿ, ಎದೆ ಝಲ್ ಎನಿಸುವ ಮಿಂಚಿನ ವೇಗದಲ್ಲಿ ಎರಗಿ ಲಂಗೂರ್(ಕೋತಿ)ವೊಂದನ್ನು ಬೇಟೆಯಾಡಿತು. ಈ ದೃಶ್ಯದಿಂದ ಪ್ರವಾಸಿಗರು ಕೆಲಕ್ಷಣ ತಬ್ಬಿಬ್ಬಾದರು. ಚಿತ್ರ: ಎಂ.ಎಸ್.ಲಕ್ಷ್ಮೀನಾರಾಯಣ ಯಾದವ್

ಮುಡಾ ಆಸ್ತಿ ಉಳಿಸಲು ನನ್ನ ನಿರಂತರ ಹೋರಾಟ

ಮೈಸೂರು, ಜ.23– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಆಸ್ತಿ ರಕ್ಷಿಸುವ ನಿಟ್ಟಿನಲ್ಲಿ ನನ್ನ ಹೋರಾಟವನ್ನು ನಿಲ್ಲಿಸುವ ಪ್ರಶ್ನೆಯೇ ಇಲ್ಲ ಎಂದು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಇಂದಿಲ್ಲಿ ಪುನರುಚ್ಚರಿಸಿದ್ದಾರೆ.



ಕೆ.ಹರೀಶ್‌ಗೌಡ

ದಟ್ಟಗಳ್ಳಿ ಗ್ರಾಮದ ವಿವಾದಿತ 27.34 ಎಕರೆ ಜಮೀನು ಸಂಬಂಧ ಮುಡಾದ 20–3–2023ರ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸ್ಥಿರೀಕರಣಗೊಳಿಸಿರುವ ಸಂಬಂಧ ಅಂದಿನ ಸದಸ್ಯರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಕೆ.ಹರೀಶ್‌ಗೌಡರು, ತಾಕತ್ ಇದ್ರೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಹೇಳಿದ್ದಾರೆ. ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಳ್ಳುವುದೇಕೆ? ಎಂದು ಪ್ರಶ್ನಿಸಿದ್ದಾರೆ.

ಸಿಬಿಐ ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ. ಈ ಸಂಬಂಧ ನಾನು ಪ್ರಧಾನ ಮಂತ್ರಿಗಳಿಗೂ ಪತ್ರ ಬರೆಯುತ್ತೇನೆ. ಆದರೆ ಈಗಾಗಲೇ ನ್ಯಾಯಾಂಗ ತನಿಖೆ ಆಗಬೇಕೆಂದು ನಿರ್ಣಯಿಸಲಾಗಿದ್ದು, ಇದು ನೂರಕ್ಕೆ ನೂರು ಆಗುತ್ತದೆ. 20–3–2023ರ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸ್ಥಿರೀಕರಣಗೊಳಿಸಲು ಕೆಲ ದಿನಗಳ ಹಿಂದಿನ ಪ್ರಾಧಿಕಾರದ ಸಭೆಯಲ್ಲೇ ನಿರ್ಧಾರವಾಗಿದೆ. ಅಂದಿನ ಸಭೆಯಲ್ಲಿದ್ದ ಮರಿತಿಬ್ಬೇಗೌಡರು ಸೇರಿದಂತೆ ಎಲ್ಲಾ ಸದಸ್ಯರು ಸಹಮತಿಸಿದ್ದಕ್ಕೆ ನಾನು ವಿರೋಧ ವ್ಯಕ್ತಪಡಿಸಿದ್ದೇನೆ ಎಂದು ಹೇಳಿದರು.

ಜನರ ಆಶೀರ್ವಾದವೇ ನನ್ನ ತಾಕತ್ತು. ರಾಜಕೀಯ ನಿವೃತ್ತಿ ಪಡೆಯಲು ಸನ್ಯಾಸಿಯಲ್ಲ. ನನಗಿನ್ನೂ 50 ವರ್ಷ. ಹೋರಾಟದಿಂದ ರಾಜಕೀಯದಲ್ಲಿ ಬೆಳೆದು ಬಂದವನು. ಸರ್ಕಾರದ ಆಸ್ತಿ ಉಳಿಸಲು, ಜನರ ಕೆಲಸ ಮಾಡಲು ನನ್ನನ್ನು ಆಯ್ಕೆ ಮಾಡಿದ್ದಾರೆ. ನನ್ನನ್ನು ಯಾವುದೇ ರೀತಿಯಲ್ಲಿ ಟಾರ್ಗೆಟ್ ಮಾಡಿದರೂ ಬಗ್ಗುವುದಿಲ್ಲ. ನನ್ನ ಹೋರಾಟ ತಡೆಯಲು ಸಾಧ್ಯವಿಲ್ಲ. ಪ್ರಾಧಿಕಾರದ ಆಸ್ತಿ ಉಳಿಸುವ ಕಾರ್ಯವನ್ನು ಪ್ರಾಮಾಣಿಕತೆಯಿಂದ ಮಾಡುತ್ತೇನೆ. ಈಗಾಗಲೇ ಪ್ರಕರಣ ತಾರ್ಕಿಕ ಅಂತ್ಯದ ಹಂತ ತಲುಪಿದೆ. ಹೈಕೋರ್ಟ್ ನಿವೃತ್ತ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆದ ನಂತರ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ ಎಂದು ಶಾಸಕರು ತಿಳಿಸಿದರು.



ಮೈಸೂರಿನ ವಾರ್ಡ್ ನಂ.23 (ಸುಬ್ಬರಾಯನಕೆರೆ)ರ ಹತ್ತು ಜನಗಳ ಶ್ರೀ ಲೋಕಾಭಿರಾಮಮಂದಿರದಲ್ಲಿ ಶ್ರೀ ಸೀತಾ ಲಕ್ಷ್ಮಣ ಹನುಮಾನ್ ಸಹಿತ ಶ್ರೀ ಲೋಕಾಭಿರಾಮ ಚಂದ್ರ ಮೂರ್ತಿಯ 30ನೇ ವರ್ಷದ ವಾರ್ಷಿಕ ಮಹೋತ್ಸವದ ಅಂಗವಾಗಿ ಶ್ರೀ ಗಣಪತಿ ಹೋಮ, ಶ್ರೀ ರಾಮ ತಾರಕ ಹೋಮ, ಮಹಾಮಂಗಳಾರತಿ ತೀರ್ಥ ಪ್ರಸಾದ ಹಾಗೂ ಅನ್ನ ಸಂತರ್ಪಣಾ ಕಾರ್ಯಕ್ರಮ ನಡೆಯಿತು. ಮೈಸೂರು ಬಿಜೆಪಿ ನಗರಾಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ, ಶ್ರೀ ಲೋಕಾಭಿರಾಮಮಂದಿರ ಸಮಿತಿ ಅಧ್ಯಕ್ಷ ನಾಗೇಶ್, ಮಾಜಿ ಕಾರ್ಪೋರೇಟರ್ ಶಂಕರಪ್ಪ, ಮುಖಂಡರಾದ ಸತ್ಯನಾರಾಯಣ್, ಇರೇಗೌಡ, ಮಹೇಶ್, ಗೋಪಾಲಕೃಷ್ಣ, ಲೋಹಿತ್, ರವಿ, ಸಚಿನ್, ಪ್ರಶಾಂತ್, ದಿನೇಶ್‌ಗೌಡ, ವೆಂಕಟೇಶ್, ಮೊಹಲ್ಲಾ ನಿವಾಸಿಗಳು ಇದ್ದರು.

ಮೂರೂವರೆ ದಶಕದ ಜನತಾ ಪರಿವಾರ ಬಾಂಧವ್ಯಕ್ಕೆ ಕೆ.ವಿ.ಮಲ್ಲೇಶ್ ಸ್ವಯಂ ಬ್ರೇಕ್

ಜೆಡಿಎಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ

ಮೈಸೂರು, ಜ.23(ಎಸ್‌ಬಿಡಿ)– ಮೈಸೂರಿನ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಿಂದ ಎರಡು ಬಾರಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಜೆಡಿಎಸ್ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.



ಕೆ.ವಿ.ಮಲ್ಲೇಶ್


ಜೆಡಿಎಸ್ ರಾಜ್ಯಾಧ್ಯಕ್ಷರಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಕಳುಹಿಸಿರುವ ಸುದೀರ್ಘ ರಾಜೀನಾಮೆ ಪತ್ರದಲ್ಲಿ ಜನತಾ ಪರಿವಾರದೊಂದಿಗೆ ತಮ್ಮ ಪಯಣ, ಪಕ್ಷದ ಜವಾಬ್ದಾರಿ ನಿರ್ವಹಣೆ ಸೇರಿದಂತೆ ಹಲವು ವಿಚಾರಗಳನ್ನು ಸ್ಮರಿಸಿಕೊಂಡಿದ್ದಾರೆ.

ಜನತಾ ಪರಿವಾರದೊಂದಿಗೆ ಕಳೆದ ಮೂರೂವರೆ ದಶಕಗಳಿಂದ ಹೊಂದಿದ್ದ ರಾಜಕೀಯ ನಂಟನ್ನು ಕರುಳ ಸಂಬಂಧವನ್ನು ಕಡಿದುಕೊಳ್ಳುವ ಸಂದರ್ಭ ಬಂದಿದೆ. ಅತ್ಯಂತ ಬೇಸರ, ವಿಷಾದದಿಂದ ಜಾತ್ಯತೀತ ಜನತಾದಳದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿದ್ದೇನೆ. ಪಕ್ಷ ನನಗೆ ಅನೇಕ ಜವಾಬ್ದಾರಿಗಳನ್ನು ನೀಡಿತ್ತು. ಎರಡು ಬಾರಿ ಮೈಸೂರು ನಗರಪಾಲಿಕೆ ಸದಸ್ಯನಾಗುವ ಮತ್ತು ಎರಡು ಬಾರಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸುವ ಅವಕಾಶವನ್ನು ಕಲ್ಪಿಸಿತ್ತು. ಅದಕ್ಕೆ ಕಾರಣರಾದ ಪಕ್ಷದ ಎಲ್ಲ ಹಿರಿಯರಿಗೆ, ಕ್ಷೇತ್ರದ ಮತದಾರರಿಗೆ, ರಾಜಕೀಯ ಹಿತೈಷಿಗಳಿಗೆ ಕೃತಜ್ಞತೆಗಳು.

> “ಕಳೆದೆರಡು ವಿಧಾನಸಭಾ ಚುನಾವಣೆಗಳಲ್ಲಿ ಟಿಕೆಟ್ ನೀಡಿ, ಕೈ ತೊಳೆದುಕೊಂಡ ಪಕ್ಷದ ಉನ್ನತ ಮತ್ತು ಸ್ಥಳೀಯ ಮಟ್ಟದ ನಾಯಕರು ರಾಜಕೀಯ 'ಒಳ ಒಪ್ಪಂದ' ಮಾಡಿಕೊಂಡು ನನ್ನನ್ನು ಅನೇಕ ಸಂಕಷ್ಟಗಳಿಗೀಡು ಮಾಡಿದರು. ಯಾರದೋ ಲಾಭಕ್ಕೆ, ಚಿತಾವಣೆಗೆ ನಾನು ದಾಳವಾದೆನಲ್ಲ ಎಂಬ ದಯನೀಯ ಸ್ಥಿತಿ ಸೃಷ್ಟಿಸಿದರು. ಈಗ ಪಕ್ಷ ಬಿಡಬೇಡಿ ಎಂದು ಸಲಹೆ ನೀಡಿರುವ ಹಿತೈಷಿಗಳಿಗೆ ಧನ್ಯವಾದಗಳು. ಟಿಕೆಟ್ ಘೋಷಿಸುವ ಮೊದಲು ಇಂಥದೇ 'ಲಾಭ'ದ ಅಭಯ ನೀಡಿದ್ದರು. ಆದರೆ, ವಾಸ್ತವದಲ್ಲಿ ಆಗಿದ್ದೇ ಬೇರೆ. ಮತ್ತೆ ಮತ್ತೆ 'ನಂಬಿ ಕೆಡುವಷ್ಟು' ವ್ಯವಧಾನ, ರಾಜಕೀಯ 'ಚಾಣಾಕ್ಷ'ತನ ನನಗಿಲ್ಲ. ಆದ್ದರಿಂದ ಅನಿವಾರ್ಯವಾಗಿ ಪಕ್ಷವನ್ನು ತೊರೆಯುತ್ತಿದ್ದೇನೆ. ಕೊನೆಯದಾಗಿ, ನಾನು ಯಾರನ್ನೂ ದ್ವೇಷಿಸುವುದು ಇಲ್ಲ, ದೂಷಿಸುವುದೂ ಇಲ್ಲ. ಈವರೆಗೆ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದಗಳು ಎಂದು ತಿಳಿಸಿದ್ದಾರೆ. –ಕೆ.ವಿ.ಮಲ್ಲೇಶ್



ಸೋಮವಾರ ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನಾ ನೆರವೇರಿದ ಹಿನ್ನೆಲೆಯಲ್ಲಿ ಮೈಸೂರಿನ ಸರಸ್ವತಿಪುರಂನಲ್ಲಿರುವ ಪತ್ರಿಕೆ ವಿತರಣಾ ಕೇಂದ್ರದಲ್ಲಿ ಶ್ರೀ ರಾಮಚಂದ್ರನ ಭಾವಚಿತ್ರಕ್ಕೆ ಪತ್ರಿಕಾ ವಿತರಕರು ಭಕ್ತಿ ಭಾವದಿಂದ ವಿಶೇಷ ಪೂಜೆ ನೆರವೇರಿಸಿದರು.



ಆದಿಜಾಂಬವ ಅಭಿವೃದ್ಧಿ ಸಮಿತಿ ವತಿಯಿಂದ ಮೈಸೂರಿನ ಗಾಂಧಿನಗರದ ಶ್ರೀರಾಮ ಮಂದಿರದಲ್ಲಿ ವಿಶೇಷ ಅಲಂಕಾರ, ಪೂಜೆ, ಭಜನೆ ಮತ್ತು ಪ್ರಸಾದ ವಿತರಿಸಲಾಯಿತು. ಈ ವೇಳೆ ಸಮಿತಿ ಕಾರ್ಯದರ್ಶಿ ಕೃಷ್ಣಮೂರ್ತಿ, ಖಜಾಂಚಿ ರಂಗಸ್ವಾಮಿ, ಸಹ ಕಾರ್ಯದರ್ಶಿ ರಂಗಸ್ವಾಮಿ, ರಾಮಣ್ಣ, ಕೃಷ್ಣ, ಪಣೀಂದ್ರ , ನಾರಾಯಣ, ಮಲ್ಲೇಶ್, ಬಸಣ್ಣ, ರವಿ, ರಾಜಣ್ಣ, ಶತೀಸ, ಮೂರ್ತಿ, ರಂಗ, ರೇವಣ್ಣ, ಇತರರು ಉಪಸ್ಥಿತರಿದ್ದರು.

ಮೇಲುಕೋಟೆ ಬಳಿ ಶಿಕ್ಷಕಿ ದೀಪಿಕಾ ನಾಪತ್ತೆ; ಹತ್ಯೆ ಪ್ರಕರಣ

ಪರಿಚಯಸ್ಥ ಯುವಕನಿಂದಲೇ ಹತ್ಯೆ: ಪೋಷಕರ ಶಂಕೆ

ಮಂಡ್ಯ, ಜ.23– ಸೋಮವಾರ (ಜ.22) ಇಡೀ ಜಿಲ್ಲೆಯನ್ನೇ ಬೆಚ್ಚಿ ಬೀಳಿಸಿದ್ದ ಪಾಂಡವಪುರ ತಾಲೂಕಿನ ಮಾಣಿಕ್ಯನಹಳ್ಳಿ ಗ್ರಾಮದ ಶಿಕ್ಷಕಿ ದೀಪಿಕಾ (28) ನಾಪತ್ತೆ ಮತ್ತು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಚಯಸ್ಥ ಯುವಕನಿಂದಲೇ ಹತ್ಯೆಯಾಗಿರುವ ಶಂಕೆಯನ್ನು ಕುಟುಂಬಸ್ಥರು ಹಾಗೂ ಪೊಲೀಸರು ವ್ಯಕ್ತಪಡಿಸಿದ್ದಾರೆ.

ಮಾಣಿಕ್ಯನಹಳ್ಳಿ ಗ್ರಾಮದ ಸಮಾಜ ಸೇವಕ ವೆಂಕಟೇಶ್ ಎಂಬುವವರ ನಾಲ್ಕನೇ ಪುತ್ರಿ ದೀಪಿಕಾ ಮೇಲುಕೋಟೆಯ ಖಾಸಗಿ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದರು. ಕಳೆದ ಶನಿವಾರ ಶಾಲೆಗೆ ಹೋದ ದೀಪಿಕಾ ಮನೆಗೆ ವಾಪಸ್ಸಾಗಿರಲಿಲ್ಲ. ಅವರ ತಂದೆ ವೆಂಕಟೇಶ್ ಮೇಲುಕೋಟೆ ಠಾಣೆಗೆ ದೀಪಿಕಾ ನಾಪತ್ತೆಯಾಗಿರುವ ಬಗ್ಗೆ ದೂರು ನೀಡಿದ್ದರು. ಸೋಮವಾರ ಮಧ್ಯಾಹ್ನ ಮೇಲುಕೋಟೆಯ ಯೋಗನರಸಿಂಹಸ್ವಾಮಿ ಬೆಟ್ಟದ ತಪ್ಪಲಿನಲ್ಲಿ ಹೂತಿರುವ ಸ್ಥಿತಿಯಲ್ಲಿ ದೀಪಿಕಾ ಮೃತದೇಹ ಪತ್ತೆಯಾಗಿತ್ತು. ನಾಪತ್ತೆ ಪ್ರಕರಣವನ್ನು ಪೊಲೀಸರು ಹತ್ಯೆ ಪ್ರಕರಣವಾಗಿ ದಾಖಲಿಸಿಕೊಂಡು, ತನಿಖೆ ಆರಂಭಿಸಿದ್ದಾರೆ. ಎಸ್ಪಿ, ಎಸಿ, ತಹಸೀಲ್ದಾರ್ ನೇತೃತ್ವದಲ್ಲಿ ದೀಪಿಕಾ ಶವವನ್ನು ಹೊರತೆಗೆದು ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ, ವಾರಸುದಾರರಿಗೆ ದೇಹ ನೀಡಿದ್ದು, ಪಂಚನಾಮೆ ವೇಳೆ ಕೆಲ ಸ್ಯಾಂಪಲ್‌ಗಳನ್ನು ಸಂಗ್ರಹಿಸಿ, ಲ್ಯಾಬ್‌ಗೆ ಹೆಚ್ಚಿನ ಪರೀಕ್ಷೆಗಾಗಿ ಕಳುಹಿಸಲಾಗಿದೆ.



ದೀಪಿಕಾ

ಗ್ರಾಮದ ಹುಡುಗನ ಮೇಲೆ ಅನುಮಾನ: ಈ ಮಧ್ಯೆ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದ್ದು, ಮಾಣಿಕ್ಯನಹಳ್ಳಿ ಗ್ರಾಮದಲ್ಲಿ ದೀಪಿಕಾ ಹಾಗೂ ಅವರ ಕುಟುಂಬಸ್ಥರಿಗೆ ಗೊತ್ತಿರುವ 21 ವರ್ಷದ ಯುವಕನೇ ಹತ್ಯೆ ಮಾಡಿದ್ದಾನೆ ಎಂದು ದೀಪಿಕಾ ಕುಟುಂಬಸ್ಥರು ಗಂಭೀರ ಆರೋಪ ಮಾಡಿದ್ದಾರೆ. ಪರಿಚಯಸ್ಥ ಹುಡುಗನಾಗಿದ್ದ ಕಾರಣ ದೀಪಿಕಾ ಮನೆಯವರು ಆತನನ್ನು ಅಕ್ಕರೆಯಿಂದ ಕಾಣುತ್ತಿದ್ದರು. ದೀಪಿಕಾ ನಾಪತ್ತೆಯಾಗುವ ಮುನ್ನ ಆಕೆಯ ಮೊಬೈಲ್‌ಗೆ ಕರೆಯೊಂದು ಬಂದಿದ್ದು, ಆ ಕರೆ ಆ ಹುಡುಗನೇ ಮಾಡಿದ್ದ ಎಂದು ಹೇಳಲಾಗಿದೆ. ಇದರ ಜೊತೆಗೆ ದೀಪಿಕಾ ಮೃತದೇಹ ಸಿಗುತ್ತಿದ್ದಂತೆ ಆ ಯುವಕ ನಾಪತ್ತೆಯಾಗಿದ್ದಾನೆ. ಆತ ದೀಪಿಕಾರನ್ನು ಅಕ್ಕ ಅಕ್ಕ ಎಂದು ಕರೆಯುತ್ತಿದ್ದ. ಕೊಲೆಗೂ ಮುನ್ನ ಬೆಟ್ಟದ ತಪ್ಪಲಿನಲ್ಲಿ ದೀಪಿಕಾ, ಯುವಕನೊಂದಿಗೆ ಜಗಳವಾಡುತ್ತಿದ್ದನ್ನು ಪ್ರವಾಸಿಗರೊಬ್ಬರು ವೀಡಿಯೋ ಮಾಡಿ, ಈ 13 ಸೆಕೆಂಡ್‌ಗಳ ವಿಡಿಯೋವನ್ನು ಪೊಲೀಸರಿಗೆ ನೀಡಿದ್ದಾರೆ.

ಆದರೆ ನಾಪತ್ತೆ ದೂರು ನೀಡಿದ್ದರೂ, ಜಗಳದ ವಿಡಿಯೋ ಸಿಕ್ಕಿದ್ದರೂ ನಾಪತ್ತೆಯಾದ ದಿನವೇ ಮೇಲುಕೋಟೆ ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದರೆ ಅಂದೇ ನಾಪತ್ತೆಯಾದ ದೀಪಿಕಾಳನ್ನು ಪತ್ತೆ ಹಚ್ಚಬಹುದಿತ್ತು ಎಂಬ ಮಾತುಗಳು ಸ್ಥಳೀಯರಿಂದ ಕೇಳಿಬಂದಿದೆ. ಒಟ್ಟಾರೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಪತ್ತೆಗೆ 2 ವಿಶೇಷ ತಂಡಗಳನ್ನು ಜಿಲ್ಲಾ ಪೊಲೀಸ್ ಇಲಾಖೆ ರಚಿಸಿದ್ದು, ಆರೋಪಿಯ ಬಂಧನಕ್ಕೆ ಬಲೆ ಬೀಸಲಾಗಿದೆ.

> “ಕಳೆದ ಶನಿವಾರ ದೀಪಿಕಾ ನಾಪತ್ತೆ ಬಗ್ಗೆ ದೂರು ದಾಖಲಾಗಿತ್ತು. ಬೆಟ್ಟದ ಹಿಂಭಾಗ ಮಹಿಳೆ ಓಡಾಡುತ್ತಿದ್ದರು ಎಂದು ಸ್ಥಳೀಯರು ಮಾಹಿತಿ ಕೊಟ್ಟಿದ್ದು, ಬಳಿಕ ಪೊಲೀಸರು ಸುತ್ತಮುತ್ತ ಹುಡುಕಾಟ ಮಾಡಿದಾಗ ಸ್ಕೂಟರ್ ಸಿಕ್ಕಿದೆ. ನಂತರ ಅಕ್ಕ–ಪಕ್ಕ ಹುಡುಕಾಟ ನಡೆಸಲಾಗಿತ್ತು ಆಗ ದುರ್ವಾಸನೆ ಬರುತ್ತಿದ್ದ ಸ್ಥಳದಲ್ಲಿ ಮಣ್ಣು ತೆಗೆದು ನೋಡಿದಾಗ ಗೋಣಿಚೀಲದಲ್ಲಿ ಶವ ಪತ್ತೆಯಾಗಿದೆ. ಆಕೆಯ ಪೋಷಕರು ಶವ ದೀಪಿಕಾದ್ದೆ ಎಂದು ಗುರುತಿಸಿದ್ದಾರೆ. ಸದ್ಯ ನಾವು ಕೊಲೆ ಪ್ರಕರಣ ದಾಖಲಿಸಿ ಆರೋಪಿಗಾಗಿ ಹುಡುಕಾಟ ನಡೆಸಿದ್ದೇವೆ. ಹಲವು ಆಯಾಮಗಳಲ್ಲಿ ಈ ಪ್ರಕರಣ ತನಿಖೆ ಮಾಡುತ್ತಿದ್ದು, ಕಾಣೆಯಾಗಿರುವ ಅದೇ ಗ್ರಾಮದ ಹುಡುಗನನ್ನು ಹುಡುಕುತ್ತಿದ್ದೇವೆ. ಅಂದು ಒಂದು ವಿಡಿಯೋವನ್ನು ಪ್ರವಾಸಿಗರು ನೀಡಿದ್ದರು. ಆ ವಿಡಿಯೋವನ್ನು ಆಧಾರವಾಗಿಟ್ಟುಕೊಂಡು ತನಿಖೆ ಮಾಡುತ್ತಿದ್ದೇವೆ.
> –ಎನ್.ಯತೀಶ್, ಜಿಲ್ಲಾ ಎಸ್‌ಪಿ

ಇಂದು ಪ್ರವಚನ, ಆಶೀರ್ವಚನ

ಮೈಸೂರು, ಜ.23– ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಸ್ವಾಮಿ ಸುಹಿತಾನಂದ ಜೀ ಮಹಾರಾಜ್ ಅವರು ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಸಭಾಂಗಣದಲ್ಲಿ ಜ.24ರಂದು ಸಂಜೆ 6ಕ್ಕೆ ವಿಶೇಷ ಪ್ರವಚನ ಹಾಗೂ ಆಶೀರ್ವಚನ ನೀಡಲಿದ್ದಾರೆ ಎಂದು ಆಶ್ರಮದ ಪ್ರಕಟಣೆ ತಿಳಿಸಿದೆ.

ನಕ್ಕರೆ ಅದೇ ಸ್ವರ್ಗ

ಆತ : "ನಿಮಗೆ ಶನಿವಾರ ಅಶುಭ ಅಂತ ಅನಿಸುವುದಿಲ್ಲ ತಾನೆ?"
ಗೆಳೆಯ : "ಹಾಗೇನಿಲ್ಲ, ಯಾಕೆ?"
ಆತ : "ಇವತ್ತು ಶನಿವಾರ, ನನಗೆ ಎರಡು ಸಾವಿರ ರೂಪಾಯಿ ಸಾಲ ಕೊಡ್ತೀರಾ"

ಮೈಸೂರು ಮಿತ್ರ
ಬುಧವಾರ, 24 ಜನವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ತಪ್ಪು ದಾರಿಯಿಂದ ಗಳಿಸಿಕೊಂಡ ಅಧಿಕಾರದಿಂದ ಒಳ್ಳೆಯದನ್ನು ಸಾಧಿಸುವುದು ಅಸಾಧ್ಯ. – ಟೆನಿಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬರಗಾಲದಲ್ಲಿ ಅಧಿಕ ಮಾಸ ಬಂದಂತೆ

ನಿಮ್ಮ ಪತ್ರಗಳು

ರಾಮಮಂದಿರ ಆಯ್ತು, ರಾಮರಾಜ್ಯ ಯಾವಾಗ?

ಮಾನ್ಯರೆ,

ಶತಮಾನಗಳ ಕನಸಿನಂತೆ ಉತ್ತರಪ್ರದೇಶದ ಐತಿಹಾಸಿಕ ನಗರಿ ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣಗೊಂಡು, ಬಾಲ ರಾಮನ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮವು ಪ್ರಧಾನಿ ನರೇಂದ್ರಮೋದಿಯವರಿಂದ ನೆರವೇರಿದೆ. ಆ ಮೂಲಕ ಕೋಟ್ಯಂತರ ಭಾರತೀಯರು ಕಂಡ ಕನಸು ಈಗ ನನಸಾಗಿದೆ. ರಾಮಮಂದಿರವೇನೋ ಆಯಿತು. ಆದರೆ ರಾಮರಾಜ್ಯದ ಕನಸು ನನಸಾಗುವುದು ಯಾವಾಗ?

ರಾಮಾಯಣದಲ್ಲಿ ಶ್ರೀರಾಮನು ಲಂಕಾದಲ್ಲಿ ರಾವಣನನ್ನು ಕೊಂದು ಅಯೋಧ್ಯೆಗೆ ಹಿಂದಿರುಗಿದ ನಂತರ ರಾಮರಾಜ್ಯವನ್ನು ಸ್ಥಾಪಿಸಲಾಯಿತು. ಅಯೋಧ್ಯೆಯ ರಾಜನಾಗಿ ಅವನು ಎಲ್ಲರೂ ಸಂತೋಷವಾಗಿರುವ ರಾಜ್ಯವನ್ನು ರಚಿಸುತ್ತಾನೆ. ಈ ರಾಮರಾಜ್ಯದ ವಿವರಣೆಯು ಇಂದು ನಮಗೆ ರಾಮರಾಜ್ಯವಾಗಿ ಕಾಣಿಸುತ್ತಿದೆ. ಇಂದು ಭಾರತ ಜಗತ್ತಿನ ನಕ್ಷೆಯಲ್ಲಿ ಪ್ರಬಲ ಸ್ಥಾನಮಾನವನ್ನು ಹೊಂದಿದೆ. ಭಾರತ ರಾಮರಾಜ್ಯವಾಗಬೇಕಾದರೆ ಎಲ್ಲಾ ಪ್ರಜೆಗಳು ಸಂತೋಷವಾಗಿರುವ ಮತ್ತು ಉದ್ಯೋಗದಲ್ಲಿರುವ ಯಾವುದೇ ಭಯೋತ್ಪಾದನೆ, ಕಳ್ಳತನ ಕೋಮು ಗಲಭೆಗಳಿಗೆ ಆಸ್ಪದ ಇಲ್ಲದಂತೆ ನೋಡಿಕೊಂಡು, ಯಾವುದೇ ನಾಗರಿಕರು ಎಂದಿಗೂ ಹಸಿವಿನಿಂದ ಮಲಗುವ ಅಗತ್ಯತೆ ಇಲ್ಲದಾಗಬೇಕಿದೆ. ದೇಶವನ್ನಾಳುವ ಆಡಳಿತಗಾರ ಬುದ್ಧಿವಂತ, ಪ್ರಾಮಾಣಿಕ ಮತ್ತು ಎಲ್ಲಾ ಧರ್ಮದವರನ್ನು ಸಮಾನವಾಗಿ ರಕ್ಷಿಸಲು ಸಶಕ್ತ ಹಾಗೂ ಸಮರ್ಥನಾಗಿರ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ದೇಶದ ಪ್ರತಿಯೊಬ್ಬ ಮತದಾರ ಜಾಗೃತನಾಗಬೇಕಾಗಿದೆ.

ಗಾಂಧಿಜೀಯವರ ಪ್ರಕಾರ ರಾಮರಾಜ್ಯ ಸಮಾಜವನ್ನು ಸೃಷ್ಟಿಸುವುದು ಮತ್ತು ಅಭಿವೃದ್ಧಿಪಡಿಸುವುದಾಗಿದೆ. ಸಮಾನತೆ ಮತ್ತು ಪಾರದರ್ಶಕತೆ ಮುಖ್ಯ ಪರಿಕಲ್ಪನೆಯಾಗಿರಬೇಕು. ಗ್ರಾಮವು ತನ್ನದೇ ಆದ ಸಂಪನ್ಮೂಲಗಳಿಂದ ತನ್ನ ಅವಶ್ಯಕತೆಗಳನ್ನು ಪೂರೈಸಲು ಸ್ವತಂತ್ರ ಮತ್ತು ಸ್ವಾವಲಂಬಿ ಘಟಕವಾಗಿರಬೇಕು. ನಗರಗಳು ಮತ್ತು ಹಳ್ಳಿಗಳು ಅಚ್ಚುಕಟ್ಟಾಗಿ ಮತ್ತು ಸ್ವಚ್ಛವಾಗಿರಬೇಕು. ನೈರ್ಮಲ್ಯವು ಒಂದು ಪ್ರಮುಖ ಅಂಶವಾಗಬೇಕಿದೆ.

ಈ ಎಲ್ಲಾ ಅಂಶಗಳ ಈಡೇರಿಕೆಗೆ ಕೇಂದ್ರ ಹಾಗೂ ರಾಜ್ಯದ ಪ್ರತಿಯೊಬ್ಬ ನಾಯಕರು, ತಮ್ಮ ಉತ್ತಮ ಚಾರಿತ್ರ್ಯ ಹಾಗೂ ಪ್ರಾಮಾಣಿಕತೆಯಿಂದ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದೇ ಆದಲ್ಲಿ, ರಾಮನ ರಾಮರಾಜ್ಯ ಹಾಗೂ ಗಾಂಧೀಜಿಯವರು ಕನಸು ಕಂಡ ರಾಮರಾಜ್ಯ ಇವೆರಡನ್ನೂ ಸಾಕಾರಗೊಳಿಸುವ ನಿಟ್ಟಿನಲ್ಲಿ ದೇಶದ ಪ್ರತಿಯೊಬ್ಬರು ಶ್ರಮಿಸಬೇಕಿದೆ. ಆ ಮೂಲಕ ರಾಮಮಂದಿರ ಪ್ರತಿಷ್ಠಾಪನೆ ಆದರಷ್ಟೇ ಸಾಲದು, ರಾಮರಾಜ್ಯದ ಕನಸು ಕೂಡ ನನಸಾಗಬೇಕೆಂಬುದು ಪ್ರತಿಯೊಬ್ಬ ಭಾರತೀಯನ ಆಶಯವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ,

■ ಇನ್ನೂ ಜೀವಂತವಾಗಿರುವ ಜೀತ ಪದ್ಧತಿ

ಮಾನ್ಯರೆ,

ಪೊಲೀಸ್ ಅಧಿಕಾರಿಗಳು ಮನೆಯಲ್ಲಿ ಪೊಲೀಸ್ ಪೇದೆಗಳನ್ನು ತಮ್ಮ ವೈಯಕ್ತಿಕ ದೈನಂದಿನ ಕೆಲಸಗಳಿಗಾಗಿ ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿರುವುದು ಈಗಲೂ ಮುಂದುವರಿದಿದೆ. ಈ ಹಿಂದೆ ಇಂತಹ ಆರ್ಡರ್ಲಿ ಕೆಲಸಗಳಿಗೆ ಪೊಲೀಸ್ ಪೇದೆಗಳನ್ನು ಬಳಸಬಾರದೆಂದು ಆದೇಶ ನೀಡಿದ್ದರೂ ಅದರಿಂದ ಏನೂ ಪ್ರಯೋಜನವಾದಂತೆ ಕಾಣುತ್ತಿಲ್ಲ.

ಅಧಿಕಾರಿಗಳ ಮನೆಯಲ್ಲಿ ಪೊಲೀಸ್ ಪೇದೆಗಳು ಅಡುಗೆ ಮಾಡುವುದು, ತರಕಾರಿ ತರುವುದು, ಮಕ್ಕಳು ಮತ್ತು ಪತ್ನಿಯನ್ನು ಶಾಲೆ, ಕಾಲೇಜು ಮತ್ತು ಶಾಪಿಂಗ್‌ಗೆ ಕರೆದುಕೊಂಡು ಹೋಗುವುದು, ಅಧಿಕಾರಿಯ ಮನೆಯ ಸುತ್ತ ಇರುವ ಗಾರ್ಡನ್‌ಗೆ ನೀರು ಹಾಕುವುದು ಇತ್ಯಾದಿ... ಕೆಲಸಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಎಸ್‌ಪಿಗಳು, ಕಮೀಷನರ್‌ಗಳ ಮನೆಯಲ್ಲಿ 10 ರಿಂದ 20 ಪೇದೆಗಳು ಈ ರೀತಿಯ ಕೆಲಸಗಳನ್ನು ಮಾಡುತ್ತಿರುವುದು ಕಂಡು ಬರುತ್ತದೆ.

ಹೇಗಿದೆ ನೋಡಿ ಈ ಅಧಿಕಾರಿಗಳ ದರ್ಬಾರು. ಈ ಅಧಿಕಾರಿಗಳ ಮನೆ ಕೆಲಸ ಮಾಡುವ ಪೇದೆಗಳಿಗೆ ನೀಡುವ ಸಂಬಳ ಸಾರ್ವಜನಿಕರ ದುಡ್ಡು. ಯಾರದ್ದೋ ದುಡ್ಡು ಎಲ್ಲಮ್ಮನ ಜಾತ್ರೆ. ಈ ರೀತಿ ಅಧಿಕಾರಿಗಳ ಮನೆ ಕೆಲಸ ಮಾಡುವ ಪೇದೆಗಳಿಗೆ ಸಾರ್ವಜನಿಕರ ಹಣವನ್ನು (ಸರ್ಕಾರದಿಂದ) ಏಕೆ ನೀಡಬೇಕು?

ರಾಜ್ಯಾದ್ಯಂತ ಈ ರೀತಿ ಸುಮಾರು 4000 (ನಾಲ್ಕು ಸಾವಿರ) ಪೇದೆಗಳು ಸಾರ್ವಜನಿಕ ಸೇವೆ ಮಾಡುವುದು ಬಿಟ್ಟು ಅಧಿಕಾರಿಗಳ ಸೇವೆಯಲ್ಲಿ ತೊಡಗಿದ್ದಾರೆ. ತರಕಾರಿ ತಂದು ಅಡುಗೆ ಮಾಡುವ ಪೇದೆಯ ಸಂಬಳ 50,000 ದಿಂದ 60,000 ದಷ್ಟು ಇರುತ್ತದೆ. (ಸರ್ವೀಸ್ ಜಾಸ್ತಿ ಆಗಿದ್ದರೆ). ಈ ರೀತಿ 20 ಮಂದಿ ಪೇದೆಗಳು ಒಬ್ಬ ಅಧಿಕಾರಿಯ ಮನೆಯಲ್ಲಿದ್ದರೆ ಅವರ ಒಟ್ಟು ತಿಂಗಳ ಸಂಬಳ 10 ಲಕ್ಷದಷ್ಟು ಆಗುತ್ತದೆ. ಇದು ಸಾರ್ವಜನಿಕರ ಹಣದ ದುರುಪಯೋಗವಲ್ಲವೆ?

ಆದ್ದರಿಂದ ತಕ್ಷಣ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಮಂತ್ರಿಗಳು ಈ ಕಡೆ ಗಮನಹರಿಸಿ ಸಾರ್ವಜನಿಕರ ಹಣದಲ್ಲಿ ಆಗುತ್ತಿರುವ ಅಧಿಕಾರಿಗಳ ದರ್ಬಾರ್ ಮತ್ತು ಪೇದೆಗಳ ಜೀತಪದ್ಧತಿಗೆ ಇತಿಶ್ರೀ ಹಾಡಬೇಕಿದೆ.

–ಶೈಲೇಂದ್ರ ಭಟ್, ಕುವೆಂಪುನಗರ, ಮೈಸೂರು.

■ ಕೋಟ್ಯಂತರ ಭಾರತೀಯರ ಕನಸು ನನಸು

ಮಾನ್ಯರೆ,

ಅಯೋಧ್ಯೆಯಲ್ಲಿ ಬಾಲ ಶ್ರೀ ರಾಮಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಮಾಡುವ ಮೂಲಕ ಕೋಟ್ಯಂತರ ಭಾರತೀಯರು ನೂರಾರು ವರ್ಷಗಳಿಂದ ಕಾತರಿಸುತ್ತಿದ್ದ ಕನಸು ನನಸಾಗಿದೆ.

ಪ್ರತಿಷ್ಠಾಪನಾ ಸಮಾರಂಭದಲ್ಲಿ ಭಾಗವಸಿದ್ಧ ಪ್ರಧಾನಿ ನರೇಂದ್ರ ಮೋದಿಯವರು "ಇಂದಿನಿಂದ ಹೊಸ ಇತಿಹಾಸ ಉದಯವಾಗಲಿದೆ. ನಮ್ಮ ದೇಶ ಗುಲಾಮಿ ಮನಸ್ಥಿತಿಯನ್ನು ಮೀರಿ ನಿಂತಿದೆ. ಜ. 22 ಇದು ಕೇವಲ ದಿನಾಂಕ ಅಲ್ಲ. ಹೊಸ ಕಾಲಚಕ್ರದ ಉದಯ. ದೇಶದಲ್ಲಿ ಇಂದು ಪ್ರತಿ ದಿನವೂ ಒಂದು ವಿಶ್ವಾಸ ಮೂಡುತ್ತಿದೆ. ಇಂದು ನಮ್ಮ ರಾಮ ಬಂದಿದ್ದಾನೆ. ಇಂದು ನಮ್ಮ ರಾಮ ಟೆಂಟ್‌ನಲ್ಲಿ ಇಲ್ಲ. ದಿವ್ಯ ಮಂದಿರದಲ್ಲಿ ವಿರಾಜಮಾನನಾಗಿದ್ದಾನೆ. ಪ್ರಭು ಶ್ರೀರಾಮನನ್ನು ನಾನು ಕ್ಷಮೆ ಯಾಚಿಸುತ್ತೇನೆ. ಇಷ್ಟು ವರ್ಷಗಳ ಕಾಲ ಸಮಯ ತೆಗೆದುಕೊಂಡದ್ದಕ್ಕೆ ಕ್ಷಮೆ ಯಾಚಿಸುವೆ" ಎಂದು ಹೇಳಿದ್ದಾರೆ.

ಶ್ರೀ ರಾಮನ ವಿಚಾರದಲ್ಲಿ ಬಿಜೆಪಿ, ಕಾಂಗ್ರೆಸ್ ಎರಡೂ ರಾಜಕೀಯ ಮಾಡಿವೆ. ಇದರ ರಾಜಕೀಯ ಲಾಭ ಪಡೆಯಲು ಬಿಜೆಪಿ ಯಶಸ್ವಿಯಾಗಿದೆ. ಅದೇ ರೀತಿ ಪ್ರತಿಷ್ಠಾಪನಾ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಆಹ್ವಾನ ನೀಡಿದರೂ ಅದನ್ನು ನಿರಾಕರಿಸುವ ಮೂಲಕ ಬಹುಸಂಖ್ಯಾತ ಭಾರತೀಯರ ಭಾವನೆಗಳಿಗೆ ಧಕ್ಕೆ ತಂದಿರುವುದನ್ನು ಕಾಂಗ್ರೆಸ್ ಒಪ್ಪಿಕೊಂಡಂತಾಗಿದೆ.

ಹಾಗೆಯೇ ದೇಶಾದ್ಯಂತ ಜನರು ಸಂಭ್ರಮದಿಂದ ಆಚರಿಸಿದ ಶ್ರೀ ರಾಮ ಪ್ರತಿಷ್ಠಾಪನೆಯನ್ನು ಕರ್ನಾಟಕ ಮುಂತಾದ ರಾಜ್ಯಗಳು ರಜೆ ನೀಡಲು ತಮ್ಮದೇ ಆದ ಸಂಕುಚಿತ ಲೆಕ್ಕಾಚಾರದ ಕಾರಣ ನಿರಾಕರಿಸುವ ಮೂಲಕ ಜನರ ಭಾವನೆಯನ್ನು ಅರ್ಥ ಮಾಡಿಕೊಳ್ಳಲು ವಿಫಲ ವಾದದ್ದು ವಿಷಾದನೀಯ. ರಾಜಕೀಯ ಪಕ್ಷಗಳ ಸರ್ಕಾರಗಳ ಪ್ರತಿಯೊಂದು ನಡೆಯನ್ನೂ ಶ್ರೀ ಸಾಮಾನ್ಯ ಗಮನಿಸುತ್ತಿರುತ್ತಾನೆ ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

–ಮುಳ್ಳೂರು ಪ್ರಕಾಶ್, ಮೈಸೂರು



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಶ್ರೀರಾಮನ ಕಂಡು ಧನ್ಯರಾದೆವು

ಆಪದಾಮಪ ಹರ್ತಾರಂ
ದಾತಾರಂ ಸರ್ವ ಸಂಪದಾಮ್।
ಲೋಕಾಭಿರಾಮಂ ಶ್ರೀರಾಮಂ
ಭೂಯೋ ಭೂಯೋ ನಮಾಮ್ಯಹಮ್॥

ಹದಿನಾಲ್ಕು ವರ್ಷಗಳ ವನವಾಸವನ್ನು ಮುಗಿಸಿ ಶ್ರೀರಾಮನು ಅಯೋಧ್ಯೆಗೆ ಹಿಂದಿರುಗಿ ಸೀತಾಸಮೇತನಾಗಿ ರತ್ನಖಚಿತವಾಗಿದ್ದ ಸ್ವರ್ಣ ಸಿಂಹಾಸನವನ್ನು ಅಲಂಕರಿಸಿದಾಗ ಅಂದಿನ ಅಯೋಧ್ಯಾ ನಿವಾಸಿಗಳಿಗೆ ಆಗಿದ್ದ ಆನಂದ ಇದೇ ಇಪ್ಪತ್ತೆರಡನೆಯ ತಾರೀಖು ಭವ್ಯ ಶ್ರೀರಾಮ ಮಂದಿರದಲ್ಲಿ ಬಾಲರಾಮನ ದಿವ್ಯ ಪ್ರತಿಮೆಯನ್ನು ಪ್ರಾಣ ಪ್ರತಿಷ್ಠಾಪನೆಯಿಂದ ಪ್ರಧಾನಮಂತ್ರಿಗಳು ಲೋಕಕ್ಕೆ ಅರ್ಪಿಸಿದ ಕ್ಷಣದಲ್ಲಿ ಲಕ್ಷಾಂತರ–ಕೋಟ್ಯಾಂತರ ರಾಮಭಕ್ತರಿಗೆ ಆಯಿತು. ತ್ರೇತಾಯುಗದಲ್ಲಿ, ಅಯೋಧ್ಯೆಯಲ್ಲಿ ಅಂದು ಎಷ್ಟು ಸಹಸ್ರ ಜನರು ರಾಮನನ್ನು ನೋಡಿ ಕೃತಾರ್ಥರಾದರೋ ನಮಗೆ ತಿಳಿಯದು. ಇಂದು ವಿಜ್ಞಾನದ ಮಹಿಮೆಯಿಂದ ಸುಮಾರು ನೂರೈವತ್ತು ಕೋಟಿ ಸಂಖ್ಯೆಯ ಜನ ಭಾರತದಲ್ಲೂ, ಇತರ ದೇಶಗಳಲ್ಲೂ ನೇರವಾಗಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನೆಯನ್ನು ನೋಡುವ ಸದವಕಾಶವನ್ನು ಪಡೆದರು. ಈ ಕಾಲದಲ್ಲಿ, ಈ ದಿನದಲ್ಲಿ ಬದುಕಿರುವ ನಾವು ಧನ್ಯರು. ನಮ್ಮ ಹಿಂದಿನ ಪೀಳಿಗೆಯ ಜನರು ಎಷ್ಟು ಶ್ರೇಷ್ಠ ರಾಮ ಭಕ್ತರಾಗಿದ್ದರೂ ಅಯೋಧ್ಯೆಯ ರಾಮ ಜನ್ಮಭೂಮಿಯಲ್ಲಿ ರಾಮ ಮಂದಿರದ ನಿರ್ಮಾಣವನ್ನು ಕಾಣುವ ಭಾಗ್ಯವನ್ನು ಹೊಂದಿರಲಿಲ್ಲ. ಇದು ಭಾರತದ ಐತಿಹಾಸಿಕ ಕ್ಷಣ.

ಇಂದು ಅಯೋಧ್ಯೆ ವಿಶ್ವದ ಕೇಂದ್ರವಾಗಿತ್ತು. ನಮ್ಮ ದೇಶದಲ್ಲಿ ಮಾತ್ರವಲ್ಲ, ಪ್ರಪಂಚದ ನಾನಾ ದೇಶಗಳಲ್ಲಿ ರಾಮ ಭಕ್ತರು ಹಾಡಿದರು, ಕುಣಿದರು, ಭಜನೆ ಮಾಡಿದರು, ಸಂಭ್ರಮಿಸಿದರು. ಪ್ರತಿಯೊಂದು ಊರಿನಲ್ಲೂ ಹಬ್ಬದ ವಾತಾವರಣವಿತ್ತು. ವಾಲ್ಮೀಕಿ ಮಹರ್ಷಿಗಳು **'ರಾಮ ಭೂತಂ ಜಗತ್ ಸರ್ವಂ'** ಎಂದು ಹೇಳಿದ್ದಾರೆ. ಜಗತ್ತೆಲ್ಲಾ ರಾಮ ಮಯವಾಯಿತು ಎಂದು ಅದರ ಅರ್ಥ. ಸೋಮವಾರ (22–1–2024) ಹಾಗೆ ಆಗಿದ್ದುದು ಸತ್ಯ. ಎಲ್ಲ ದೇವಾಲಯಗಳಲ್ಲೂ ವಿಶೇಷ ಪೂಜೆಗಳು ನಡೆದುವು. ರಾಮಮಂದಿರಗಳಲ್ಲಿ ಜನಸಂದಣಿ. ಸಂಜೆಯಲ್ಲಿ ಎಲ್ಲೆಲ್ಲೂ ದೀಪಾವಳಿ. ಸರಯೂ ನದಿಯ ತೀರದಲ್ಲಿ ಲಕ್ಷ ದೀಪೋತ್ಸವ. ಶ್ರೀರಾಮನಲ್ಲಿ ಜನರ ಭಕ್ತಿ ಎಷ್ಟು ದೃಢವಾದುದು ಎಂಬುದಕ್ಕೆ ಜನರ ಸಂಭ್ರಮವೇ ಸಾಕ್ಷಿಯಾಗಿತ್ತು. ಜನರ ಐಕ್ಯವನ್ನು ತರಲು ರಾಮನ ಹೆಸರೇ ಸಾಕು ಎನ್ನುವಂತಾಗಿತ್ತು.

ಕನ್ನಡಿಗರಿಗಂತೂ ಇದು ಹೆಮ್ಮೆಯ ವಿಷಯ. ಉತ್ತರ ಪ್ರದೇಶದಲ್ಲಿ ನಿರ್ಮಿತವಾಗುತ್ತಿರುವ ದೇವಸ್ಥಾನದ ಬುನಾದಿಗೆ ಬೇಕಾದ ಗಟ್ಟಿ ಕಲ್ಲುಗಳು ಕನ್ನಡ ನಾಡಿನವೇ. ಅಷ್ಟೇ ಅಲ್ಲದೆ ಶ್ರೀರಾಮನ ಮೂರ್ತಿಯನ್ನು ಮಾಡಲು ಬಳಸಿದ ಶಿಲೆಯೂ ಕನ್ನಡ ನಾಡಿನಿಂದ ಕಳುಹಿಸಲ್ಪಟ್ಟುದೇ. ವಿಗ್ರಹವನ್ನು ಕೆತ್ತಿದ ಶಿಲ್ಪಿಯೂ ಕನ್ನಡಿಗನೇ. ಅಖಿಲ ಭಾರತದಲ್ಲಿ ಶ್ರೇಷ್ಠ ಶಿಲ್ಪಿಗಳು ನಮ್ಮಲ್ಲೇ ಇದ್ದಾರೆ ಎಂಬುದೂ ಸಂತಸದ ವಿಷಯ.

ಇದಕ್ಕೆಲ್ಲ ಕಾರಣ ಶ್ರೀರಾಮನ ವ್ಯಕ್ತಿತ್ವ, ಅವನ ಶ್ರೇಷ್ಠ ಗುಣಗಳು. ರಾಮಾಯಣದ ಪ್ರಾರಂಭದಲ್ಲೇ ಇದು ವ್ಯಕ್ತವಾಗುತ್ತದೆ. ನಾರದನನ್ನು ಕಂಡ ವಾಲ್ಮೀಕಿ ಮಹರ್ಷಿಗಳು ಕೇಳಿದ ಪ್ರಶ್ನೆ ಹೀಗಿತ್ತು–

ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್
ಕಶ್ಚ ವೀರ್ಯವಾನ್।
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥
ಚಾರಿತ್ರೇಣ ಚ ಕೋ ಯುಕ್ತಃ ಸರ್ವಭೂತೇಷು
ಕೋ ಹಿತಃ ?
ವಿದ್ವಾನ್ ಕಃ ಕಃ ಸಮರ್ಥಶ್ಚ ಕಶ್ಚೈಕ ಪ್ರಿಯದರ್ಶನಃ?॥
ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್
ಕೋನಸೂಯಕಃ?



ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ
ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ।
ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂ
ವಿಧಂ ನರಮ್॥

"ನಾರದ ಮಹರ್ಷಿಯೆ, ಈಗ ಈ ಪ್ರಪಂಚದಲ್ಲಿ ಗುಣವಂತನೂ, ವೀರ್ಯವಂತನೂ, ಧರ್ಮಜ್ಞನೂ, ಕೃತಜ್ಞನೂ, ಸತ್ಯ ವಾಕ್ಯನೂ, ದೃಢವ್ರತನೂ, ಒಳ್ಳೆಯ ಚಾರಿತ್ರವುಳ್ಳವನೂ, ಎಲ್ಲ ಜೀವಿಗಳಿಗೆ ಹಿತನಾದವನೂ, ವಿದ್ವಾಂಸನೂ, ಸಮರ್ಥನೂ, ನೋಡಲು ಇಷ್ಟವಾಗುವವನೂ, ಆತ್ಮವಂತನೂ, ಕೋಪವನ್ನು ಗೆದ್ದವನೂ, ಕಾಂತಿಯುಕ್ತನೂ, ಅಸೂಯಾರಹಿತನೂ ಯಾರು? ಯುದ್ಧದಲ್ಲಿ ಯಾವನು ರೋಷಾವಿಷ್ಟನಾದಾಗ ದೇವತೆಗಳೂ ಹೆದರುತ್ತಾರೆ? ಇಂತಹ ವ್ಯಕ್ತಿಯ ವಿಷಯವನ್ನು ಕೇಳಲು ನನಗೆ ಅತ್ಯಂತ ಕುತೂಹಲ. ನಾರದ ಮಹರ್ಷಿ, ಇಂತಹ ಮನುಷ್ಯನು ಯಾರೆಂಬುದನ್ನು ತಿಳಿದುಕೊಳ್ಳಲು ನೀನು ಮಾತ್ರ ಸಮರ್ಥನಾಗಿರುವೆ. ದಯೆಯಿಟ್ಟು ತಿಳಿಸು.

ಇಲ್ಲಿ ಗಮನಿಸಬೇಕಾದ ವಿಚಾರವೇನೆಂದರೆ, ಈ ಗುಣಗಳನ್ನು ಹೊಂದಿರುವ ದೇವರು ಯಾರು ಎಂದು ವಾಲ್ಮೀಕಿಯು ಕೇಳಲಿಲ್ಲ. ಅಂತಹ ನರನನ್ನು ತಿಳಿದುಕೊಳ್ಳಲು ನಾನು ಇಷ್ಟಪಟ್ಟಿರುವೆ ಎಂದೇ ಕೇಳಿದ್ದಾನೆ. ಇದಕ್ಕೆ ಉತ್ತರವಾಗಿ ನಾರದನು ಕೊಟ್ಟ ಉತ್ತರ ಇಂತಿದೆ –

ಬಹವೋ ದುರ್ಲಭಾಶ್ಚೈವ ಯೇ ತ್ವಯಾ ಕಥಿತಾ ಗುಣಾಃ
ಮುನೇ ವಕ್ಷ್ಯಾಮ್ಯಹಂ ಬುದ್ಧ್ವಾ ತೈರ್ಯುಕ್ತಃ
ಶ್ರೂಯತಾಂ ನರಃ ॥

ಎಲೈ ಮುನಿ, ನೀನು ಹೇಳಿದ ಗುಣಗಳು ಅನೇಕವಾಗಿವೆ ಮತ್ತು ಅವು ದುರ್ಲಭವಾದ ಗುಣಗಳು. ಆದರೂ ಚೆನ್ನಾಗಿ ನಾನು ಯೋಚಿಸಿ ಈಗ ಹೇಳುತ್ತೇನೆ. ಆ ಗುಣಗಳನ್ನೆಲ್ಲ ಹೊಂದಿದ ಮನುಷ್ಯನು ಯಾರೆಂದು ಕೇಳು.

ಉತ್ತರದಲ್ಲೂ ನರಃ ಎಂಬ ಪದವೇ ಬಂದಿದೆಯೆಂದು ಸಹೃದಯ ವಾಚಕರು ಗಮನಿಸಬೇಕು. ವಾಲ್ಮೀಕಿಯ ಪ್ರಶ್ನೆಯಲ್ಲಿ ಹದಿನಾರು ಗುಣಗಳನ್ನು ನಮೂದಿಸಲಾಗಿದೆ. ಇಕ್ಷ್ವಾಕು ವಂಶದಲ್ಲಿ ಹುಟ್ಟಿರುವ ರಾಮನಲ್ಲಿ ಈ ಗುಣಗಳಷ್ಟೇ ಅಲ್ಲದೆ ಇನ್ನೂ ಅನೇಕ ಗುಣಗಳಿವೆ ಎಂದು ನಾರದನು ಹೇಳುತ್ತಾನೆ. ಶ್ರೀಮದ್ರಾಮಾಯಣವನ್ನು ಆದ್ಯಂತವಾಗಿ ಪಠಿಸಿದರೆ, ಈ ಎಲ್ಲ ಗುಣಗಳು ರಾಮನಲ್ಲಿದ್ದುದು ಸ್ಪಷ್ಟವಾಗಿ ಕಂಡು ಬರುತ್ತದೆ. ಹೀಗೆ ಗುಣವಂತರಾಗಿ ಜಗದ್ವಂದ್ಯರಾದವರೇ ದೇವತೆಗಳೆಂದು ಪೂಜಿಸಲ್ಪಡುತ್ತಾರೆ.

ಅಥವಾ ಭಗವಂತನೇ ಭೂಮಿಯಲ್ಲಿ ಅವತರಿಸಿ ಮನುಷ್ಯನಾದನೆಂದರೂ ಅದೂ ಸರಿಯೆ. ಮರ್ತ್ಯ ರೂಪದಲ್ಲಿ ಬಂದಾಗ ಆ ಭಗವಂತನೂ ಸಾಮಾನ್ಯ ಮನುಷ್ಯನಂತೆ ನಡೆದುಕೊಳ್ಳಬೇಕು. ಅವನು ಆದರ್ಶ ವ್ಯಕ್ತಿಯಾಗಿ ಬಾಳಿ ಇತರರಿಗೆ ಮಾದರಿಯಾಗಿರಬೇಕು. ಇದನ್ನೇ ಪಾಲಿಸಿ ತೋರಿಸಲು ಮನುಷ್ಯ ರೂಪದಲ್ಲಿ ಭಗವಂತನ ಅವತಾರ. ಇದನ್ನು ಶ್ರೀಮದ್ ಭಾಗವತದಲ್ಲೂ ಪ್ರತಿಪಾದಿಸಲು ಈ ನುಡಿಯಿದೆ.–

ಮರ್ತ್ಯಾವತಾರ ಸ್ತ್ವಿಹ ಮರ್ತ್ಯ ಶಿಕ್ಷಣಂ।
ರಕ್ಷೋವಧಾಯೈವ ನ ಕೇವಲಂ ವಿಭೋಃ ॥

(ಪರಮಾತ್ಮನು ಮನುಷ್ಯ ರೂಪದಲ್ಲಿ ಅವತರಿಸುವುದು ಕೇವಲ ರಾಕ್ಷಸರನ್ನು ಕೊಲ್ಲುವುದಕ್ಕಲ್ಲ, ಅವನ ಮುಖ್ಯ ಉದ್ದೇಶ ಮನುಷ್ಯರಿಗೆ ಶಿಕ್ಷಣವನ್ನು ಕೊಡುವುದು.).

ಇದರಂತೆ ಮಗನಾಗಿ ಶ್ರೀರಾಮನು ಪಿತೃವಾಕ್ಯ ಪರಿಪಾಲಕ, ಅಣ್ಣನಾಗಿ ತಮ್ಮಂದಿರಲ್ಲಿ ವಾತ್ಸಲ್ಯವನ್ನು ತೋರಿಸಿದವನು, ರಾಜನಾಗಿ ಪ್ರಜೆಗಳ ರಕ್ಷಣೆಯನ್ನು ಮಾಡಿದವನು, ಧರ್ಮ ಪರಿಪಾಲಕನಾಗಿ ದುಷ್ಟರನ್ನು ಸಂಹರಿಸಿದವನು, ಶೂರನಾಗಿ ಶತ್ರುಗಳನ್ನು ಸೋಲಿಸಿದವನು. ಶತ್ರುಗಳೂ ಅವನನ್ನು **'ರಾಮೋ ವಿಗ್ರಹವಾನ್ ಧರ್ಮಃ'** (ರಾಮನೆಂದರೆ ಶರೀರವನ್ನು ಧರಿಸಿದ ಧರ್ಮ) ಎಂದು ಕರೆದರು.

ವಾಲ್ಮೀಕಿ ಮಹರ್ಷಿ ಸಂಸ್ಕೃತದಲ್ಲಿ ರಚಿಸಿದ ರಾಮಾಯಣದ ಕಥೆಯನ್ನು ಆಧಾರವಾಗಿಟ್ಟುಕೊಂಡು ತಮ್ಮ ತಮ್ಮ ಪ್ರತಿಭೆಯನ್ನು ಅನುಸರಿಸಿ ನೂರಾರು ಕವಿಗಳು ನಾನಾ ಭಾಷೆಗಳಲ್ಲಿ ಕಾವ್ಯಗಳನ್ನು ಬರೆದಿದ್ದಾರೆ. ಕನ್ನಡದಲ್ಲಿ ನರಹರಿಯ ತೊರವೆ ರಾಮಾಯಣ, ತಮಿಳಿನಲ್ಲಿ ಕಂಬ ರಾಮಾಯಣ, ಬಂಗಾಳಿಯಲ್ಲಿ ಕೃತ್ತಿವಾಸ ರಾಮಾಯಣ, ಹಿಂದಿಯಲ್ಲಿ ತುಲಸೀದಾಸರ ರಾಮಚರಿತ ಮಾನಸ ಇತ್ಯಾದಿ.

'ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ" ಎಂಬ ನುಡಿಯನ್ನು ಕೇಳದವರಾರು? ರಾಮನ ವಿಷಯದಲ್ಲೇ ಕವಿಗಳು ಮತ್ತೆ ಮತ್ತೆ ಏಕೆ ಬರೆಯುತ್ತಾರೆಂದರೆ ರಾಮನಂತಹ ಗುಣವಂತ ಇನ್ನೊಬ್ಬನಿಲ್ಲ. ಅಂತಹ ಪರಿಪೂರ್ಣ ವ್ಯಕ್ತಿ, ಮರ್ಯಾದಾ ಪುರುಷೋತ್ತಮ ಬೇರೆ ಎಲ್ಲಿದ್ದಾನೆ? ಆದ್ದರಿಂದಲೇ ರಾಮನು ಎಲ್ಲರಿಗೂ ಇಷ್ಟವಾಗುವುದು, ಎಲ್ಲರಿಗೂ ವಂದನೀಯ.

ಕೆಲವರು ರಾಮರಾಜ್ಯ ಮತ್ತೆ ಬರಲಿ ಎನ್ನುವುದುಂಟು. ಯಾವ ಅಭಿಪ್ರಾಯವನ್ನಿಟ್ಟುಕೊಂಡು ಅವರು ಹಾಗೆನ್ನುವರೋ ನಮಗೆ ತಿಳಿಯದು. ಐದು ಸಾವಿರ ವರ್ಷಗಳ ಹಿಂದೆ ಇದ್ದ ರಾಜ್ಯಭಾರ ಕ್ರಮ ಇಂದು ಹೊಂದುವುದೆ? ಆಗ ವಂಶಪಾರಂಪರ್ಯದಿಂದ ಬಂದ ರಾಜಪ್ರಭುತ್ವ ಇತ್ತು. ಇಂದು ಬೇಕಾಗಿರುವುದು ಪ್ರಜಾಪ್ರಭುತ್ವ. ವಿಜ್ಞಾನದ ಪ್ರಗತಿಯಿಂದ ಈಗ ಪ್ರಪಂಚದ ಸ್ವರೂಪವೇ ಭಿನ್ನವಾಗಿದೆ. ಆ ಕಾಲದ ಪ್ರಪಂಚ ಭಾರತದ ಸುತ್ತಮುತ್ತ ಇದ್ದ ಪ್ರದೇಶಗಳಿಗೆ ಸೀಮಿತವಾಗಿತ್ತು. ಈಗ ಪ್ರಪಂಚ ವಿಶಾಲವಾಗಿದೆ. ಪರದೇಶಗಳೊಡನೆ ಈಗ ಸಂಬಂಧಗಳನ್ನು ಹೊಂದಿಸುವುದು ಸಂಕೀರ್ಣವಾಗಿದೆ. ಹಿಂದಿನ ಸಾಮಾಜಿಕ ನಿಯಮಗಳು ಈಗ ಅರ್ಥಹೀನವಾಗಿವೆ. ಅನ್ಯಾಯ, ಅಧರ್ಮ, ಶೋಷಣೆ, ವಂಚನೆ ಇಲ್ಲದ, ಸರ್ವರಿಗೂ ಸಮಾನಾವಕಾಶ ಇರುವ ಉಚ್ಚ–ನೀಚ ಭಾವನಾರಹಿತವಾದ ರಾಜ್ಯವೇ ರಾಮರಾಜ್ಯ ಎನ್ನುವುದಾದರೆ ಅಂತಹ ರಾಜ್ಯ ಬರಲಿ. ರಾಮನೇ ಅನುಸರಿಸಿದ ಜೀವನ ಮೌಲ್ಯಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳೋಣ. ರಾಮಭಕ್ತಿ ನಮ್ಮ ಉಸಿರಾಗಿರಲಿ.


ರಾಮಾಯ ರಾಮಭದ್ರಾಯ ರಾಮಚಂದ್ರಾಯ ವೇಧಸೇ।
ರಘುನಾಥಾಯ ನಾಥಾಯ ಸೀತಾಯಾಃ ಪತಯೇ ನಮಃ॥

ಸ್ಸಾರಿ... 3000 ಬದಲು 30000 ಕಳಿಸಿದ್ದೇನೆ ಬಾಕಿ ಹಣ ಕೂಡಲೇ ಕಳಿಸಿ...!!

● ಔಷಧಿ ವ್ಯಾಪಾರಿಗಳಿಗೆ ಸೈಬರ್ ವಂಚನೆ ಜಾಲದ ಹೊಸ ಡಿಮ್ಯಾಂಡ್ ● ಇಂತಹ ಮೆಸೇಜ್ ಬಂದರೆ ಪೂರ್ಣ ಪರಿಶೀಲಿಸದೇ ವ್ಯವಹರಿಸಬೇಡಿ; ಔಷಧಿ ವ್ಯಾಪಾರಿಗಳ ಸಂಘದ ಎಚ್ಚರಿಕೆ

ಮೈಸೂರು,ಜ.23(ಎಸ್‌ಬಿಡಿ)–ಆನ್‌ಲೈನ್ ಮೂಲಕ ಹೆಚ್ಚುವರಿ ಹಣ ಪಾವತಿಸಿರುವುದಾಗಿ ನಕಲಿ ಸಂದೇಶ (ಮೆಸೇಜ್) ಸೃಷ್ಟಿಸಿ, ಔಷಧಿ ವ್ಯಾಪಾರಿಗಳನ್ನು ವಂಚಿಸುತ್ತಿರುವ ಜಾಲ ಹವ್ಯಾತವಾಗಿದ್ದು, ಈ ಬಗ್ಗೆ ಎಚ್ಚರ ವಹಿಸುವಂತೆ ಮೈಸೂರು ನಗರ ಮತ್ತು ಜಿಲ್ಲಾ ಚಿಲ್ಲರೆ ಔಷಧಿ ವ್ಯಾಪಾರಿಗಳ ಸಂಘ ತಿಳಿಸಿದೆ.

ಇತ್ತೀಚಿನ ದಿನಗಳಲ್ಲಿ ಸೈಬರ್ ಕ್ರೈಂ ವಂಚನೆಗಳು ಹೆಚ್ಚಾಗುತ್ತಿದ್ದು, ವಾರದಲ್ಲಿ ಸುಮಾರು 10 ಮಂದಿ ಔಷಧಿ ವ್ಯಾಪಾರಿಗಳು ವಂಚನೆಗೆ ಬಲಿಯಾಗಿ ಲಕ್ಷಾಂತರ ಹಣವನ್ನು ಕಳೆದುಕೊಂಡಿದ್ದಾರೆ. ಹೇಗೋ ಔಷಧಿ ವ್ಯಾಪಾರಿಗಳ ಮೊಬೈಲ್ ನಂಬರ್ ಕಲೆಹಾಕಿ ವಂಚಕರು ಕರೆ ಮಾಡುತ್ತಾರೆ. ಹಿಂದಿಯಲ್ಲಿ ಮಾತನಾಡುವ ಅವರು ತಮ್ಮನ್ನು ಮಿಲಿಟರಿ ಅಧಿಕಾರಿ ಎಂದು ಪರಿಚಯಿಸಿಕೊಂಡು, ತುರ್ತಾಗಿ ಔಷಧಿಗಳ ಅವಶ್ಯಕತೆಯಿದೆ ಎನ್ನುತ್ತಾರೆ. ವಾಟ್ಸ್ ಆಪ್‌ನಲ್ಲಿ ವಿವರ ಕಳುಹಿಸುತ್ತೇನೆ, ಕೂಡಲೆ ರೆಡಿ ಮಾಡಿ. ಬಿಲ್ ಮೊತ್ತವನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡುತ್ತೇನೆ. ನಮ್ಮ ಕಾರಿನ ಡ್ರೈವರ್ ಬಂದು ಔಷಧಿ ಪಡೆದುಕೊಳ್ಳುತ್ತಾರೆ ಎಂದು ನಂಬಿಸುತ್ತಾರೆ.



ಔಷಧಿ ವ್ಯಾಪಾರಿ 3 ಸಾವಿರ ಬಿಲ್ ಕಳುಹಿಸಿದ ತಕ್ಷಣವೇ ಆ ವ್ಯಕ್ತಿ ಮತ್ತೆ ಕರೆ ಮಾಡಿ, 3 ಸಾವಿರದ ಬದಲಾಗಿ 30 ಸಾವಿರ ಹಣವನ್ನು ನಿಮಗೆ ಕಳುಹಿಸಿದ್ದೇನೆ. ಅಚಾತುರ್ಯದಿಂದ ನಾಲ್ಕು ಸೊನ್ನೆ ಟೈಪ್ ಮಾಡಿಬಿಟ್ಟೆ, ದಯವಿಟ್ಟು ಔಷಧಿಯ 3 ಸಾವಿರ ಹಣ ಇಟ್ಟುಕೊಂಡು ಉಳಿದ 27 ಸಾವಿರ ರೂ.ಗಳನ್ನು ವಾಪಸ್ಸು ಕಳುಹಿಸಿ ಎನ್ನುತ್ತಾನೆ. ಅಲ್ಲದೆ ಸದರಿ ಮೆಡಿಕಲ್ಸ್ ಹೆಸರಿನಲ್ಲಿ 30 ಸಾವಿರ ರೂ. ಹಣ ಸಂದಾಯವಾಗಿರುವಂತೆ ನಕಲಿ ಮೆಸೇಜ್ ಸೃಷ್ಟಿಸಿ, ಕಳುಹಿಸುತ್ತಾನೆ. ನನಗೆ ತುರ್ತು ಕೆಲಸವಿದೆ, ಈಗಲೇ ಹೆಚ್ಚುವರಿ ಹಣವನ್ನು ವಾಪಸ್ಸು ಕಳುಹಿಸಿ ಎಂದು ಒತ್ತಾಯಿಸಿ, ಕರೆ ಕಟ್ ಮಾಡುತ್ತಾನೆ.

ವ್ಯಾಪಾರದ ಒತ್ತಡದಲ್ಲಿ ತಮ್ಮ ಆನ್‌ಲೈನ್ ಹಣ ವರ್ಗಾವಣೆ ಹಾಗೂ ಬ್ಯಾಂಕ್ ಖಾತೆ ವಿವರವನ್ನು ಪರಿಶೀಲಿಸಲಾಗದೆ ಆತ ಕಳುಹಿಸಿದ್ದ ಮೆಸೇಜ್ ಅನ್ನೇ ನೈಜವೆಂದು ನಂಬಿ, ಹಣ ಕಳುಹಿಸಿ ವಂಚನೆಗೊಳಗಾಗುತ್ತಿದ್ದಾರೆ. ನಿಮಗೆ ಸತ್ಯ ತಿಳಿದು ಕರೆ ಮಾಡುವಷ್ಟರಲ್ಲಿ ಆತನ ಮೊಬೈಲ್ ಸಂಪರ್ಕಕ್ಕೇ ಸಿಗುವುದಿಲ್ಲ. ಈ ಸಂಬಂಧ ಸಂಘದ ವತಿಯಿಂದ ಸೈಬರ್ ಕ್ರೈಂ ಪೊಲೀಸರಿಗೆ ದೂರು ನೀಡಲಾಗಿದೆ. ಆದರೂ ಔಷಧಿ ವ್ಯಾಪಾರಿಗಳು ಈ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕಿದೆ. ಅಪರಿಚಿತರು ಕರೆ ಮಾಡಿದರೆ ಎಚ್ಚರಿಕೆಯಿಂದ ವ್ಯವಹರಿಸಬೇಕು. ನೇರವಾಗಿ ಗ್ರಾಹಕರ ಸೋಗಿನಲ್ಲೂ ಬಂದು ವಂಚಿಸಬಹುದು. ಹಾಗಾಗಿ ಆನ್‌ಲೈನ್ ವಹಿವಾಟಿನ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಏನಾದರೂ ಸಮಸ್ಯೆಯಾದರೆ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಸಂಘದ ಅಧ್ಯಕ್ಷ ಎಂ.ರಾಜು ಹಾಗೂ ಕಾರ್ಯದರ್ಶಿ ಸಿ.ಕೆ.ಅರುಣ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಕರ್ಪೂರಿ ಠಾಕೂರ್‌ಗೆ 'ಭಾರತ ರತ್ನ: ಮೈಸೂರು ಸವಿತಾ ಸಮಾಜ ಸಂಭ್ರಮ



ಎನ್.ಆರ್.ನಾಗೇಶ್

ಮೈಸೂರು,ಜ.23–ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರಿಗೆ 'ಭಾರತ ರತ್ನ' ಪ್ರಶಸ್ತಿ (ಮರಣೋತ್ತರ) ಘೋಷಿಸಿರುವ ಹಿನ್ನೆಲೆಯಲ್ಲಿ ಸವಿತಾ ಸಮಾಜದ ಮೈಸೂರು ಜಿಲ್ಲಾ ಅಧ್ಯಕ್ಷ ಎನ್.ಆರ್.ನಾಗೇಶ್ ಕೇಂದ್ರ ಸರ್ಕಾರಕ್ಕೆ ಧನ್ಯವಾದ ತಿಳಿಸಿದ್ದಾರೆ.

ಸವಿತಾ ಸಮಾಜದ ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ಬಿಹಾರದ ಮುಖ್ಯಮಂತ್ರಿಗಳಾಗಿ ಶೋಷಿತ ಸಮುದಾಯಗಳ ಧ್ವನಿಯಾಗಿ ಸೇವೆ ಸಲ್ಲಿಸಿದ ಕರ್ಪೂರಿ ಠಾಕೂರ್ ಅವರು ದೇಶದಲ್ಲೇ ಮೊದಲಿಗೆ ಬಿಹಾರದಲ್ಲಿ ಮದ್ಯಪಾನ ನಿಷೇಧ ಮಾಡಿದ್ದರು. ಎಸ್‌ಎಸ್‌ಎಲ್‌ಸಿ ಉತ್ತೀರ್ಣಕ್ಕೆ ಇಂಗ್ಲಿಷ್ ಕಡ್ಡಾಯವಲ್ಲ ಎಂದು ಘೋಷಣೆ ಮಾಡಿದ್ದರು. ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಹತ್ತಾರು ಕಾರ್ಯಕ್ರಮಗಳನ್ನು ನೀಡಿದ ಕರ್ಪೂರಿ ಠಾಕೂರ್‌ರಿಗೆ ಭಾರತ ರತ್ನ ಪ್ರಶಸ್ತಿ ಕೊಡಬೇಕೆಂದು ದೆಹಲಿಯ ಜಂತರ್ ಮಂತರ್ ಮೈದಾನದಲ್ಲಿ ವರ್ಷಗಳಿಂದ ಪ್ರತಿಭಟನೆ, ಧರಣಿ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಸಂಸದರಾಗಿದ್ದ ಹೆಚ್.ಡಿ.ದೇವೇಗೌಡರು, ವೀರಪ್ಪ ಮೊಯಿಲಿ, ಧ್ರುವನಾರಾಯಣ್ ಅವರಿಗೆ ಮಾತ್ರವಲ್ಲದೆ ಪ್ರಧಾನಮಂತ್ರಿಗಳ ಕಚೇರಿಗೂ ಮನವಿ ಸಲ್ಲಿಸಲಾಗಿತ್ತು. ಠಾಕೂರ್ ಅವರ ಪುತ್ರ, ರಾಜ್ಯಸಭಾ ಸದಸ್ಯ ರಾಮನಾಥ ಠಾಕೂರ್ ಅವರೊಂದಿಗೂ ಚರ್ಚೆ ನಡೆಸಿದ್ದೆವು. ನಮ್ಮ ಹೋರಾಟಕ್ಕೆ ಸ್ಪಂದಿಸಿದ ಪ್ರಧಾನಿ ಮೋದಿಯವರಿಗೆ ರಾಜ್ಯದ ಸವಿತಾ ಸಮಾಜದ ಬಂಧುಗಳ ಪರವಾಗಿ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆ ಮೈಸೂರಿನ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಅಹೋಬಲ ಮಠದ ಟಿ.ಎನ್.ನಾಗರಾಜನ್ ಕುಟುಂಬದವರು 5000 ಲಡ್ಡು ವಿತರಿಸಿದರು. ಈ ವೇಳೆ ನಾಗಮಣಿ ನಾಗರಾಜನ್, ಅಭಿಜಿತ್, ಅರುಣ್, ಸಂಜಯ್ ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಶ್ರೀ ಕೃಷ್ಣ ತರುಣರ ಬಳಗದ ವತಿಯಿಂದ ಕೃಷ್ಣದೇವರಾಯ ಜಯಂತ್ಯುತ್ಸವ ಅಂಗವಾಗಿ ವಿಜಯನಗರ ಕೃಷ್ಣದೇವರಾಯ ವೃತ್ತದಲ್ಲಿರುವ ಶ್ರೀ ಕೃಷ್ಣದೇವರಾಯರ ಪ್ರತಿಮೆಗೆ ಮಾಜಿ ಕಾರ್ಪೋರೇಟರ್ ಕೆ.ವಿ.ಶ್ರೀಧರ್ ಮಾಲಾರ್ಪಣೆ ಮಾಡಿದರು. ಈ ವೇಳೆ ಕೇಶವಮೂರ್ತಿ, ಜಗದೀಶ್, ದಶರಥ್, ರಾಜೇಶ್ ಮತ್ತಿತರರು ಉಪಸ್ಥಿತರಿದ್ದರು.

ಜ.27, ಉಚಿತ ವಧು-ವರರ ಸಮಾವೇಶ



ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ವಧು-ವರರ ಸಮಾವೇಶದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ಮೈಸೂರು,ಜ.23(ಜಿಎ)-ಲಾವಣ್ಯ ಮ್ಯಾಟ್ರಿಮೋನಿಯಂ ಹಾಗೂ ಶಾಶ್ವತ ಸೇವಾ ಚಾರಿಟಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಜ.27ರಂದು ಬೆಳಗ್ಗೆ 10ರಿಂದ ಸಂಜೆ 4ರವರೆಗೆ ನಗರದ ಗೋವರ್ಧನ್ ಹೊಟೇಲ್‌ನ ಸತ್ಯಭಾಮಾ ಹಾಲ್‌ನಲ್ಲಿ ಉಚಿತ ವಧು-ವರರ ಸಮಾವೇಶ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಲೋಕೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಧು ವರಾನ್ವೇಷಣೆ ವೇಳೆಯ ಸಮಸ್ಯೆ ಅರಿತು ನೆರವಾಗಲೆಂದು ಈ ಸಂಸ್ಥೆ ರಚಿಸಿ, ಈಗ ವಧುವರರ ಸಮಾವೇಶ ಆಯೋಜಿಸಲಾಗಿದೆ. ಇದಕ್ಕೆ ಯಾವುದೇ ಜಾತಿ ನಿರ್ಬಂಧವಿಲ್ಲ. ಯಾವುದೇ ಸಮುದಾಯದವರು ಸಹಾ ಪಾಲ್ಗೊಳ್ಳಬಹುದಾಗಿದ್ದು, ಸಂಪೂರ್ಣ ಉಚಿತವಾಗಿದೆ. ಮಾಹಿತಿಗೆ ದೂ. 9164743059, 88843 47949 ಸಂಪರ್ಕಿಸಲು ಕೋರಿದರು. ಗೋಷ್ಠಿಯಲ್ಲಿ ಲಾವಣ್ಯ ಮಹೇಶ್, ಮಹೇಶ್, ಅಕ್ಷತಾ ಹಾಗೂ ನಾಗಮ್ಮ ಉಪಸ್ಥಿತರಿದ್ದರು.

ಸುಭಾಷ್‌ಚಂದ್ರ ಬೋಸ್ ಜನ್ಮ ದಿನಾಚರಣೆ



ನೇತಾಜಿ ಸುಭಾಷ್ ಚಂದ್ರ ಬೋಸ್‌ರವರ 127ನೇ ಜನ್ಮದಿನೋತ್ಸವವನ್ನು ಮೈಸೂರು ಸಮಾನಮನಸ್ಕರ ಬಳಗದ ವತಿಯಿಂದ ಮಂಡಿಮೊಹಲ್ಲಾ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ನೇತಾಜಿ ಸುಭಾಷ್ ಚಂದ್ರ ಬೋಸ್ ವೃತ್ತದಲ್ಲಿ ಆಚರಿಸಲಾಯಿತು.

ಮೈಸೂರು,ಜ.23-ಭಾರತೀಯ ಭೂ ಸೇನಾ ಸಂಸ್ಥಾಪಕರಾದ ನೇತಾಜಿ ಸುಭಾಷ್ ಚಂದ್ರ ಬೋಸ್‌ರವರ 127ನೇ ಜನ್ಮ ದಿನೋತ್ಸವವನ್ನು ಮೈಸೂರು ಸಮಾನ ಮನಸ್ಕರ ಬಳಗದ ವತಿಯಿಂದ ಮಂಡಿ ಮೊಹಲ್ಲಾ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ನೇತಾಜಿ ಸುಭಾಷ್ ಚಂದ್ರ ಬೋಸ್ ವೃತ್ತದಲ್ಲಿ ಆಚರಿಸಲಾಯಿತು.

ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ. ರಾಮಕೃಷ್ಣ, ನೇತಾಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುಂದರ್ ಕುಮಾರ್, ಪಾಲಿಕೆ ಮಾಜಿ ಸದಸ್ಯ ಎಸ್.ಎಂ.ನಂದಕುಮಾರ್, ಸಿಡಿ ಕುಮಾರ್, ಅಜಯ್ ಶಾಸ್ತ್ರಿ, ವಿಕ್ರಮ್ ಅಯ್ಯಂಗಾರ್, ಸೊಪ್ಪಿನಕೇರಿ ಬಿ.ಚಂದ್ರಶೇಖರ್, ಮಂಜು, ಹೆಚ್.ಎಸ್.ಪ್ರಕಾಶ್, ತಿಲಕ್ ನಗರದ ಆರ್.ರಾಜು, ಕೆ.ಚಂದ್ರಶೇಖರ್ ವರದರಾಜು, ಫಾಲ್ಕನ್ ಮಾದೇಗೌಡ, ದೊಡ್ಡಒಕ್ಕಲಗೇರಿಯ ಶಿವಕುಮಾರ್ ಗೌಡ ಇನ್ನಿತರರು ಇದ್ದರು.



ಮೈಸೂರಿನ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ಸುಭಾಷ್ ಚಂದ್ರ ಬೋಸ್ ಜಯಂತಿ ಅಂಗವಾಗಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಶಿಬಿರವನ್ನು ಎನ್. ಆರ್. ಸಂಚಾರಿ ಪೊಲೀಸ್ ಠಾಣೆಯ ಶಿವರಾಮಚಂದ್ರ ಉದ್ಘಾಟಿಸಿದರು. ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ರಶ್ಮಿ, ಸದಾಶಿವ್, ಸುಚೇಂದ್ರ, ಭಾರತಿ, ಪೂಜಾ, ವೈಷ್ಣವಿ, ಸೂರಜ್, ಚಂದ್ರು, ಕೇಬಲ್ ವಿಜಿ ಇನ್ನಿತರರು ಹಾಜರಿದ್ದರು.



ಬಾಲರಾಮ ಪ್ರತಿಷ್ಠಾಪನೆ ಅಂಗವಾಗಿ ಮೈಸೂರಿನ ಜೆಪಿ ನಗರದ ವಿನಾಯಕ ಎನ್‌ಕ್ಲೇವ್‌ನಲ್ಲಿ ದೀಪಾರಾಧನೆ.



ಇತ್ತೀಚೆಗೆ ಮೈಸೂರಿನ ಒಕಿನಾವ ಕರಾಟೆ ಶಾಲೆ ನಡೆಸಿದ ಸೀನಿಯರ್ ಬ್ಲಾಕ್ ಬೆಲ್ಟ್ ಡಿಗ್ರಿ ಪರೀಕ್ಷೆಯಲ್ಲಿ (ಎಡದಿಂದ), ತಾಂಡವರಾಜು, ಎಂ.ಕೃಷ್ಣ, ಆರ್.ಸತೀಶ್‌ರಾಜು, ಅಭಿಷೇಕ್ ಹಾಗೂ ತೇಜಸ್ ತೇರ್ಗಡೆಯಾಗಿದ್ದಾರೆ.

ನಾಳೆ ಶನಿ ಮಹಾಶಾಂತಿ, ಶ್ರೀ ಸತ್ಯನಾರಾಯಣ ಪೂಜೆ

ಮೈಸೂರು: ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಹುಣ್ಣಿಮೆ ಪ್ರಯುಕ್ತ ಗುರುವಾರ ಜ.25ರಂದು ಶ್ರೀ ಸತ್ಯನಾರಾಯಣ ಪೂಜೆ ಮತ್ತು ಕರ್ಕಾಟಕ, ತುಲಾ ಮಕರ ಕುಂಭ ಮೀನ ರಾಶಿಯವರಿಗೆ ವಿಶೇಷ ಸಂಕಲ್ಪದೊಂದಿಗೆ ಶನಿ ಮಹಾಶಾಂತಿಯನ್ನು ಬಾಧಾನಿವಾರಕ ಮಹಾ ಸುದರ್ಶನ ಹೋಮ, ಆರೋಗ್ಯ ಕರ ಮಹಾಮೃತ್ಯುಂಜಯ ಹೋಮ ಕುಜಶಾಂತಿ, ರಾಹು ಕೇತು ಶಾಂತಿ ಏರ್ಪಡಿಸಲಾಗಿದೆ. ಸಂಕಲ್ಪವು ಬೆಳಗ್ಗೆ 7.30ರಿಂದ ಪ್ರಾರಂಭ. ಹೋಮವು 10 ಗಂಟೆಗೆ ಪ್ರಾರಂಭವಾಗಿ 12.30ಕ್ಕೆ ಪೂರ್ಣಾಹುತಿ ಮತ್ತು ಮಹಾಮಂಗಳಾರತಿ. ಹೆಚ್ಚಿನ ವಿವರಗಳಿಗೆ ಮೈ ಕುಮಾರ್ ಜಾತಕ ವಿಮರ್ಶಕರನ್ನು ಮೊ. 9845183399, 9342183392 ಮೂಲಕ ಸಂಪರ್ಕಿಸಬಹುದು.

'ಶ್ರೀ ನನ್ನೇಶ್ವರ ದೇವರ ಕೆರೆ' ಸುತ್ತಮುತ್ತಲ ರಾಜಕಾಲುವೆ, ಬಫರ್‌ಜೋನ್ ಜಾಗ ಒತ್ತುವರಿ ತೆರವಿಗೆ ಮೀನಾಮೇಷ!

● ಹಿನಕಲ್ ಗ್ರಾಮಸ್ಥರ ಆಕ್ರೋಶ ● ಖಾಸಗಿ ಸಂಸ್ಥೆಗಳಿಗೆ ಮುಡಾ ಅಧಿಕಾರಿಗಳೇ ಬೆಂಗಾವಲು!

ಮೈಸೂರು, ಜ.23(ಎಸ್‌ಪಿಎನ್)- ಮೈಸೂರು ತಾಲೂಕು ಹಿನಕಲ್ ಗ್ರಾಮದ 'ಶ್ರೀ ನನ್ನೇಶ್ವರ ದೇವರ ಕೆರೆ' ಮತ್ತು ಅದರ ಸುತ್ತಮುತ್ತಲಿನ ರಾಜಕಾಲುವೆಯ ಬಫರ್ ಜೋನ್ ಒತ್ತುವರಿ ಜಾಗವನ್ನು ತೆರವುಗೊಳಿಸಲು ಜಿಲ್ಲಾಡಳಿತ ಮೀನಾಮೇಷ ಎಣಿಸುತ್ತಿದೆ ಎಂದು ಹಿನಕಲ್ ಗ್ರಾಮದ ಮುಖಂಡರು ದೂರಿದ್ದಾರೆ.

ನನ್ನೇಶ್ವರ ದೇವರ ಕೆರೆಯು ಸುಮಾರು 6 ಎಕರೆಗಿಂತ ಹೆಚ್ಚಾಗಿದ್ದು, ನಗರೀಕರಣ ಬೆಳೆದಂತೆ ಹಿನಕಲ್ ಗ್ರಾಮದ ಸುತ್ತಮುತ್ತಲಿನ ಸುಮಾರು 2 ಸಾವಿರ ಎಕರೆ ಜಾಗವನ್ನು ಹಲವು ವರ್ಷಗಳ ಹಿಂದೆಯೇ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ವಶಪಡಿಸಿಕೊಂಡು ನಿವೇಶನಗಳಾಗಿ ಪರಿವರ್ತಿಸಿದೆ. ಈ ವೇಳೆ ಹಿನಕಲ್ ಗ್ರಾಮಸ್ಥರಿಗೆ ಗ್ರಾಮದ ಅಭಿವೃದ್ಧಿ ಮತ್ತು ಮೂಲಸೌಕರ್ಯಕ್ಕಾಗಿ ಸಿಎ ನಿವೇಶನಗಳನ್ನು ಮೀಸಲಿಡುವುದಾಗಿ ಮುಡಾದ ಅಂದಿನ ಅಧಿಕಾರಿಗಳು ಭರವಸೆ ನೀಡಿ, ವಶಪಡಿಸಿಕೊಂಡಿದ್ದರು ಎಂದು ಕೃಷ್ಣಾರೆಡ್ಡಿ ಮಾಹಿತಿ ನೀಡಿದರು.

ಈಗಿನ ಶ್ರೀ ನನ್ನೇಶ್ವರ ದೇವರ ಕೆರೆಯ ಪೂರ್ವ ಭಾಗದಲ್ಲಿನ ಮಳೆ ನೀರು ಹರಿಯುವ ರಾಜಕಾಲುವೆಯ ಬಫರ್ ಜೋನ್ ಜಾಗವನ್ನು ಖಾಸಗಿ ಸಂಸ್ಥೆಯವರು ಆಕ್ರಮಿಸಿಕೊಂಡಿದ್ದು, ಈ ಜಾಗದಲ್ಲಿ ಹೂಳು ತುಂಬಿಕೊಂಡರೆ ಯಂತ್ರಗಳ ಸಹಾಯದಿಂದ ಸ್ವಚ್ಛ ಮಾಡಲೂ ಜಾಗ ಬಿಡದೇ ಕಾನೂನು ಮೀರಿ ಒತ್ತುವರಿ ಮಾಡಿಕೊಂಡಿದ್ದಾರೆ.

ಈ ಸಂಬಂಧ ಕಳೆದ 3-4 ವರ್ಷಗಳ ಹಿಂದೆಯೇ ಒತ್ತುವರಿ ಜಾಗವನ್ನು ತೆರವುಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದರೂ ಇಲ್ಲಿಯವರೆಗೆ ಯಾವುದೇ ಪ್ರಯೋಜನವಾಗಿಲ್ಲ ಎಂದು ನನ್ನೇಶ್ವರ ದೇವರ ಕೆರೆ ಅಭಿವೃದ್ಧಿ ಸಮಿತಿಯ ಕೃಷ್ಣಾರೆಡ್ಡಿ ಆರೋಪಿಸಿದ್ದಾರೆ.



ರಾಜಕಾಲುವೆಯ ಬಫರ್‌ಜೋನ್‌ನಲ್ಲಿರುವ ಕಟ್ಟಡ ತೆರವಿಗೆ ಗ್ರಾಮಸ್ಥರ ಒತ್ತಾಯ.



ಖಾಸಗಿ ಸಂಸ್ಥೆಯವರು ಶ್ರೀ ನನ್ನೇಶ್ವರ ದೇವರ ಕೆರೆ ಏರಿ ಒಡೆದು ಕಾಮಗಾರಿ ನಡೆಸುತ್ತಿರುವ ದೃಶ್ಯ.

ಅಲ್ಲದೆ ಕೆರೆಯ ದಕ್ಷಿಣ ಭಾಗದ ಬಫರ್‌ಜೋನ್ ಗುರುತಿಸದೆ ಸಿಎ ನಿವೇಶನ ಪ್ಲಾನ್ ಮತ್ತು ಸ್ಕೆಚ್ ಪತ್ರದಲ್ಲಿ ಬಫರ್‌ಜೋನ್ ಗುರುತಿಸದೇ ಖಾಸಗಿ ಸಂಸ್ಥೆಯವರಿಗೆ ನೀಡಿರುವುದು ಅವೈಜ್ಞಾನಿಕ. ಆದುದರಿಂದ ಈ ಕೂಡಲೇ ರಾಜ್ಯ ಸರ್ಕಾರ ಕೆರೆಯ ಪೂರ್ವ ಭಾಗದಲ್ಲಿನ ರಾಜಕಾಲುವೆ ಮತ್ತು ದಕ್ಷಿಣ ಭಾಗದಲ್ಲಿರುವ ಸಿಎ ನಿವೇಶನದ ಬಫರ್‌ಜೋನ್ ಗಮನದಲ್ಲಿಟ್ಟುಕೊಂಡು ಈ ಸಮಸ್ಯೆ ಬಗೆಹರಿಸಬೇಕು. ಅಲ್ಲದೆ, ಹಿನಕಲ್ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡವೂ ರಾಜಕಾಲುವೆ ಬಫರ್‌ಜೋನ್ ಜಾಗದಲ್ಲಿದ್ದು, ಇದನ್ನು ತೆರವುಗೊಳಿಸುವಂತೆ ಹಿನಕಲ್ ಗ್ರಾಮಸ್ಥರು ಮುಡಾ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ.

ನನ್ನೇಶ್ವರ ಕೆರೆ ಮುಡಾ ಸ್ವಾಧೀನದಲ್ಲಿದೆ: ಶ್ರೀ ನನ್ನೇಶ್ವರ ದೇವರ ಕೆರೆ ಜಾಗ ಪ್ರಸ್ತುತ ಮುಡಾ ಸ್ವಾಧೀನದಲ್ಲಿದ್ದು, ಪ್ರಾಧಿಕಾರದಿಂದಲೇ ಸದರಿ ಕೆರೆಯ ಸುತ್ತಲೂ ಭದ್ರತೆಗೆ ಕಬ್ಬಿಣದ ಬೇಲಿ ನಿರ್ಮಿಸಲಾಗಿದೆ. ಆದರೆ ಕೆರೆ ಏರಿ ಮತ್ತು ರಾಜಕಾಲುವೆಯ ಬಫರ್‌ಜೋನ್ ಜಾಗವನ್ನು ಕೆರೆ ಸುತ್ತಲೂ ಇರುವ ಖಾಸಗಿ ಸಂಸ್ಥೆಯವರು ಆಕ್ರಮಿಸಿಕೊಂಡಿದ್ದಾರೆ. ಪ್ರಾಧಿಕಾರದ ಅನುಮತಿ ಪಡೆಯದೆ ಕೆರೆಯ ಏರಿಯನ್ನು ಒಡೆದು ಹಾಕಿ, ಜಲ ಮೂಲಕ್ಕೆ ಧಕ್ಕೆ ತಂದಿರುವುದು ಅಕ್ಷಮ್ಯ ಅಪರಾಧ ಎಂದು ಆರೋಪಿಸಿದ್ದಾರೆ.

ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿ: ಈ ಕೂಡಲೇ ರಾಜಕಾಲುವೆ ಮತ್ತು ಕೆರೆ ಕೋಡಿ ಜಾಗದಲ್ಲಿ ಖಾಸಗಿ ಸಂಸ್ಥೆಯವರು ನಡೆಸುತ್ತಿರುವ ಕಾಮಗಾರಿಯನ್ನು ನಿಲ್ಲಿಸಿ, ಇದಕ್ಕೆ ಬೆಂಗಾವಲಾಗಿರುವ ಮುಡಾ ಅಧಿಕಾರಿಗಳ ವಿರುದ್ಧ ಕ್ರಮಕೈಗೊಳ್ಳುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಅಲ್ಲದೆ, ಕೆರೆ ಮತ್ತು ರಾಜಕಾಲುವೆಗೆ ಬಫರ್‌ಜೋನ್ ಗುರುತಿಸುವ ಕಾರ್ಯ ಆಗುವವರೆಗೂ ಸುತ್ತಲೂ ಇರುವ ಖಾಸಗಿ ಸಂಸ್ಥೆಯವರು ಯಾವುದೇ ಕಾಮಗಾರಿ ಕೈಗೊಳ್ಳದಂತೆ ಜಿಲ್ಲಾಡಳಿತಕ್ಕೆ ರಾಜ್ಯ ಸರ್ಕಾರ ನಿರ್ದೇಶನ ನೀಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಈ ವೇಳೆ ಶ್ರೀ ನನ್ನೇಶ್ವರ ದೇವರ ಕೆರೆ ಅಭಿವೃದ್ಧಿ ಸಮಿತಿಯ ಗೌರವಾಧ್ಯಕ್ಷ ಹೊನ್ನಪ್ಪ, ಅಧ್ಯಕ್ಷ ಎ.ಪಾಪಣ್ಣ, ಉಪಾಧ್ಯಕ್ಷ ಕೆ.ಜಿ.ನಾಗರಾಜು, ಎನ್.ಮಹೇಶ್, ಕಾರ್ಯದರ್ಶಿ ಸತೀಶ್ ಕರಿಯಪ್ಪ, ಖಜಾಂಚಿ ಕೃಷ್ಣಾರೆಡ್ಡಿ, ಸಲಹೆಗಾರ ಜಿ.ಶ್ರೀನಿವಾಸ, ಮುಖಂಡರಾದ ಕಿರಣ್, ವೆಂಕಟೇಶ್, ಹೇಮಂತಕುಮಾರ್, ಹೆಚ್.ಬಿ.ರಮೇಶ್, ಎಸ್.ನನ್ನಪ್ಪ, ಗಣೇಶ್, ಶಿವು, ಕುಮಾರ್, ಶ್ರೀನಿವಾಸ್, ರಮೇಶ್, ಚಂದ್ರಶೇಖರ್, ದಿನೇಶ್, ಎಂ.ಮಂಜುನಾಥ್, ವಾಸು, ಪರಮೇಶ್, ರಾಜಶೇಖರ್, ಎಂ.ಕೆ.ಪ್ರವೀಣ್ ಸೇರಿದಂತೆ ಇತರರು ಹಾಜರಿದ್ದರು.

ಸರ್ಕಾರಿ ಪ್ರೌಢಶಾಲೆಗೆ ಮೀಸಲಿಟ್ಟ ನಿವೇಶನ ಖಾಸಗಿ ಸಂಸ್ಥೆಗೆ ಪರಭಾರೆ!



ಸರ್ಕಾರಿ ಪ್ರೌಢಶಾಲೆಗೆ ಮೀಸಲಿಟ್ಟ ಸಿಎ ನಿವೇಶನವನ್ನು ಖಾಸಗಿಯವರಿಗೆ ಪರಭಾರೆ ಮಾಡಿರುವ ಮುಡಾ ಅಧಿಕಾರಿಗಳ ನಿರ್ಧಾರವನ್ನು ವಿರೋಧಿಸುತ್ತಿರುವುದು.

ಹಿನಕಲ್ ಸರ್ಕಾರಿ ಪ್ರೌಢಶಾಲೆಗಾಗಿ ಮೀಸಲಿಟ್ಟಿದ್ದ ಸಿಎ ನಿವೇಶನವನ್ನು ಗ್ರಾಮಸ್ಥರ ಗಮನಕ್ಕೆ ತಾರದೇ ಈಗಾಗಲೇ ಮುಡಾ ಅಧಿಕಾರಿಗಳು ಖಾಸಗಿ ವಿದ್ಯಾಸಂಸ್ಥೆಯವರಿಗೆ ಪರಭಾರೆ ಮಾಡಿರುವುದನ್ನು ಹಿನಕಲ್ ಗ್ರಾಮಸ್ಥರು ವಿರೋಧಿಸಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಹಿನಕಲ್ ಸರ್ಕಾರಿ ಪ್ರೌಢಶಾಲೆಗೆ ಸಮೀಪದ ಸಿಎ ನಿವೇಶನವನ್ನು ಮಂಜೂರು ಮಾಡಲು 25.06.2016ರಂದು ಸರ್ಕಾರವನ್ನು ಕೋರಿದ್ದರು. ಅದರಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ(ನಾಗರಿಕರ ಸೌಕರ್ಯ ನಿವೇಶನ ಹಂಚಿಕೆ) ನಿಯಮಗಳು 1991ರ ನಿಯಮ 3(1) ಅನ್ವಯ ಮತ್ತು 8(4)(ಸಿ) ಅನ್ವಯ ಸರ್ಕಾರಿ ಶಾಲಾ ಉಪಯೋಗಕ್ಕಾಗಿ ಶೇ.50ರಷ್ಟು ರಿಯಾಯ್ತಿ ದರದಲ್ಲಿ 30 ವರ್ಷಗಳಿಗೆ ಗುತ್ತಿಗೆ ಆಧಾರದಲ್ಲಿ ವಿಜಯನಗರ 2ನೇ ಹಂತದಲ್ಲಿ 8,182 ಚ.ಮೀ ವಿಸ್ತೀರ್ಣವುಳ್ಳ ನಿವೇಶನ ಸಂಖ್ಯೆ: ಸಿಎ2 ಶೈಕ್ಷಣಿಕ ಉದ್ದೇಶಕ್ಕೆ ರೂ.44,51,010 ಹಣ ನಿಗದಿಗೊಳಿಸಿ, ಅಂದಿನ ಮುಡಾ ಅಧಿಕಾರಿಗಳು ಒಪ್ಪಿಗೆ ಸೂಚಿಸಿದ್ದರು. ಆದರೆ, ಇಷ್ಟೊಂದು ಹಣವನ್ನು ಮುಡಾಗೆ ಪಾವತಿಸಲು ಸಾಧ್ಯವಿಲ್ಲ ಎಂದು ಅಂದಿನ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಪ್ರಧಾನ ಕಾರ್ಯದರ್ಶಿ, ಈ ನಿವೇಶನಕ್ಕೆ ಹಣ ಪಾವತಿಸಲು ನಿರಾಕರಿಸಿದ್ದರು. ಈ ಹಿನ್ನೆಲೆಯಲ್ಲಿ ಮುಡಾ ಅಧಿಕಾರಿಗಳು ಈ ನಿವೇಶನವನ್ನು ಖಾಸಗಿ ಸಂಸ್ಥೆಗೆ ಪರಭಾರೆ ಮಾಡಿರುವುದಕ್ಕೆ ಗ್ರಾಮಸ್ಥರು ವಿರೋಧ ವ್ಯಕ್ತಪಡಿಸಿದ್ದಾರೆ.


ಮಹಾತ್ಮಗಾಂಧಿ ವಿಚಾರವಾಗಿ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ

ಶಾಲಾ ಶಿಕ್ಷಣ ಇಲಾಖೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ

ಬೆಂಗಳೂರು, ಜ.23(ಕೆಎಂಶಿ)- ರಾಷ್ಟ್ರದಲ್ಲಿ ಫ್ಯಾಸಿಸ್ಟ್ ಶಕ್ತಿಗಳ ಹೆಚ್ಚಳದ ಆತಂಕ ಹಾಗೂ ಮಹಾತ್ಮ ಗಾಂಧಿ ಪ್ರಸ್ತಾಪಿಸಿದ ಪರಿಹಾರಗಳ ಕುರಿತು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಾಲಾ ಶಿಕ್ಷಣ ಇಲಾಖೆಗೆ ಆದೇಶಿಸಿದ್ದಾರೆ.

ಈ ಕುರಿತು ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದು 10 ಮತ್ತು 12ನೇ ತರಗತಿ ಹೊರತುಪಡಿಸಿ, ಉಳಿದ ತರಗತಿ ವಿದ್ಯಾರ್ಥಿಗಳಿಗೆ ಈ ಕುರಿತಾದ ಪ್ರಬಂಧಗಳನ್ನು ಏರ್ಪಡಿಸಿ ಎಂದಿದ್ದಾರೆ.

ಉನ್ನತ ಶಿಕ್ಷಣದ ಘಟ್ಟ ಪ್ರವೇಶ ಪರೀಕ್ಷೆಗಳಾದ ಎಸ್‌ಎಸ್‌ಎಲ್‌ಸಿ, ಪಿಯುಸಿ ಹೊರತುಪಡಿಸಿ ಉಳಿದ ಎಲ್ಲಾ ಹಂತಗಳಲ್ಲೂ ವಿದ್ಯಾರ್ಥಿಗಳು ಪ್ರಬಂಧ ಬರೆಯುವುದರಿಂದ ಅವರ ಜ್ಞಾನಾರ್ಜನೆ ಮತ್ತು ಶಿಕ್ಷಣದ ಗುಣಮಟ್ಟ ಹೆಚ್ಚುತ್ತದೆ. ಆರನೇ ತರಗತಿ ಮೇಲ್ಪಟ್ಟು ಪದವಿ, ಸ್ನಾತಕೋತ್ತರ ವಿದ್ಯಾರ್ಥಿಗಳಿಗೂ ಪ್ರಬಂಧ



ಸ್ಪರ್ಧೆ ಏರ್ಪಡಿಸಿ, ಅದರಲ್ಲೂ 21ನೇ ಶತಮಾನದ ಕಳವಳಗಳು ಮತ್ತು ಗಾಂಧಿ ಚಿಂತನೆಗಳು ನೀಡಿದ ಪರಿಹಾರಗಳು ಎಂಬ ವಿಷಯಕ್ಕೆ ಒತ್ತು ಕೊಡಿ. ಗಾಂಧೀಜಿಯವರು ಹತ್ಯೆಯಾಗಿ ಏಳೂವರೆ ದಶಕಗಳು ಕಳೆದಿವೆ, ಮಹಾತ್ಮರು ತಮ್ಮ ಜೀವನದುದ್ದಕ್ಕೂ ಶಾಂತಿ, ಅಹಿಂಸೆ, ಸತ್ಯತೆ, ವಿಕೇಂದ್ರೀಕರಣ, ಸಾಮಾಜಿಕ ನ್ಯಾಯ ಮತ್ತು ಮಾನವೀಯ ನಿಲುವುಗಳನ್ನು ಆಚರಿಸಿ, ಪ್ರತಿಪಾದಿಸುತ್ತಿದ್ದರು.

ಇಂದು ಜಾಗತಿಕ ಪರಿಸರದ ಬಿಕ್ಕಟ್ಟುಗಳು, ಕೃತಕ ಬುದ್ಧಿಮತ್ತೆ, ಹಿಂಸಾ ವಿನೋದ ಮುಂತಾದವುಗಳಿಂದಾಗಿ ಮನುಷ್ಯರು ಈ ಭೂಮಿಯ ಮೇಲಿಂದಲೇ ಅಳಿಸಿ ಹೋಗುವ ದುಸ್ಥಿತಿಗೆ ತಲುಪಿಯಾಗಿದೆ.

ದೊಡ್ಡ ಭಾಷೆಗಳು ಸಣ್ಣ-ಸಣ್ಣ ಭಾಷೆಗಳನ್ನು ನುಂಗಿ ಹಾಕುತ್ತಿವೆ, ಯಾವುದೇ ಸಮಾಜ ಅಥವಾ ಸಮುದಾಯಗಳು ತಮ್ಮ ಭಾಷೆಗಳನ್ನು ಕಳೆದುಕೊಳ್ಳುವುದೆಂದರೆ ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುವುದು ಎಂದರ್ಥ. ಪ್ರಬಂಧ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಗಾಂಧೀಜಿ ಅವರನ್ನು ಅರಿತುಕೊಳ್ಳಲು ಅವಕಾಶ ಒದಗಿಸಿದಂತಾಗುತ್ತದೆ. ಸ್ಪರ್ಧೆಯಲ್ಲಿ ವಿಜೇತರಾದ ಪ್ರತಿ ತರಗತಿ ಮಕ್ಕಳಿಗೆ ಸೂಕ್ತ ಬಹುಮಾನ ನೀಡಿ, ಉಳಿದವರ ಭಾಗವಹಿಸುವಿಕೆಗಾಗಿ ಪ್ರಶಂಸಾ ಪತ್ರಗಳನ್ನು ನೀಡಿ ಮಕ್ಕಳನ್ನು ಉತ್ತೇಜಿಸಿ ಎಂದಿದ್ದಾರೆ.



ಮೈಸೂರಿನ ಹೂಟಗಳ್ಳಿಯ ಶ್ರೀ ಚಾಮುಂಡೇಶ್ವರಿ ಸೇವಾ ಸಮಿತಿ ವತಿಯಿಂದ ಬಾಲ ರಾಮನ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ಕೆಹೆಚ್‌ಬಿ ಕಾಲೋನಿಯಲ್ಲಿ ಅದ್ಧೂರಿಯಾಗಿ ಭಜನೆ ಹಾಗೂ ದೀಪ ಬೆಳಗಿಸಲಾಯಿತು. ಈ ವೇಳೆ ಭಕ್ತರಿಗೆ ಪ್ರಸಾದ ವಿತರಿಸಲಾಯಿತು. ಸಮಿತಿ ಗೌರವಾಧ್ಯಕ್ಷರು, ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಂಸತ್ ಭದ್ರತಾ ಲೋಪ; ಖ್ಯಾತಿಗಾಗಿ ಆರೋಪಿಗಳ ಕೃತ್ಯ

ದೆಹಲಿ ಪೊಲೀಸರ ಮಾಹಿತಿ



ನವದೆಹಲಿ: ಸಂಸತ್ತಿನಲ್ಲಿ ನಡೆದ ಭದ್ರತಾ ಲೋಪ ಪ್ರಕರಣದ ಆರು ಆರೋಪಿಗಳು ಖ್ಯಾತಿಗಾಗಿ ಏನಾದರೂ ದೊಡ್ಡದು ಮಾಡಲು ನಿರ್ಧರಿಸಿದ್ದರು. ಅಲ್ಲದೆ ಸ್ವಯಂ ಪ್ರೇರಣೆಯಿಂದ ಹಣವನ್ನು ಸಂಗ್ರಹಿಸಿದ್ದರು ಎಂದು ಈ ಕುರಿತು ತನಿಖೆ ನಡೆಸುತ್ತಿರುವ ಪೊಲೀಸರು ತಿಳಿಸಿದ್ದಾರೆ.

ತಾವು ಯಾವುದೇ 'ಗಂಭೀರವಾದ ಅಪರಾಧ' ಎಸಗಿಲ್ಲ ಎಂದು ತಿಳಿದುಕೊಂಡಿದ್ದ ಆರೋಪಿಗಳು, ಒಂದು ವೇಳೆ ಬಂಧನವಾದರೂ, ತಮ್ಮನ್ನು ಬಿಟ್ಟು ಕಳುಹಿಸಲಾಗುತ್ತದೆ ಎಂದು ಆರೋಪಿಗಳು ಭಾವಿಸಿದ್ದರು ಎಂದು ಪೊಲೀಸರು ಹೇಳಿದ್ದಾರೆ. ಈ ಪ್ರಕರಣದ ರೂವಾರಿ ಎಂದು ಶಂಕಿಸಲಾದ ಮನೋರಂಜನ್ ಡಿ, ಪ್ರಖ್ಯಾತಿಗಾಗಿ ಏನನ್ನಾದರೂ ದೊಡ್ಡದನ್ನು ಮಾಡಲು ತಮ್ಮದೇ ಆಲೋಚನೆ ಇರುವ ಜನರನ್ನು ಹುರಿದುಂಬಿಸಲು ಫೇಸ್ ಬುಕ್‌ನಲ್ಲಿ 'ಭಗತ್ ಸಿಂಗ್ ಫ್ಯಾನ್ ಕ್ಲಬ್' ಅನ್ನು ಸೃಷ್ಟಿಸಿದ್ದ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಈ ಎಲ್ಲ ಆರೋಪಿಗಳು ಕಳೆದ ನಾಲ್ಕು ವರ್ಷಗಳಿಂದ ಪರಿಚಿತರಾಗಿದ್ದು, ಸಂಸತ್ತಿನ ಭದ್ರತಾ ವ್ಯವಸ್ಥೆಯನ್ನು ಭೇದಿಸುವ ಕೃತ್ಯದ ಯೋಜನೆಯನ್ನು ಒಂದು ವರ್ಷದ ಹಿಂದೆ ರೂಪಿಸಿದ್ದರು. ಸಂಸತ್ತಿನ ಭದ್ರತಾ ವ್ಯವಸ್ಥೆಯನ್ನು ಭೇದಿಸುವ ಅಕ್ರಮ ಚಟುವಟಿಕೆಯ ಅಭಿಪ್ರಾಯಕ್ಕೆ ಫ್ಯಾನ್‌ಕ್ಲಬ್ ಗ್ರೂಪ್‌ನ ಹಲವರು ಒಪ್ಪಿಕೊಳ್ಳಲಿಲ್ಲ. ಇದರಿಂದಾಗಿ ಡಿಸೆಂಬರ್ 13ರಂದು ಈ ಘಟನೆ ನಡೆಯುವ ಮುನ್ನ ಹಲವು ಸದಸ್ಯರು ಗ್ರೂಪ್ ತೊರೆದರು.

ಮನೋರಂಜನ್ ಅವರು ಬ್ರಿಟಿಷ್ ಆಡಳಿತಾವಧಿ ವೇಳೆ ದೆಹಲಿ ವಿಧಾನ ಸಭೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಮಾಡಿದ ರೀತಿಯಲ್ಲೇ ಸಂಸತ್ತಿನ ಭದ್ರತಾ ವ್ಯವಸ್ಥೆ ಭೇದಿಸಲು ನಿರ್ಧರಿಸಿದ್ದ ಎಂದು ಮತ್ತೊಬ್ಬ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಮುಖಾಮುಖಿಯಾಗಿ ಭೇಟಿಯಾಗಲು ಹಣದ ಕೊರತೆಯಿಂದಾಗಿ ಆರೋಪಿಗಳು, ಸಾಮಾಜಿಕ ಮಾಧ್ಯಮಗಳ ಮೂಲಕ ಸಂಪರ್ಕ ಸಾಧಿಸಿದ್ದರು. ಅಲ್ಲದೆ, ಇದೇ ಕಾರಣದಿಂದಾಗಿ ಈ ಕೃತ್ಯವೆಸಗುವ ಮುನ್ನ ಗುರುಗ್ರಾಮದಲ್ಲಿರುವ ವಿಕ್ಕಿ ಶರ್ಮಾ ಅವರ ನಿವಾಸದಲ್ಲಿ ವಾಸವಿದ್ದರು ಎಂದು ಪೊಲೀಸರು ಹೇಳಿದ್ದಾರೆ.

ಜ.26ರಿಂದ ಅದ್ಧೂರಿ ಮೈಸೂರು ಫೆಸ್ಟ್

ಮೈಸೂರು.ಜ.23- ಪ್ರವಾಸೋದ್ಯಮ ಇಲಾಖೆ ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ವತಿಯಿಂದ ಜನವರಿ 26ರಿಂದ 28ರವರೆಗೆ ಮೈಸೂರು ವಿಶ್ವವಿದ್ಯಾನಿಲಯ ಬಯಲು ರಂಗಮಂದಿರದಲ್ಲಿ ಮೈಸೂರು ಫೆಸ್ಟ್ 2024 ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಅಂದು ಬೆಳಗ್ಗೆ 11.30ಕ್ಕೆ ಚಿತ್ರಸಂತೆ, ಫ್ಲೀ ಮಾರ್ಕೆಟ್ ಹಾಗೂ ಮೈಸೂರು ಫುಡ್ ಫೆಸ್ಟ್ ಕಾರ್ಯಕ್ರಮಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸುವರು. ಜ.27ರಂದು ಸಂಜೆ 7ಕ್ಕೆ ಸಾಂಸ್ಕೃತಿಕ ವೈಭವ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸುವರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್ ಉಪಸ್ಥಿತರಿರುವರು. ಮುಖ್ಯ ಅತಿಥಿಗಳಾಗಿ ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಶ್ ಆಗಮಿಸಲಿದ್ದಾರೆ.

ಸಮಾರಂಭದ ಅತಿಥಿಗಳಾಗಿ ವಿಧಾನ ಸಭೆ ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಅನಿಲ್‌ಕುಮಾರ್, ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್.ಶ್ರೀವತ್ಸ ಹಾಗೂ ವಿಧಾನ ಪರಿಷತ್ತಿನ ಶಾಸಕರಾದ ಮರಿತಿಬ್ಬೇಗೌಡ, ಎಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ ಆಗಮಿಸಲಿದ್ದಾರೆ. ಸಾಂಸ್ಕೃತಿಕ ವೈಭವ ಕಾರ್ಯಕ್ರಮವು 27 ಶನಿವಾರ ಸಂಜೆ 5ರಿಂದ 7ರವರೆಗೆ ವಾಯಿಲಿನ್‌ಫ್ಯೂಷನ್, ಚೆಂಡೆ ಮತ್ತು ನೃತ್ಯ ತಂಡದವರಿಂದ ಉಯಿರೆ ಉಯಿರೆ ಬಿಜಿಎಂ ಚೆಮ್ಮನ್ ಬ್ಯಾಂಡ್ ಹಾಗೂ 8ರಿಂದ 10ರವರೆಗೆ ಅಂತಾರಾಷ್ಟ್ರೀಯ ಗಾಯಕ ಪೃಥ್ವಿ, ಸವಾರಿ ಹಾಗೂ ನೂರು ಸಿನಿಮಾಗಳ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ ಹಾಗೂ ಬಾಂಬೆ ಸಿಂಗರ್ ಅಂಶಿಕ ಅಯ್ಯರ್ ತಂಡದಿಂದ ಗಾನ ಮಾಧುರ್ಯ ಮಣಿಕಾಂತ್ ಕದ್ರಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

28ರಂದು ಸಂಜೆ 6ರಿಂದ 8ರವರೆಗೆ ಸಿರಿಗನ್ನಡ ಟಿವಿ ಚಾನಲ್ ರವರಿಂದ ಹಾಸ್ಯ ದರ್ಬಾರ್ ಮತ್ತು ರಾತ್ರಿ 8ರಿಂದ 10 ರವರೆಗೆ ಖ್ಯಾತ ಚಲನಚಿತ್ರ ಗಾಯಕ ಸಂತೋಷ್ ವೆಂಕಿ ಲೈವ್ ಇನ್ ಕಾನ್ಸರ್ಟ್ ಮತ್ತು ನೃತ್ಯ ತಂಡದಿಂದ ಸಂಗೀತ ಸಂಜೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಸ್ಥಳದಲ್ಲೇ ಚಿತ್ರ ಬಿಡಿಸಿ ಬೈಸಿಕಲ್ ಗೆಲ್ಲಿ

ಮೈಸೂರು ಫೆಸ್ಟ್ ಕಾರ್ಯಕ್ರಮದ ಪ್ರಯುಕ್ತ "ನಮ್ಮ ಪರಂಪರೆ, ನಿಮ್ಮ ತಾಣ" (our heritage, your destination) ಮೈಸೂರು ಪ್ರವಾಸೋದ್ಯಮವನ್ನು ಪ್ರತಿಬಿಂಬಿಸುವ ಚಿತ್ರಕಲಾ ಸ್ಪರ್ಧೆ ಕಾರ್ಯಕ್ರಮವನ್ನು ಪ್ರವಾಸೋದ್ಯಮ ಇಲಾಖೆಯಿಂದ ಜ.27ರಂದು ಮೈಸೂರು ವಿಶ್ವವಿದ್ಯಾನಿಲಯದ ಗಣಿತ ಶಾಸ್ತ್ರ ವಿಭಾಗದ ಮುಂಭಾಗ ಬೆಳಗ್ಗೆ 9.30ರಿಂದ 11 ಗಂಟೆವರೆಗೆ ನಡೆಸಲಾಗುತ್ತದೆ. 8ರಿಂದ 12ನೇ ತರಗತಿಯ ಆಸಕ್ತ ವಿದ್ಯಾರ್ಥಿಗಳು ಅರ್ಜಿಗಳನ್ನು https://forms.gle/BbWdJUzv1uFAeuXb8 ಲಿಂಕ್‌ನ ಮೂಲಕ ಸಲ್ಲಿಸಬಹುದಾಗಿದ್ದು, ಸ್ಥಳ ನೋಂದಣಿಗೆ ಅವಕಾಶವಿರುತ್ತದೆ. ಸ್ಪರ್ಧೆಯಲ್ಲಿ ವಿಜೇತರಾದ ಮೊದಲ ಮೂರು ಸ್ಪರ್ಧಿಗಳಿಗೆ ಬೈಸಿಕಲ್, ಟ್ರೋಫಿ ಹಾಗೂ ಪ್ರಮಾಣ ಪತ್ರವನ್ನು ವಿತರಿಸಲಾಗುವುದು. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ 7411564510 ಅನ್ನು ಹಾಗೂ ಫೇಸ್‌ಬುಕ್ ಮತ್ತು ಇನ್ಸ್ಟಾಗ್ರಾಂ visit_mysuru ಪೇಜನ್ನು ಫಾಲೋ ಮಾಡಿ ಎಂದು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಇಬ್ಬರು ಪೆಡ್ಲರ್‌ಗಳ ಸೆರೆ 20.19 ಲಕ್ಷ ಮೌಲ್ಯದ 57 ಕೆಜಿ ಗಾಂಜಾ ವಶ

ಮೈಸೂರು,ಜ.23(ಆರ್‌ಕೆ)- ಇಬ್ಬರು ಪೆಡ್ಲರ್‌ಗಳನ್ನು ಬಂಧಿಸಿರುವ ಸಿಸಿಬಿ ಪೊಲೀಸರು, 20,19,500 ರೂ. ಮೌಲ್ಯದ 57 ಕೆಜಿ, 700 ಗ್ರಾಂ ತೂಕದ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಉದಯಗಿರಿ ನಿವಾಸಿಗಳಾದ ಅಸಿನ್ ಮತ್ತು ತನ್ವೀರ್ ಬಂಧಿತರಾಗಿದ್ದು, ತಲೆಮರೆಸಿಕೊಂಡಿರುವ ಫರ್ಜುಗಾಗಿ ಶೋಧ ನಡೆಸುತ್ತಿದ್ದಾರೆ. ನಿಮ್ರಾ ಮಸೀದಿ ಬಳಿಯ ಪಾರ್ಕ್ ರಸ್ತೆಯಲ್ಲಿ ಹಿಂಬದಿ ನಂಬರ್ ಪ್ಲೇಟ್ ಇಲ್ಲದೇ ಆಕ್ಸಿಸ್ ಸ್ಕೂಟರ್‌ನಲ್ಲಿ ಬರುತ್ತಿದ್ದ ಇಬ್ಬರನ್ನು ವಿಚಾರಣೆ ಮಾಡಿದಾಗ ಅದರಲ್ಲಿ 1 ಕೆಜಿ ಗಾಂಜಾ ಇದ್ದು, ಅವರನ್ನು ಬಂಧಿಸಲಾಗಿತ್ತು.

ಮಹದೇವಪುರ ಮುಖ್ಯ ರಸ್ತೆಯ ಕಾವೇರಿನಗರದಲ್ಲಿರುವ ಗೋದಾಮಿಗೆ ದಾಳಿ ಮಾಡಿದಾಗ ಫರ್ಜು ಶೇಖರಿಸಿಟ್ಟಿದ್ದ 56 ಕೆಜಿ, 700 ಗ್ರಾಂ ತೂಕದ ಗಾಂಜಾ ಪತ್ತೆಯಾಯಿತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು, 20,19,500 ರೂ. ಮೌಲ್ಯದ ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಮಂಡ್ಯದಲ್ಲಿ ಗೌಡರ ಕುಟುಂಬ ಸ್ಪರ್ಧೆ

ಜೆಡಿಎಸ್ ಹಾಲಿ, ಮಾಜಿ ಶಾಸಕರ ಸಭೆಯಲ್ಲಿ ತೀರ್ಮಾನ


ಹೆಚ್.ಡಿ.ದೇವೇಗೌಡ


ಹೆಚ್.ಡಿ.ಕುಮಾರಸ್ವಾಮಿ


ನಿಖಿಲ್ ಕುಮಾರಸ್ವಾಮಿ

ಮಂಡ್ಯ, ಜ.23– ಲೋಕಸಭಾ ಸಾರ್ವತ್ರಿಕ ಚುನಾವಣೆಗೆ ಇನ್ನೂ ಮೂರು ತಿಂಗಳು ಬಾಕಿ ಇರುವಾಗಲೇ ಮಂಡ್ಯ ಕ್ಷೇತ್ರ ರಂಗೇರುವ ಲಕ್ಷಣಗಳು ಕಾಣುತ್ತಿವೆ. ಈ ಕ್ಷೇತ್ರದಲ್ಲಿ ಜೆಡಿಎಸ್– ಬಿಜೆಪಿ ಮೈತ್ರಿ ಅಭ್ಯರ್ಥಿಯಾಗಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಕುಟುಂಬಸ್ಥರೇ ಸ್ಪರ್ಧಿಸಬೇಕೆಂದು ಜಿಲ್ಲೆಯ ಜೆಡಿಎಸ್ ಪಕ್ಷದ ಹಾಲಿ ಮತ್ತು ಮಾಜಿ ಶಾಸಕರು ಒಕ್ಕೊರಲ ತೀರ್ಮಾನ ಕೈಗೊಂಡು ಪಕ್ಷದ ರಾಜ್ಯ ನಾಯಕರಿಗೆ ತಮ್ಮ ಅಭಿಪ್ರಾಯವನ್ನು ಕಳುಹಿಸಿದ್ದಾರೆ.

ಕಳೆದ ಮೂರು ದಿನಗಳ ಹಿಂದೆ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್ ಅಧ್ಯಕ್ಷತೆಯಲ್ಲಿ ಖಾಸಗಿ ಸ್ಥಳದಲ್ಲಿ ಸಭೆ ನಡೆಸಿರುವ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಶಾಸಕ ಹೆಚ್.ಟಿ. ಮಂಜು, ಮಾಜಿ ಶಾಸಕರಾದ ಕೆ.ಸುರೇಶ್‌ಗೌಡ, ಡಾ.ಕೆ. ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ಕೆ.ಟಿ.ಶ್ರೀಕಂಠೇಗೌಡ ಹಾಗೂ ಮಂಡ್ಯ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡ ಬಿ.ಆರ್. ರಾಮಚಂದ್ರ ಸುದೀರ್ಘವಾಗಿ ಚರ್ಚೆ ನಡೆಸಿದ್ದಾರೆ.

ಬಳಿಕ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಇಲ್ಲವೇ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅಥವಾ ಕಳೆದ ಲೋಕಸಭಾ ಚುನಾವಣೆಯ ಮಂಡ್ಯ ಕ್ಷೇತ್ರದ ಪರಾಜಿತ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಈ ಮೂವರ ಪೈಕಿ ಒಬ್ಬರು ಅಭ್ಯರ್ಥಿಯಾಗಬೇಕೆಂದು ಸುದೀರ್ಘವಾಗಿ ಚರ್ಚಿಸಿ, ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ನಾಯಕರು ಒಕ್ಕೊರಲ ತೀರ್ಮಾನಕ್ಕೆ ಬಂದು ತಮ್ಮ ಸಹಿಯುಳ್ಳ ಪತ್ರವನ್ನು ರಾಜ್ಯ ನಾಯಕರಿಗೆ ಕಳುಹಿಸಿದ್ದಾರೆ.

ಈ ಬಗ್ಗೆ ಇಂದು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್, ಸಭೆಯಲ್ಲಿ ಎಲ್ಲರ ತೀರ್ಮಾನವು ದೇವೇಗೌಡರು, ಕುಮಾರಸ್ವಾಮಿ ಇಲ್ಲವೇ ನಿಖಿಲ್ ಸ್ಪರ್ಧಿಸಬೇಕೆಂಬುದಾಗಿದ್ದು, ಈ ಬಗ್ಗೆ ಅಭಿಪ್ರಾಯ ಸಂಗ್ರಹಿಸಿ ನಾಯಕರಿಗೆ ಕಳುಹಿಸಿದ್ದೇವೆ ಎಂದು ಸ್ಪಷ್ಟಪಡಿಸಿದ್ದಾರೆ.

ಹೆಚ್ಡಿಕೆ ಅಖಾಡಕ್ಕಿಳಿಯಲು ವೇದಿಕೆ ಸಜ್ಜು: ಹೆಚ್.ಡಿ. ಕುಮಾರಸ್ವಾಮಿ ಅಣತಿಯಂತೆ ಸಭೆ ನಡೆದಿರುವ ಸಾಧ್ಯತೆ ಇದ್ದು, ಹೆಚ್.ಡಿ.ಕುಮಾರಸ್ವಾಮಿ ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸುವುದು ಬಹುತೇಕ ಪಕ್ಕಾ ಆಗಿದೆ. ಈ ನಿಟ್ಟಿನಲ್ಲಿ ಏಕಾಏಕಿ ಬರುವ ಬದಲು ಸಭೆ ಮಾಡಿ ಗೌಡರ ಕುಟುಂಬಸ್ಥರೇ ಬರುವಂತೆ ಒತ್ತಾಯ ಹೇರಿರುವ ರೀತಿ ಇರಲಿ ಎನ್ನುವ ಕಾರಣಕ್ಕೆ ಜಿಲ್ಲಾ ದಳಪತಿಗಳು ಸಭೆ ನಡೆಸಿರುವ ಸಾಧ್ಯತೆ ಇದೆ. ಬಿಜೆಪಿಗೆ ಬೆಂಬಲ ನೀಡಿರುವ ಸಂಸದೆ ಸುಮಲತಾ ಹಾಗೂ ಬಿಜೆಪಿಯ ಮಾಜಿ ಸಚಿವ ಕೆ.ಸಿ.ನಾರಾಯಣಗೌಡ ಮಾತ್ರ ಬಿಜೆಪಿ ಅಭ್ಯರ್ಥಿಯೇ ಸ್ಪರ್ಧಿಸಬೇಕೆಂದು ಒತ್ತಡ ಏರಿದ್ದಾರೆ. ಈ ನಿಟ್ಟಿನಲ್ಲಿ ಕುಮಾರಸ್ವಾಮಿ ಈ ಹಿಂದೆ ಕಾಂಗ್ರೆಸ್– ಜೆಡಿಎಸ್ ಮೈತ್ರಿ ಇದ್ದಾಗ ನಿಖಿಲ್ ಸ್ಪರ್ಧಿಸಿ, ಆದ ಹಿನ್ನಡೆ ಮತ್ತೆ ಆಗಬಾರದೆಂಬ ಕಾರಣಕ್ಕೆ ಈ ಬಾರಿ ಯೋಚಿಸಿ ಹೆಜ್ಜೆ ಇಡುತ್ತಿದ್ದು, ಭಾರೀ ತಂತ್ರಗಾರಿಕೆಯಿಂದ ಚುನಾವಣೆ ಎದುರಿಸಲು ಸಿದ್ಧತೆ ನಡೆಸುತ್ತಿದ್ದಾರೆ.

ಗೌಡ್ರು, ನಿಖಿಲ್ ಸ್ಪರ್ಧೆ ಇಲ್ಲ: ಜಿಲ್ಲಾ ದಳಪತಿಗಳು ಗೌಡರ ಕುಟುಂಬದಿಂದ ದೇವೇಗೌಡರು, ಕುಮಾರಸ್ವಾಮಿ ಹಾಗೂ ನಿಖಿಲ್ ಸ್ಪರ್ಧಿಸಬೇಕೆಂದು ಒತ್ತಡ ಹೇರಿದ್ದರೂ ದೇವೇಗೌಡರು ಆರೋಗ್ಯ ಸಮಸ್ಯೆಯಿಂದ ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಯುತ್ತಿಲ್ಲ. ಜೊತೆಗೆ ಅವರ ರಾಜ್ಯಸಭಾ ಅವಧಿ ಇನ್ನು ಎರಡೂವರೆ ವರ್ಷಗಳಿದೆ. ಇನ್ನು ಕಳೆದ ಲೋಕಸಭಾ ಚುನಾವಣೆಯ ಮಂಡ್ಯ ಕ್ಷೇತ್ರದ ಪರಾಜಿತ ಅಭ್ಯರ್ಥಿ ನಿಖಿಲ್ ಸಹ ಸ್ಪರ್ಧೆ ಉತ್ಸಾಹ ತೋರಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಲ್ಲೂ ಸಹ ಸೋತು ಸತತ ಎರಡು ಚುನಾವಣೆ ಸೋತಿರುವ ಹಿನ್ನೆಲೆಯಲ್ಲಿ ನಿಖಿಲ್ ಚುನಾವಣೆಯ ಮೇಲೆ ಆಸಕ್ತಿ ಕಳೆದುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಗೌಡರ ಕುಟುಂಬದಿಂದ ಕುಮಾರಸ್ವಾಮಿ ಅವರೇ ಮಂಡ್ಯದಿಂದ ಕಣಕ್ಕಿಳಿಯಬೇಕಿರುವ ಅನಿವಾರ್ಯತೆ ಇದೆ.

10 ಕೋಟಿಗೆ ಆಸೆಪಟ್ಟು 1.10 ಕೋಟಿ ಕಳೆದುಕೊಂಡ ಅತಿಯಾಸೆ ಭೂಪರು!

ಮಳವಳ್ಳಿ ಬಳಿ ವಿನೂತನ ವಂಚನೆ ಪ್ರಕರಣ ಬಯಲು


ಶಾಲೂಮ್ ಟ್ರಸ್ಟ್ ವತಿಯಿಂದ ಸನ್ಮಾನಿಸಲಾದ ಆರೋಪಿ ಸೂರಿ (ಬಲತುದಿ). ಚಿತ್ರದಲ್ಲಿ ಟ್ರಸ್ಟ್‌ನ ಪದಾಧಿಕಾರಿಗಳನ್ನು ಕಾಣಬಹುದು.

ಮಳವಳ್ಳಿ, ಜ.23– ನನಗೆ ಕೋಟಿ ಕೊಟ್ಟರೆ ನಿಮಗೆ ಹತ್ತು ಕೋಟಿ ಕೊಡುವೆ ಎಂದು ನಂಬಿಸಿ, ಟ್ರಸ್ಟ್‌ನವರಿಗೆ ಮತ್ತು ಬರಿಸುವ ತಂಪು ಪಾನೀಯ ಕುಡಿಸಿ ಮಹಾ ಖದೀಮ ಕೋಟಿ ರೂ. ದೋಚಿಕೊಂಡು ಪರಾರಿಯಾಗಿರುವ ಘಟನೆ ತಾಲೂಕಿನ ಶಿಂಷಾಪುರದಲ್ಲಿ ಸಂಭವಿಸಿದೆ.

ಶಿಂಷಾಪುರದ ಶಾಲೂಮ್ ಟ್ರಸ್ಟ್‌ನ ಪದಾಧಿಕಾರಿಗಳು, ವಂಚಕನ ಮರುಳು ಮಾತು ನಂಬಿ ಹಣ ಕಳೆದುಕೊಂಡವರಾಗಿದ್ದು, ಸೂರಿ ಎಂಬಾತ ಹಣ ದೋಚಿಕೊಂಡು ಪರಾರಿಯಾಗಿದ್ದಾನೆ. ಈತ ಎಲ್ಲಿಯವನು, ಈತನ ಪೂರ್ವಾಪರ ಏನು ಎಂಬುದು ಯಾರಿಗೂ ಗೊತ್ತಿಲ್ಲ. ಈ ಸಂಬಂಧ ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಥಳೀಯ ಸ್ವಾಮೀಜಿಯೊಬ್ಬರ ಮೂಲಕ ಸೂರಿ ಎಂಬಾತ ಶಾಲೂಮ್ ಟ್ರಸ್ಟ್‌ನ ಪದಾಧಿಕಾರಿಗಳಿಗೆ ಪರಿಚಯವಾಗಿದ್ದಾನೆ. ಟ್ರಸ್ಟ್‌ನವರ ಬಳಿ ಈತ ತಾನೊಬ್ಬ ಕೋಟ್ಯಾಧಿಪತಿ ಎಂದು ಹೇಳಿಕೊಂಡು ಅವರ ವಿಶ್ವಾಸ ಗಳಿಸಿಕೊಂಡಿದ್ದಾನೆ. ಈತ ತನಗೆ ವಿದೇಶದಿಂದ ಬಾರೀ ಹಣ ಬರುತ್ತದೆ. ನೀವು ನನಗೆ 1.10 ಕೋಟಿ ಕೊಟ್ಟರೆ ನಾನು ನಿಮಗೆ ಅದಕ್ಕೆ 10 ಪಟ್ಟು ಜಾಸ್ತಿ, ಅಂದರೆ 10 ಕೋಟಿ ಕೊಡುವೆ ಎಂದು ನಂಬಿಸಿದ್ದಾನೆ.

ಈತನ ಮಾತಿಗೆ ಮರುಳಾದ ಟ್ರಸ್ಟ್‌ನ ಪದಾಧಿಕಾರಿಗಳು, ಹಣ ಕೊಡಲು ತೀರ್ಮಾನಿಸಿದ್ದಾರೆ. ಟ್ರಸ್ಟ್‌ನ ಪದಾಧಿಕಾರಿ ಮೇರಿಯವರು ಮರುದಿನ ಬ್ಯಾಂಕಿಗೆ ಹೋಗಿ 1.10 ಕೋಟಿ ರೂ. ಡ್ರಾ ಮಾಡಿಕೊಂಡು ಬಂದಿದ್ದಾರೆ. ಈ ವಿಷಯವನ್ನು ವಂಚಕ ಸೂರಿಗೂ ತಿಳಿಸಿ, ಹಣ ಪಡೆದುಕೊಳ್ಳಲು ಬರುವಂತೆ ತಿಳಿಸಿದ್ದಾರೆ.

ಈ ಕ್ಷಣಕ್ಕಾಗಿ ಕಾದಿದ್ದ ವಂಚಕ ಸೂರಿ ಅವರು ಹೇಳಿದ ಸ್ಥಳಕ್ಕೆ ಬಂದು, ಮಾತುಕತೆ ನಡೆಸಿ ನನ್ನ ಬ್ಯಾಗಿನಲ್ಲಿ 10 ಕೋಟಿ ಹಣ ಇರುವುದಾಗಿ ತನ್ನ ಬಳಿ ಇದ್ದ ಒಂದು ಬ್ಯಾಗು ತೋರಿಸಿದ್ದಾನೆ. ಟ್ರಸ್ಟ್‌ನವರು ಸಹ ತಾವು ಡ್ರಾ ಮಾಡಿ ತಂದಿದ್ದ 1.10 ಕೋಟಿ ರೂ. ನಗದನ್ನು ತೋರಿಸಿದ್ದಾರೆ. ಅವನ ಬ್ಯಾಗು ನೋಡಿ ಸಂಪೂರ್ಣ ನಂಬಿದ ಟ್ರಸ್ಟ್‌ನವರು ಅವನಿಗೆ ಪುಷ್ಕಳವಾದ ಭೋಜನ ನೀಡಿ ಸತ್ಕರಿಸಿದ್ದಾರೆ. ಅಷ್ಟು ಸಾಲದೆಂಬಂತೆ ಅವನಿಗೆ ಶಾಲು ಹೊದಿಸಿ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಿದ್ದಾರೆ.

ಸನ್ಮಾನ ಸ್ವೀಕರಿಸಿದ ಸೂರಿ ತಾನು ತಂದಿದ್ದ ತಂಪು ಪಾನೀಯವನ್ನು ಉಪಸ್ಥಿತರಿದ್ದ ಟ್ರಸ್ಟ್‌ನ ಪದಾಧಿಕಾರಿಗಳಿಗೆ ಕುಡಿಸಿದ್ದಾನೆ. ಅದನ್ನು ಸೇವಿಸಿದ ಪದಾಧಿಕಾರಿಗಳು ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ. ತಕ್ಷಣ ಆರೋಪಿ 1.10 ಕೋಟಿ ದೋಚಿಕೊಂಡು ಪರಾರಿಯಾಗಿದ್ದಾನೆ. ಜೊತೆಗೆ ತಾನೂ 10 ಕೋಟಿ ರೂ. ತಂದಿರುವುದಾಗಿ ತೋರಿಸಿದ್ದ ನಕಲಿ ನೋಟಿನ ಬ್ಯಾಗನ್ನು ಅಲ್ಲೇ ಬಿಟ್ಟು ಹೋಗಿದ್ದಾನೆ.

ಕೆಲ ಸಮಯದ ನಂತರ ಎಚ್ಚರಗೊಂಡ ಟ್ರಸ್ಟ್‌ನವರು ಹಣಕ್ಕಾಗಿ ಹುಡುಕಾಡಿದರೆ ಹಣವೇ ಮಾಯ. ಸುತ್ತಮುತ್ತ ಹುಡುಕಾಡಿದಾಗ ಆರೋಪಿ ಬಿಟ್ಟು ಹೋಗಿದ್ದ ಹಣದ ಚೀಲವನ್ನು ಪರೀಕ್ಷಿಸಿದಾಗ ಅದರಲ್ಲಿ ನಕಲಿ ನೋಟಿನ ಬಂಡಲ್ ಇತ್ತು.

ತಾವು ಮೋಸ ಹೋಗಿರುವುದನ್ನು ಅರಿತ ಟ್ರಸ್ಟ್‌ನವರು ಬೆಳಕವಾಡಿ ಪೊಲೀಸರಿಗೆ ದೂರು ನೀಡಿದ್ದಾರೆ. ಸನ್ಮಾನ ಮಾಡುವಾಗ ತಾವು ತೆಗೆದಿದ್ದ ಆರೋಪಿಯ ಚಿತ್ರವನ್ನು ಕೂಡ ಪೊಲೀಸರಿಗೆ ನೀಡಿದ್ದಾರೆ. ಪೊಲೀಸರು ಫೋಟೋ ಇಟ್ಟುಕೊಂಡು ತನಿಖೆ ನಡೆಸುತ್ತಿದ್ದಾರೆ.

ಬೆಳ್ಳೂರು ಪಟ್ಟಣದ ಸಮಗ್ರ ಅಭಿವೃದ್ಧಿ

ಸಚಿವ ಚಲುವರಾಯಸ್ವಾಮಿ ಭರವಸೆ


ನಾಗಮಂಗಲ ತಾಲೂಕು ಬೆಳ್ಳೂರು ಪಟ್ಟಣ ಪಂಚಾಯಿತಿಯಲ್ಲಿ ಏರ್ಪಡಿಸಿದ್ದ ಕುಂದುಕೊರತೆಗಳ ಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಚೆಲುವರಾಯಸ್ವಾಮಿ ಉದ್ಘಾಟಿಸಿದರು.

ನಾಗಮಂಗಲ, ಜ.23– ಬೆಳ್ಳೂರು ಪಟ್ಟಣದ ಸಮಗ್ರ ಅಭಿವೃದ್ಧಿ ಮಾಡುವುದಾಗಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಭರವಸೆ ನೀಡಿದ್ದಾರೆ.

ಇಂದು ನಾಗಮಂಗಲ ತಾಲೂಕು ಬೆಳ್ಳೂರು ಪಟ್ಟಣ ಪಂಚಾಯಿತಿಯಲ್ಲಿ ಏರ್ಪಡಿಸಿದ್ದ ಕುಂದುಕೊರತೆ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬೆಳ್ಳೂರು ಹೋಬಳಿಯ ಪಟ್ಟಣ ಪಂಚಾಯತಿ ಹಾಗೂ ಪಂಚಾಯತಿಗೆ ಹೊಂದಿಕೊಂಡಿರುವ ಗ್ರಾಮಗಳನ್ನು ಅಭಿವೃದ್ಧಿ ಮಾಡುವುದಾಗಿ ತಿಳಿಸಿದರು. ಕುಡಿಯುವ ನೀರು, ಪಟ್ಟಣ ಪಂಚಾಯಿತಿಗೆ ನೂತನ ಕಟ್ಟಡ, ಬಸ್ ನಿಲ್ದಾಣ ಹೀಗೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವುದಾಗಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಬೆಳ್ಳೂರು ಪಟ್ಟಣದಲ್ಲಿ ನೂತನವಾಗಿ ಇಂದಿರಾ ಕ್ಯಾಂಟೀನ್ ಆರಂಭ ಮಾಡಲು ಗುದ್ದಲಿ ಪೂಜೆಯನ್ನು ಸಚಿವರು ನೆರವೇರಿಸಿದರು. ತಾಲೂಕಿನ ಬೆಳ್ಳೂರು ಹೋಬಳಿಯ ಈ ಗ್ರಾಮಗಳಲ್ಲಿಯೂ ಸಾರ್ವಜನಿಕರ ಕುಂದು ಕೊರತೆಗಳನ್ನು ಪರಿಶೀಲಿಸಲು ದೇವಿಹಳ್ಳಿ, ಆರಣಿ ಗೊಂಡೇನಹಳ್ಳಿ ಮತ್ತು ಬಿಂಡಿಗನವಿಲೆ ಗ್ರಾಪಂಗೆ ಭೇಟಿ ನೀಡಿದರು.

ಇದೇ ಸಂದರ್ಭದಲ್ಲಿ ಉಪ ವಿಭಾಗಾಧಿಕಾರಿ ನಂದೀಶ್, ತಾಲೂಕು ದಂಡಾಧಿಕಾರಿಗಳಾದ ನಹಿಮುನ್ನಿಸ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್, ಕೃಷ್ಣೇಗೌಡ, ಪಾಪಣ್ಣ ಹಾಗೂ ಇಲಾಖೆ ಅಧಿಕಾರಿಗಳು ಹಾಗೂ ಅನೇಕ ಮುಖಂಡರು ಹಾಜರಿದ್ದರು.

ಜ.25ರಂದು ಪೂರ್ವಭಾವಿ ಸಭೆ

ಮಂಡ್ಯ, ಜ.23– ಶ್ರೀರಂಗಪಟ್ಟಣ ಪುರಸಭೆಯಲ್ಲಿ 2024–25ನೇ ಸಾಲಿನ ಆಯವ್ಯಯ ಮಂಡಿಸುವ ಸಲುವಾಗಿ ಗೌರವಾನ್ವಿತ ಎಲ್ಲಾ ಜನ ಪ್ರತಿನಿಧಿಗಳು, ಹಿರಿಯ ನಾಗರಿಕರು, ಸಾರ್ವಜನಿಕರು, ಜನಪ್ರತಿನಿಧಿಗಳು ಹಾಗೂ ವಿವಿಧ ಸಂಘ ಸಂಸ್ಥೆ ಅಧ್ಯಕ್ಷರು/ಉಪಾಧ್ಯಕ್ಷರು/ಪದಾಧಿಕಾರಿಗಳಿಂದ ಸಲಹೆ ಸೂಚನೆ ಪಡೆಯಲು ಜ.25 ರಂದು ಬೆಳಗ್ಗೆ 11 ಗಂಟೆಗೆ ಶ್ರೀರಂಗಪಟ್ಟಣ ಪುರಸಭೆ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಏರ್ಪಡಿಸಲಾಗಿದೆ.

ಶ್ರೀರಂಗಪಟ್ಟಣ ಪುರಸಭೆ ವ್ಯಾಪ್ತಿಯ ನಾಗರಿಕರು ಪೂರ್ವಭಾವಿ ಸಭೆಗೆ ಆಗಮಿಸಿ ಅಮೂಲ್ಯವಾದ ಸಲಹೆ ಸೂಚನೆಗಳನ್ನು ತಿಳಿಸುವಂತೆ ಪುರಸಭೆ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ಲೇವುಡ್ ಕಾರ್ಖಾನೆ ಮಿಷನರಿ ಕಳವು ಮಾಡಿದ್ದ ನಾಲ್ವರ ಬಂಧನ


ಪ್ಲೇವುಡ್ ಕಾರ್ಖಾನೆ ಮಿಷನರಿ ಕಳ್ಳರನ್ನು ಬಂಧಿಸಿದ ಪೊಲೀಸರು.

ಮಂಡ್ಯ, ಜ.23– ಮದ್ದೂರು ತಾಲೂಕಿನ ಅಣ್ಣೂರು ಗ್ರಾಮದ ಬಳಿ ವ್ಯಾಗ್ನಸ್ ರೇಡಿಯಂ ಪ್ಲೇವುಡ್ ಕಾರ್ಖಾನೆಯಲ್ಲಿ ಕಳೆದ ಡಿಸೆಂಬರ್ 20ರಂದು 40 ಲಕ್ಷ ರೂ. ಮೌಲ್ಯದ ಮಿಷನರಿಗಳನ್ನು ಕಳ್ಳತನ ಮಾಡಿದ್ದ ನಾಲ್ವರನ್ನು, ಕೆ.ಎಂ. ದೊಡ್ಡಿ ಪೊಲೀಸರು ಬಂಧಿಸಿದ್ದಾರೆ.

ನಾಲ್ವರು ಆರೋಪಿಗಳು ಪ್ಲೇವುಡ್ ಕಾರ್ಖಾನೆ ಮಿಷನರಿಗಳನ್ನು ಕಳ್ಳತನ ಮಾಡಿ ಬೆಂಗಳೂರು, ಹಾಸನ ಹಾಗೂ ಆಲೂರಿನಲ್ಲಿ ಸುಮಾರು 40 ಲಕ್ಷಕ್ಕೆ ಮಾರಾಟ ಮಾಡಿದ್ದರು ಎನ್ನಲಾಗಿದ್ದು, ಇದೀಗ ನಾಲ್ವರು ಕಳ್ಳರನ್ನು ಬಂಧಿಸಿದ್ದು, ಬಂಧಿತರಿಂದ 2 ಕ್ಯಾಂಟರ್, 1 ಕಾರು ಹಾಗೂ ಗ್ಯಾಸ್ ಕಟ್ಟರ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ಎಎಸ್ಪಿಗಳಾದ ತಿಮ್ಮಯ್ಯ, ಗಂಗಾಧರ ಸ್ವಾಮಿ ಅವರ ಮಾರ್ಗದರ್ಶನದಲ್ಲಿ ಕೆ.ಎಂ. ದೊಡ್ಡಿ ಠಾಣೆಯ ಆರಕ್ಷಕ ನಿರೀಕ್ಷಕರಾದ ಆನಂದ್, ಎಸ್ಐ ರಾಮಸ್ವಾಮಿ, ಭೀಮಪ್ಪ, ಸಿಬ್ಬಂದಿಗಳಾದ ಮಹೇಶ್, ರಾಜೇಂದ್ರ ನಟರಾಜ್ ವಿಠಲ್, ಸುಬ್ರಮಣಿ, ಅರುಣ್, ವಾಸುದೇವ, ಲೋಕೇಶ್ ನೇತೃತ್ವದ ತಂಡ ಖತರ್ನಾಕ್ ಕಳ್ಳರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ನಾನಾ ಸಮಸ್ಯೆ ನಿವಾರಣೆಗೆ ಫೆ.6ರಿಂದ ದಸಂಸ ಅನಿರ್ದಿಷ್ಟಾವದಿ ಚಳವಳಿ


ನಂಜನಗೂಡು ಸರ್ಕಾರಿ ಅತಿಥಿಗೃಹದಲ್ಲಿ ದಸಂಸ ಮುಖಂಡ ದೇವಗಳ್ಳಿ ಸೋಮಶೇಖರ್ ಅಧ್ಯಕ್ಷತೆಯಲ್ಲಿ ನಡೆದ ದಲಿತ ಮುಖಂಡರ ಸಭೆ ನಡೆಯಿತು.

ನಂಜನಗೂಡು, ಜ.23(ಎಸ್‌ಪಿಎನ್)– ನಂಜನಗೂಡು ತಾಲೂಕಿನ ಭೂಮಿ, ವಸತಿ ಹಾಗೂ ಸ್ಮಶಾನ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯವಹಿಸಿರುವ ತಾಲೂಕು ಆಡಳಿತ ವಿರುದ್ಧ ಫೆ.6ರಂದು ಅನಿರ್ದಿಷ್ಟಾವಧಿ ಚಳವಳಿ ನಡೆಸಲು ದಲಿತ ಸಂಘರ್ಷ ಸಮಿತಿ (ನಂಜನಗೂಡು ಘಟಕ) ನಿರ್ಧರಿಸಿದೆ.

ನಂಜನಗೂಡು ಸರ್ಕಾರಿ ಅತಿಥಿಗೃಹದಲ್ಲಿ ದಸಂಸ ಮುಖಂಡ ದೇವಗಳ್ಳಿ ಸೋಮಶೇಖರ್ ಅಧ್ಯಕ್ಷತೆಯಲ್ಲಿ ನಡೆದ ದಲಿತ ಮುಖಂಡರ ಸಭೆಯಲ್ಲಿ ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಸರ್ವೆ ನಂ.367 ಜಮೀನು 1978ರಲ್ಲಿ ಸಿದ್ದಯ್ಯ ಎಂಬುವರಿಗೆ ಸರ್ಕಾರದಿಂದ ಭೂಮಿ ಮಂಜೂರಾಗಿತ್ತು. ಸದರಿ ಭೂಮಿಗೆ ಹೆಚ್.ಸಿ.ಬಸವರಾಜು ಎಂಬುವರು ನಕಲಿ ದಾಖಲೆ ಸೃಷ್ಟಿಸಿರುವುದನ್ನು ಖಂಡಿಸಿ, ಚಿಲಕಹಳ್ಳಿ ಗ್ರಾಮದ ಸರ್ವೆ ನಂ.42ರಲ್ಲಿ 1.6 ಎಕರೆ ಪ್ರದೇಶದಲ್ಲಿ ದಲಿತರು ವಾಸಿಸುತ್ತಿದ್ದು, ಇಲ್ಲಿ ಸ್ಥಳದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಲು ಅಡ್ಡಿಪಡಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಲು ತಹಸೀಲ್ದಾರ್ ಹಿಂದೇಟು ಹಾಕುತ್ತಿದ್ದಾರೆ ಎಂದರು.

ಕೆರೆಹುಂಡಿ ಗ್ರಾಮದ ದಲಿತರಿಗೆ ಅಧಿಕೃತವಾಗಿ ಸ್ಮಶಾನ ಮಂಜೂರು. ಅನಧಿಕೃತವಾಗಿ ಬಳಸುತ್ತಿರುವ ಸ್ಮಶಾನದ ಜಾಗದ ಪಕ್ಕದ ಕೆರೆ ಜಾಗದ ಒತ್ತುವರಿ ತೆರವು. ದೊಡ್ಡಕವಲಂದೆ ಗ್ರಾಮದ ಸರ್ವೆ ನಂ. 317/3 ಪುಟ್ಟಸ್ವಾಮಿ ಬಿನ್ ಜವನಯ್ಯ ಎಂಬುವವರಿಂದ ಬೀಳಿಗೆ ಸಂಬಂಧಿಸಿದ ಕಿಮ್ಮತ್ತು ಶುಲ್ಕ ಪಾವತಿಸಿಕೊಂಡು 2 ವರ್ಷವಾದರೂ ಜಮೀನು ಖಾತೆ ಮಾಡಿಕೊಡದೇ ಸತಾಯಿಸುತ್ತಿರುವುದು. ತಾಲೂಕಿನ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸುವಲ್ಲಿ ವಿಫಲವಾಗಿರುವುದನ್ನು ವಿರೋಧಿಸಿ ಪ್ರತಿಭಟನೆ ಹಮ್ಮಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಸಮಿತಿ ಮುಖಂಡರಾದ ಜಿಲ್ಲಾ ಸಂಯೋಜಕ ಕಾರ್ಯ ಬಸವಣ್ಣ, ಸುನೀತಾ ಪ್ರಕಾಶ್‌ಗೌಡ, ಪ್ರಸನ್ನ ತಳೂರು, ಹುನಗಳ್ಳಿ ಗೋವಿಂದ, ಪ್ರಕಾಶ್‌ಹುಣಸೂರು, ತಾಲೂಕು ಸಂಯೋಜಕ ಕುಮಾರ್‌ಕಳಲೆ, ಸೋಮಣ್ಣ, ಪುಟ್ಟಬುದ್ದಿ, ಚಿಕ್ಕಣ್ಣ, ಕೃಷ್ಣ, ಸಿದ್ದರಾಜು, ರವಿ, ನವೀನ, ಮಲಿಯಪ್ಪ ಶಿವರಾಜು ಮುಂತಾದವರು ಭಾಗವಹಿಸಿದ್ದರು.

ಪರಿಷ್ಕೃತ ಮತದಾರರ ಪಟ್ಟಿ ಬಿಡುಗಡೆ

ಮಂಡ್ಯ ಜಿಲ್ಲೆಯಲ್ಲಿ 15.41 ಲಕ್ಷ ಮತದಾರರು



ಮಂಡ್ಯ, ಜ.23– ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ 2024 ಜ.1ನ್ನು ಅರ್ಹತಾ ದಿನಾಂಕವನ್ನಾಗಿಟ್ಟುಕೊಂಡು ನಡೆಸಿದ ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆಯ ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗಿದ್ದು, ಜಿಲ್ಲೆಯಲ್ಲಿ 15,41,856 ಮತದಾರರಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ್ ತಿಳಿಸಿದರು.

ವಿವಿಧ ರಾಜಕೀಯ ಪಕ್ಷಗಳ ಮುಖಂಡರ ಸಭೆ ನಡೆಸಿ ಮಾತನಾಡಿದ ಅವರು, 18 ವರ್ಷ ಮೇಲ್ಪಟ್ಟ ಅರ್ಹ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದ್ದು 2024 ಜ.22ರ ಅಂತ್ಯಕ್ಕೆ ಸೇರ್ಪಡೆಯಾಗಿರುವ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗಿದೆ. ಸಾರ್ವಜನಿಕರು ತಪ್ಪದೇ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವ ಬಗ್ಗೆ ಪರಿಶೀಲಿಸಿಕೊಳ್ಳಬೇಕು ಎಂದರು.

ಜಿಲ್ಲೆಯಲ್ಲಿ 15,41,856 ಮತದಾರರು: ಮಳವಳ್ಳಿ ತಾಲೂಕಿನಲ್ಲಿ 272 ಮತಗಟ್ಟೆಗಳಿದ್ದು, ಗಂಡು–124922, ಹೆಣ್ಣು–125939, ತೃತೀಯ ಲಿಂಗಿಗಳು–25, ಒಟ್ಟು 250886 ಮತದಾರರಿದ್ದಾರೆ. ಮದ್ದೂರು ತಾಲೂಕಿನಲ್ಲಿ 254 ಮತಗಟ್ಟೆಗಳಿದ್ದು ಗಂಡು–103170, ಹೆಣ್ಣು–109993, ತೃತೀಯ ಲಿಂಗಿಗಳು–24, ಒಟ್ಟು 213187 ಮತದಾರರಿದ್ದಾರೆ.

ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ 264 ಮತಗಟ್ಟೆಗಳಿದ್ದು, ಗಂಡು–99402, ಹೆಣ್ಣು–101662, ತೃತೀಯ ಲಿಂಗಿಗಳು–7, ಒಟ್ಟು 201071 ಮತದಾರರಿದ್ದಾರೆ.

ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ 262 ಮತಗಟ್ಟೆಗಳಿದ್ದು, ಗಂಡು–110059, ಹೆಣ್ಣು–115311, ತೃತೀಯ ಲಿಂಗಿಗಳು– 33, ಒಟ್ಟು 225403 ಮತದಾರರಿದ್ದಾರೆ. ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ 249 ಮತ ಗಟ್ಟೆಗಳಿದ್ದು, ಗಂಡು–105136, ಹೆಣ್ಣು–110034, ತೃತೀಯ ಲಿಂಗಿಗಳು–45, ಒಟ್ಟು 215215 ಮತದಾರರಿದ್ದಾರೆ. ನಾಗಮಂಗಲ ವಿಧಾನಸಭಾ ಕ್ಷೇತ್ರದಲ್ಲಿ 260 ಮತಗಟ್ಟೆಗಳಿದ್ದು, ಗಂಡು–106965, ಹೆಣ್ಣು–107714, ತೃತೀಯ ಲಿಂಗಿಗಳು– 11, ಒಟ್ಟು 214690 ಮತದಾರರಿದ್ದಾರೆ.

ಕೆ.ಆರ್.ಪೇಟೆ ವಿಧಾನಸಭಾ ಕ್ಷೇತ್ರದಲ್ಲಿ 261 ಮತಗಟ್ಟೆಗಳಿದ್ದು, ಗಂಡು–110594, ಹೆಣ್ಣು–110799, ತೃತೀಯ ಲಿಂಗಿಗಳು–11, ಒಟ್ಟು 221404 ಮತದಾರರಿದ್ದಾರೆ.

ಒಟ್ಟಾರೆ ಜಿಲ್ಲೆಯಲ್ಲಿ 1822 ಮತ ಗಟ್ಟೆಗಳಿದ್ದು, ಗಂಡು–760248, ಹೆಣ್ಣು–781452, ತೃತೀಯ ಲಿಂಗಿಗಳು–156, ಒಟ್ಟು–1541856 ಮತದಾರರಿದ್ದಾರೆ.

ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಸಂದರ್ಭದಲ್ಲಿ ಯುವ ಮತದಾರರ ಸೇರ್ಪಡೆಗೆ ಹೆಚ್ಚಿನ ನಿಗಾ ವಹಿಸಿದ್ದು ಯುವಕರು–16216, ಯುವತಿಯರು–13958, ಇತರೆ–9 ಸೇರಿದಂತೆ ಒಟ್ಟು–30183 ಯುವ ಮತದಾರರನ್ನು ಸೇರ್ಪಡೆ ಮಾಡಲಾಗಿದೆ.

ಜಿಲ್ಲೆಯಲ್ಲಿ ಸೇವಾ ಮತದಾರರು ಗಂಡು–610, ಹೆಣ್ಣು–23 ಸೇರಿದಂತೆ ಒಟ್ಟು–633 ಸೇವಾ ಮತದಾರರಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 20931 ವಿಕಲಚೇತನ ಮತದಾರರಿದ್ದು ಗಂಡು–12397, ಹೆಣ್ಣು–8534, ಮತದಾರರಿದ್ದಾರೆ ಎಂದರು.

ಅಪರ ಜಿಲ್ಲಾಧಿಕಾರಿ ಡಾ. ಎಚ್.ಎಲ್.ನಾಗರಾಜ್ ಮಾತನಾಡಿ, ಅಂತಿಮ ಮತದಾರರ ಪಟ್ಟಿ ವೋಟರ್ ಹೆಲ್ಪ್‌ಲೈನ್ ಆಪ್ ಹಾಗೂ ಮುಖ್ಯ ಚುನಾವಣಾಧಿಕಾರಿಗಳ ವೆಬ್‌ಸೈಟ್ https://CEO.karnataka.gov.in ನಲ್ಲಿ ಲಭ್ಯವಿದ್ದು ಮತದಾರರು ತಮ್ಮ ಹೆಸರನ್ನು ಪರಿಶೀಲಿಸಿ ಕೊಳ್ಳಬೇಕು ಎಂದರು. ಸಭೆಯಲ್ಲಿ ಉಪ ವಿಭಾಗಾಧಿಕಾರಿ ಶಿವಮೂರ್ತಿ, ತಹಶೀಲ್ದಾರ್ ಶಿವಕುಮಾರ್, ರಾಜಕೀಯ ಪಕ್ಷಗಳ ಮುಖಂಡರುಗಳಾದ ಮಂಜುನಾಥ, ರಮೇಶ್, ದಿನೇಶ್, ಬೊಮ್ಮಯ್ಯ, ನವೀನ್ ಉಪಸ್ಥಿತರಿದ್ದರು.

ನ್ಯಾಯಬೆಲೆ ಅಂಗಡಿ ತೆರೆಯಲು ಅರ್ಜಿ ಆಹ್ವಾನ

ಮಂಡ್ಯ, ಜ.23– ಕೆ.ಆರ್.ಪೇಟೆ ತಾಲೂಕಿನಲ್ಲಿ ವಿವಿಧ ಕಾರಣಗಳಿಂದ ರದ್ದಾಗಿರುವ ನ್ಯಾಯಬೆಲೆ ಅಂಗಡಿಗಳಿಗೆ ಹಲವು ವರ್ಷಗಳಿಂದ ಪರ್ಯಾಯ ವ್ಯವಸ್ಥೆ ಮೂಲಕ ಪಡಿತರ ಧಾನ್ಯಗಳನ್ನು ವಿತರಣೆ ಮಾಡುತ್ತಿರುವ ಹಾಗೂ ಹೊಸದಾಗಿ ಅವಶ್ಯವಿರುವ ಗ್ರಾಮಗಳಿಗೆ ಹೊಸ ನ್ಯಾಯಬೆಲೆ ಅಂಗಡಿ ತೆರೆಯಲು ಅರ್ಜಿ ಆಹ್ವಾನಿಸಲಾಗಿದೆ.

ಮೋದೂರು, ಆಲೇನಹಳ್ಳಿ, ಊಗಿನಹಳ್ಳಿ, ಆಲಂಬಾಡಿ, ಹೇಮಾವತಿ ಬಡಾವಣೆ, ಕೆ.ಆರ್.ಪೇಟೆ ಟೌನ್, ಮಾದಾಪುರಕೊಪ್ಪಲು ನ್ಯಾಯಬೆಲೆ ಅಂಗಡಿ ತೆರೆಯಲು ಉದ್ದೇಶಿಸಿರುವ ಗ್ರಾಮಗಳಾಗಿವೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿ. ಪ್ರಮೋದಗೆ ಪಿಎಚ್.ಡಿ ಪದವಿ



ಮೈಸೂರು, ಜ. 23– ಡಾ. ಎ. ಬಾಲಸುಬ್ರಮಣಿಯನ್ ಅವರ ಮಾರ್ಗದರ್ಶನದಲ್ಲಿ ಜಿ. ಪ್ರಮೋದ ಅವರು ಭೂ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಜಯಂತಿ ಪ್ರಯುಕ್ತ ಟೀಂ ಮೈಸೂರು ವತಿಯಿಂದ ನಗರದ ನೇತಾಜಿ ಸುಭಾಷ್ ಚಂದ್ರ ಬೋಸ್ ವೃತ್ತದ ಫಲಕವನ್ನು ಅಲಂಕರಿಸಿ, ಬೋಸ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಗೋಕುಲ್ ಗೋವರ್ಧನ್, ಯಶ್ವಂತ್, ಕಿರಣ್ ಜೈ ರಾಮ್ ಗೌಡ, ಹಿರಿಯಣ್ಣ, ಮುರಳಿ, ದಾಮೋದರ್, ಪ್ರಸನ್ನ ರಾಜ್ ಗುರು, ನವೀನ್, ಹರೀಶ್ ಶೆಟ್ಟಿ, ಕೃಷ್ಣ ಮಂಜು ಹುಣಸೂರು, ರಾಘವೇಂದ್ರ, ಸುನಿಲ್, ಹೇಮಂತ್ ಕುಮಾರ್ ಮತ್ತಿತರರು ಉಪಸಿತರಿದ್ದರು.

ಶಾಲೆಗಳ ಅಭಿವೃದ್ಧಿಗೆ ಹಳೆಯ ವಿದ್ಯಾರ್ಥಿಗಳ ಸಹಕಾರ ಅಗತ್ಯ


ಅಗ್ರಹಾರಬಾಚಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಶಾಲಾ ಮಕ್ಕಳ ಹಬ್ಬ ಹಾಗೂ ಗುರುವಂದನಾ ಕಾರ್ಯಕ್ರಮದಲ್ಲಿ ಶಾಲೆಯಲ್ಲಿ ಸೇವೆ ಸಲ್ಲಿಸಿದ ಶಿಕ್ಷಕರನ್ನು ಸನ್ಮಾನಿಸಿ, ಗೌರವಿಸಲಾಯಿತು. ಬಿ.ಇ.ಓ ಸೀತಾರಾಂ, ಸಮಾಜ ಸೇವಕರಾದ ಆರ್‌ಟಿಓ ಮಲ್ಲಿಕಾರ್ಜುನ್, ಮನ್‌ಮುಲ್ ನಿರ್ದೇಶಕ ಡಾಲು ರವಿ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕೆ.ಆರ್.ಪೇಟೆ, ಜ.23– ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಶಾಲೆಯ ಹಳೆಯ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರ ಸಹಕಾರ ಅಗತ್ಯವಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್. ಸೀತಾರಾಂ ತಿಳಿಸಿದ್ದಾರೆ.

1926ರಲ್ಲಿ ಆರಂಭವಾಗಿ ಶತಮಾನದ ಅಂಚಿನಲ್ಲಿರುವ ಕೆ.ಆರ್.ಪೇಟೆ ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಮಕ್ಕಳ ಹಬ್ಬ ಹಾಗೂ ಗುರುವಂದನಾ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣ ಹೊಂದಿದ ಶಿಕ್ಷಕರನ್ನು ಆಯ್ಕೆ ಮಾಡಿದ್ದೇವೆ. ಉಚಿತವಾಗಿ ಪಠ್ಯ ಪುಸ್ತಕ, ಸಮವಸ್ತ್ರ, ಉಚಿತ ಮಧ್ಯಾಹ್ನ ಬಿಸಿಯೂಟ, ಶೂ, ಸೈಕಲ್ ಸೇರಿದಂತೆ ಹಲವು ಸೌಲಭ್ಯಗಳನ್ನು ಶಿಕ್ಷಣ ಇಲಾಖೆ ನೀಡುತ್ತಿದೆ. ಆದರೂ ಸಹ ಪೋಷಕರು ಖಾಸಗಿ ಶಾಲೆಗಳತ್ತ ವ್ಯಾಮೋಹ ಹೊಂದಿರುವುದು ಸರಿಯಲ್ಲ. ಇದು ಇತ್ತೀಚೆಗೆ ಕಡಿಮೆಯಾಗಿದೆ. ಏಕೆಂದರೆ ಸರ್ಕಾರಿ ಶಾಲೆಗಳಲ್ಲಿಯೂ ಮಕ್ಕಳ ಮನೆ ಅಥವಾ ಕೂಸಿನ ಮನೆ ಪೂರ್ವ ಪ್ರಾಥಮಿಕ ಶಾಲೆಯನ್ನು ಆರಂಭಿಸಿ ಇಂಗ್ಲಿಷ್ ಬೋಧನೆ ಮಾಡುತ್ತಿರುವ ಕಾರಣ ಸರ್ಕಾರಿ ಶಾಲೆಗಳತ್ತ ಪೋಷಕರು ವಾಲುತ್ತಿದ್ದಾರೆ ಎಂದು ಅವರು ಹೇಳಿದರು.

ಸಮಾಜ ಸೇವಕ ಹಾಗೂ ಆರ್‌ಟಿಓ ಅಧಿಕಾರಿಗಳ ಸಂಘದ ರಾಜ್ಯಾಧ್ಯಕ್ಷ ಆರ್‌ಟಿಓ ಮಲ್ಲಿಕಾರ್ಜುನ್ ಶಾಲೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಹಾಗೂ ಬೇರೆ ಕಡೆ ವರ್ಗಾವಣೆಗೊಂಡಿರುವ ಶಿಕ್ಷಕರನ್ನು ಅಭಿನಂದಿಸಿದರು.

ಮನ್‌ಮುಲ್ ನಿರ್ದೇಶಕ ಡಾಲು ರವಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತ್ನಾಡಿದರು. ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಮಹೇಶ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಾಲೆಯ ಉನ್ನತೀಕರಣ ಸಮಿತಿಯ ಅಧ್ಯಕ್ಷ ನಿವೃತ್ತ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಪಟೇಲ್ ಹನುಮಂತೇಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದರು. ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ಎ.ಬಿ. ಪುಟ್ಟಸ್ವಾಮೀಗೌಡ ಆಶಯ ನುಡಿಗಳನ್ನಾಡಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎ.ಸಿ.ದಿವಿ ಕುಮಾರ್, ದಾನಿಗಳಾದ ಎ.ಜೆ.ಹರೀಶ್ ಗೌಡ, ಎ.ಡಿ. ಮಧು, ಎ.ಬಿ.ಅಶೋಕ್, ಎ.ಸಿ. ಅವಿನಾಶ್, ಪ್ರಭು, ಕೀರ್ತಿ, ಕೆ.ಪಿ.ರಕ್ಷಿತ್, ಪ್ರತಾಪ್, ಪ್ರದೀಪ್, ಪೋಸ್ಟ್ ಗುಂಡಪ್ಪ, ಜಬೀಉಲ್ಲಾ, ಎ.ವಿ.ಕೃಷ್ಣ, ಮಾಜಿ ಛೇರ್ಮನ್ ರಾಮಚಂದ್ರೇಗೌಡ, ಎ.ಬಿ. ಕುಮಾರ್, ಗಾಯಕ ಅಬಾರಾಶೆ ಚಂದ್ರಶೇಖರ್, ಎ.ಎಸ್. ಸೋಮಶೇಖರ್, ಪ್ರೌಢಶಾಲಾ ಎಸ್‌ಡಿಎಂಸಿ ಅಧ್ಯಕ್ಷ ಕುಮಾರ್, ಮುಖ್ಯ ಶಿಕ್ಷಕ ಎ.ಹೆಚ್. ಯೋಗೇಶ್, ತಾ. ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಪಿ.ಜೆ. ಕುಮಾರ್, ಪ್ರಧಾನ ಕಾರ್ಯದರ್ಶಿ ಎಸ್.ಆರ್. ಆನಂದ್‌ಕುಮಾರ್, ಮಹದೇವೇಗೌಡ, ಮಹಾದೇವಯ್ಯ, ಬಿಇಒಆರ್‌ಟಿ ವಿಭಾಗದ ಬಿಆರ್‌ಪಿ ಎಂ.ಡಿ.ಯೋಗೇಂದ್ರ, ಎಂ.ಎಸ್.ಮಹಾ ದೇವಪ್ಪ, ತಾ.ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪದ್ಮೇಶ್, ಪ್ರಧಾನ ಕಾರ್ಯದರ್ಶಿ ಲಕ್ಷ್ಮಣಗೌಡ, ಸಂಘಟನಾ ಕಾರ್ಯದರ್ಶಿ ಜಿ.ಎಸ್. ಮಂಜು, ಜಿಲ್ಲಾ ಉಪಾಧ್ಯಕ್ಷ ಎಂ.ಎಸ್. ಮೋಹನ್ ಕುಮಾರಿ, ತಾ.ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ನಾಗರಾಜು, ಸಿ.ಆರ್.ಪಿ. ಅಶೋಕ್, ಮಂಜುನಾಥ್, ಎ.ಜೆ. ಧನೇಂದ್ರೇ ಗೌಡ, ಬಿ.ಹೆಚ್. ಮಂಜೇಗೌಡ, ಡಿ.ಬೋರೇಗೌಡ, ಎ.ಡಿ. ಬಸವ ರಾಜು, ತಾಲೂಕು ಪ.ಜಾ, ಪ.ಪಂ. ಶಿಕ್ಷಕರ ಸಂಘದ ಅಧ್ಯಕ್ಷ ಯೋಗೇಶ್, ಶಿಕ್ಷಣ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ನಿರ್ದೇಶಕ ಎ.ಕೆ.ದೇವರಾಜು, ಎ.ಹೆಚ್.ಯೋಗೇಶ್, ಸಿಂಧುಘಟ್ಟ ನಾಗೇಶ್, ದೊರೆಸ್ವಾಮಿ, ಗ್ರಾಪಂ ಸದಸ್ಯ ಆರ್.ರಮೇಶ್, ಚನ್ನೇಗೌಡ, ಸಾವಿತ್ರಮ್ಮ, ಆರ್.ಶ್ರೀನಿವಾಸ್, ಶಾಲೆಯ ಮುಖ್ಯ ಶಿಕ್ಷಕ ಎ.ಹೆಚ್. ಯೋಗೇಶ್, ಸಹ ಶಿಕ್ಷಕರಾದ ತಮ್ಮಯ್ಯ, ನಂಜಪ್ಪ, ಶಾಂತಕುಮಾರಿ, ಟಿ.ಜೆ.ವಿಮಲಾ, ಎನ್.ಎಸ್.ಕುಮಾರ್, ಬಿ.ಎನ್. ಮಹೇಶ್, ಮತ್ತಿತರರು ಉಪಸ್ಥಿತರಿದ್ದರು.

ನಂತರ ಮಕ್ಕಳ ಮನೆ ಹಾಗೂ 1ರಿಂದ 7ನೇ ತರಗತಿಯ ವಿದ್ಯಾರ್ಥಿಗಳಿಂದ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಪೋಷಕರು ಹಾಗೂ ಸಾರ್ವಜನಿಕರನ್ನು ರಂಜಿಸಿದವು.

ಮುಖ್ಯಮಂತ್ರಿ ಸಿದ್ದರಾಮಯ್ಯರ ಮೈಸೂರು, ಕೊಡಗು ಪ್ರವಾಸ



ಮೈಸೂರು, ಜ.23(ಎಸ್‌ಬಿಡಿ)– ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎರಡು ದಿನ ಮೈಸೂರು–ಕೊಡಗು ಜಿಲ್ಲಾ ಪ್ರವಾಸ ಕೈಗೊಂಡಿದ್ದಾರೆ. ಜಿಲ್ಲೆಯ ಪಿರಿಯಾಪಟ್ಟಣ ತಾಲೂಕು ಬೈಲುಕುಪ್ಪೆ ಕ್ಯಾಂಪ್‌ಗೆ ಹೆಲಿಕಾಪ್ಟರ್ ಮೂಲಕ ಬುಧವಾರ ಬೆಳಗ್ಗೆ 11.20ಕ್ಕೆ ಸಿಎಂ ಆಗಮಿಸಲಿದ್ದು, ನಂತರ ಮುತ್ತಿನಮುಳುಸೋಗೆ ಗ್ರಾಮದ ಬಳಿ ಕಾವೇರಿ ನದಿಯಿಂದ ನೀರೆತ್ತಿ 79 ಗ್ರಾಮಗಳ 150 ಕೆರೆ–ಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಿ, ಸಾರ್ವಜನಿಕ ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಬಳಿಕ ಪಿರಿಯಾಪಟ್ಟಣದ ಸರ್ಕ್ಯೂಟ್ ಹೌಸ್‌ನಲ್ಲಿ ಸಂಜೆ 4 ಗಂಟೆವರೆಗೆ ವಿಶ್ರಾಂತಿ ಪಡೆದು, ಹೆಲಿಕಾಪ್ಟರ್ ಮೂಲಕ ಮೈಸೂರಿಗೆ ಆಗಮಿಸಿ, ವಾಸ್ತವ್ಯ ಹೂಡಲಿದ್ದಾರೆ. ಗುರುವಾರ ಬೆಳಗ್ಗೆ 9.45ಕ್ಕೆ ಮೈಸೂರಿನಿಂದ ಹೆಲಿಕಾಪ್ಟರ್ ಮೂಲಕ ಕೊಡಗು ಜಿಲ್ಲೆ ವಿರಾಜಪೇಟೆ ತಾಲೂಕು ಪಂಜರಪೇಟೆಗೆ ತೆರಳಿ, ಸಿಎಂ ಕಾನೂನು ಸಲಹೆಗಾರರೂ ಆದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣನವರ ನಿವಾಸಕ್ಕೆ ಭೇಟಿ ನೀಡಿ ಬಳಿಕ ಬೆಳಗ್ಗೆ 10.30ಕ್ಕೆ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಮಡಿಕೇರಿಯ ನೂತನ ಆರಕ್ಷಕ ಅಧೀಕ್ಷಕರ ಕಚೇರಿ ಕಟ್ಟಡ ಉದ್ಘಾಟನೆ ಹಾಗೂ ಜಿಲ್ಲೆಯ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸಿ, ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದ ಬಳಿಕ ಸಂಜೆ 4.15ಕ್ಕೆ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ.

ಹೈಕೋರ್ಟ್‌ನಲ್ಲಿ ಪಿಐಎಲ್ ಇತ್ಯರ್ಥಗೊಳ್ಳುವವರೆಗೆ ಗನ್‌ಹೌಸ್ ಸಮೀಪದ ವೃತ್ತದಲ್ಲಿ ಪ್ರತಿಮೆ ಅನಾವರಣ, ಯಾವುದೇ ನಿರ್ಮಾಣಕ್ಕೆ ಸುಪ್ರೀಂಕೋರ್ಟ್ ತಡೆ

ಮೈಸೂರು,ಜ.23(ಪಿಎಂ)– ಮೈಸೂರು ಗನ್‌ಹೌಸ್ ಸಮೀಪದ ವೃತ್ತದಲ್ಲಿ ಪ್ರತಿಮೆ ಅನಾವರಣ ಮತ್ತು ಯಾವುದೇ ನಿರ್ಮಾಣ ಕಾರ್ಯ ಕೈಗೊಳ್ಳದಂತೆ ಸೋಮವಾರ ಸುಪ್ರೀಂಕೋರ್ಟ್ ತೀರ್ಪು ನೀಡಿದೆ ಎಂದು ಹೈಕೋರ್ಟ್ ವಕೀಲ ಸಿ.ಎಂ. ಸುಬ್ರಹ್ಮಣ್ಯ ತಿಳಿಸಿದರು.

ಪ್ರತಿಮೆ ಆಕ್ಷೇಪಿಸಿ ಮೊಕದ್ದಮೆ ದಾಖಲಿಸಿದವರ ಪರ ಕೋರ್ಟ್‌ನಲ್ಲಿ ವಾದ ಮಂಡಿಸುತ್ತಿರುವ ಅವರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಸುಪ್ರೀಂ ಕೋರ್ಟ್‌ಗೆ ಸ್ಪೆಷಲ್ ಲೀವ್ ಪಿಟಿಷನ್ ಸಲ್ಲಿಸಲಾಗಿತ್ತು. ಈ ಸಂಬಂಧ ವಿಚಾರಣೆ ನಡೆದು ಜ.22ರವರೆಗೆ ಪ್ರತಿಮೆ ಅನಾವರಣ ಮಾಡದಂತೆ ಮಧ್ಯಂತರ ತಡೆ ನೀಡಿದ್ದರು. ಇದೀಗ ಈ ಸಂಬಂಧ ಕರ್ನಾಟಕ ಹೈಕೋರ್ಟ್‌ನಲ್ಲಿ ದಾಖಲಿಸಿರುವ ಪಿಐಎಲ್ (ಪಬ್ಲಿಕ್ ಇಂಟ್ರೆಸ್ಟ್ ಲಿಟಿಗೇಷನ್) ಇತ್ಯರ್ಥಗೊಳ್ಳುವವರೆಗೆ ಯಾವುದೇ ಪ್ರತಿಮೆ ಅನಾವರಣ ಮಾಡದಂತೆ ಹಾಗೂ ಯಾವುದೇ ನಿರ್ಮಾಣ ಸಹ ಮಾಡದಂತೆ ಸೋಮವಾರ ಸುಪ್ರೀಂಕೋರ್ಟ್ ಆದೇಶ ಮಾಡಿದೆ ಎಂದು ಅವರು ತಿಳಿಸಿದರು.

ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ: ಮಸ್ಕ್ ಬೆಂಬಲ

ನ್ಯೂಯಾರ್ಕ್: ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ (ಯುಎನ್‌ಎಸ್‌ಸಿ) ಖಾಯಂ ಸದಸ್ಯರಾಗಿ ಭಾರತಕ್ಕೆ ಇಲ್ಲದಿರುವುದು ಅಸಂಬದ್ಧ ಎಂದು ಖ್ಯಾತ ಉದ್ಯಮಿ ಎಲಾನ್ ಮಸ್ಕ್ ಹೇಳಿದ್ದಾರೆ ವಿಶ್ವಸಂಸ್ಥೆ ಭದ್ರತಾ ಮಂಡಳಿ, ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಗಳನ್ನು ಸಮರ್ಪಕವಾಗಿ ಪ್ರತಿನಿಧಿಸುವುದಿಲ್ಲ. ಅಲ್ಲದೆ ಇದರ ಕೂಲಂಕುಶ ಪರೀಕ್ಷೆ ನಡೆಯಬೇಕು ಎಂದರು.

ಒಂದನೇ ಪುಟದಿಂದ

ಸಜ್ಜಾಗಿರುವ ಮೈಸೂರಿನ ಪುಣ್ಯಾ ನಂಜಪ್ಪ

ಆದರೆ ಛಲ ಬಿಡದ ಪುಣ್ಯಾ ನಂಜಪ್ಪ ಭಾರತೀಯ ವಾಯು ಸೇನೆಗೆ ಸೇರಬೇಕೆಂಬ ಗುರಿ ಹೊಂದಿದ್ದು, ಆ ನಿಟ್ಟಿನಲ್ಲಿ ಶ್ರಮ ವಹಿಸಿದರು. ತರುವಾಯ ಭಾರತೀಯ ವಾಯು ಸೇನೆ ನಡೆಸುವ ಸಿಇಟಿ ಮಾದರಿಯ AFCAT (ಏರ್‌ಫೋರ್ಸ್ ಕಾಮನ್ ಅಡ್ಮಿಷನ್ ಟೆಸ್ಟ್) ಪರೀಕ್ಷೆಯಲ್ಲಿ ಪುಣ್ಯಾ ನಂಜಪ್ಪ ಭಾಗಿಯಾದರು. ಭಾರತದಾದ್ಯಂತ ನಡೆಯುವ ಈ ಪರೀಕ್ಷೆಯಲ್ಲಿ 3.5 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆಯುತ್ತಾರೆ. ಇದರಲ್ಲಿ ಒಂದು ಸಾವಿರ ಶಾರ್ಟ್ ಲೀಸ್ಟ್ ಮಾಡಿ 135 ಮಂದಿಯನ್ನು ಆಯ್ಕೆ ಮಾಡಲಾಗುತ್ತದೆ. ಈ 135 ಅಭ್ಯರ್ಥಿಗಳಲ್ಲಿ ಪುಣ್ಯಾ ನಂಜಪ್ಪ ಕೂಡ ಒಬ್ಬರಾಗಿದ್ದರು.

ಇದಾದ ನಂತರ ಮೈಸೂರಿನ ಇಂಡಿಯನ್ ಏರ್‌ಫೋರ್ಸ್‌ನ ಸರ್ವಿಸ್ ಸೆಲೆಕ್ಷನ್ ಬೋರ್ಡ್ ಪರೀಕ್ಷೆಯಲ್ಲಿ ಪುಣ್ಯಾ ನಂಜಪ್ಪ ಭಾಗಿಯಾಗಿದ್ದರು. ಭಾರತದ ವಿವಿಧ ರಾಜ್ಯಗಳಿಂದ 160 ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಪಾಲ್ಗೊಂಡಿದ್ದರು. ಇವರಲ್ಲಿ ವಿಮಾನ ಹಾರಾಟ ಮಾಡುವ ಒಬ್ಬರೇ ಒಬ್ಬರನ್ನು ಆಯ್ಕೆ ಮಾಡಲಾಗಿತ್ತು. ಅವರಲ್ಲಿ ಒಬ್ಬರು ಪುಣ್ಯಾ ನಂಜಪ್ಪ ಅವರಾಗಿದ್ದರು. ಇದರ ಫಲವಾಗಿ 2018ರ ಆಗಸ್ಟ್‌ನಲ್ಲಿ ಏರ್‌ಫೋರ್ಸ್ ಕಮಿಷನ್ ಅಡ್ಮಿಷನ್ ಟೆಸ್ಟ್ (ಎಎಫ್ ಸಿಎಟಿ) ಪ್ರವೇಶ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದರು. ನಂತರ ನಡೆದ ಸಂದರ್ಶನ ಹಾಗೂ ವೈದ್ಯಕೀಯ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದುವ ಮೂಲಕ ಟ್ರೈನಿ ಪೈಲಟ್ ಆಗಿ ಪುಣ್ಯಾ ನಂಜಪ್ಪ ಆಯ್ಕೆಗೊಂಡರು. ಹೈದರಾಬಾದ್‌ನ ದುಂಡಿಗಲ್ ವಾಯು ಸೇನಾ ಅಕಾಡೆಮಿಯಲ್ಲಿ ತರಬೇತಿ ಪಡೆದಿರುವ ಪುಣ್ಯಾ ನಂಜಪ್ಪ ಭಾರತೀಯ ವಾಯು ಪಡೆಯಲ್ಲಿ ಪೈಲಟ್ ಆಗಿದ್ದು, ಈಗ ಗಣರಾಜ್ಯೋತ್ಸವ ದಿನದಂದು ಮಿಗ್–29 ಯುದ್ಧ ವಿಮಾನದ ಹಾರಾಟ ನಡೆಸಲಿದ್ದಾರೆ.

ಗಣರಾಜ್ಯೋತ್ಸವದ ದಿನದಂದು ಯುದ್ಧ ವಿಮಾನ ಹಾರಾಟ ಮಾಡುತ್ತಿರುವ ಕರ್ನಾಟಕದ ಏಕೈಕ ಮಹಿಳಾ ಪೈಲಟ್ ಪುಣ್ಯಾ ನಂಜಪ್ಪ ಅವರಾಗಿದ್ದಾರೆ. ಇದು ಕರ್ನಾಟಕ, ಅದರಲ್ಲೂ ಮೈಸೂರಿಗೆ ಹೆಮ್ಮೆ ತರುವಂತಹ ಸಂಗತಿ.


ನವದೆಹಲಿಯ ವಿಜಯ್ ಚೌಕ್‌ನಿಂದ ಕರ್ತವ್ಯ ಪಥದವರೆಗೆ ನಡೆಯುವ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಪುಣ್ಯಾ ನಂಜಪ್ಪ ಯುದ್ಧ ವಿಮಾನ ಹಾರಾಟ ನಡೆಸುವ ಮೂಲಕ ದೆಹಲಿಯಲ್ಲಿ ಮೈಸೂರಿನ ಕೀರ್ತಿ ಪತಾಕೆ ಹಾರಿಸಲಿದ್ದಾರೆ.

ಈ ಬಾರಿಯ ಗಣರಾಜ್ಯೋತ್ಸವದ ಅತಿಥಿಯಾಗಿ ಫ್ರಾನ್ಸ್ ಅಧ್ಯಕ್ಷ ಎಮಾನ್ಯುಲ್ ಮ್ಯಾಕ್ರನ್ ಆಗಮಿಸಲಿದ್ದು, ಭಾರತದ ಭೂ ಸೇನೆ, ವಾಯು ಪಡೆ ಹಾಗೂ ನೌಕಾ ಪಡೆಯ ಮೂಲಕ ಭಾರತದ ಶಕ್ತಿ ಪ್ರದರ್ಶನವಾಗಲಿದೆ.

ಒಬ್ಬ ತಾಯಿಗೆ ಇದಕ್ಕಿಂತ ಹೆಚ್ಚಿನ ಸಂತೋಷ ಬೇರೇನಿದೆ

ಒಬ್ಬ ತಾಯಿಗೆ ಇದಕ್ಕಿಂತ ಹೆಚ್ಚು ಸಂತೋಷ ಏನಿದೆ. ನನ್ನ ಮಗಳಿಗೆ ಈ ಅವಕಾಶ ದೊರೆತಿರುವುದು ನನಗೆ ತುಂಬಾ ಸಂತೋಷವಾಗಿದೆ. ಅಯೋಧ್ಯೆಯ ರಾಮ ರಾಜ್ಯದ ಕನಸಿನ ನಂತರ ಭಾರತ ಸರ್ಕಾರ ನಾರಿ ಶಕ್ತಿಗೆ ಸ್ಫೂರ್ತಿ ತರಲು ಈ ಬಾರಿಯ ಗಣರಾಜ್ಯೋತ್ಸವ ದಿನದಂದು ಮಹಿಳೆಯರಿಗೆ ಹೆಚ್ಚಿನ ಅವಕಾಶ ಕೊಟ್ಟಿದೆ. ನನ್ನ ಮಗಳು ಈ ಹಂತಕ್ಕೆ ಬರುವಲ್ಲಿ ಬಹಳಷ್ಟು ಏರುಪೇರು ಕಂಡಿದ್ದಾಳೆ. ತಂದೆ ತೀರಿ ಹೋದ ನಂತರ ನೋವಿದ್ದರೂ ಛಲ ಬಿಡಲಿಲ್ಲ. ಭಾರತೀಯ ವಾಯು ಸೇನೆ ಸೇರಬೇಕೆಂಬ ಕನಸು ಮೊದಲಿನಿಂದಲೂ ಇತ್ತು. ಬಿಇ ಪದವಿ ಪಡೆದ ನಂತರ ಭಾರತೀಯ ವಾಯು ಸೇನೆಗೆ ಆಯ್ಕೆಯಾದಳು. ಆದರೆ ನನ್ನ ಬಿಟ್ಟು ಹೋಗಬೇಕೆಂದು ಅವಳಿಗೆ ನೋವಿತ್ತು. ಆದರೆ ದೇಶ ಸೇವೆ ಮಾಡುವಂತೆ ಉತ್ತೇಜಿಸಿದಾಗ ಇಂಡಿಯನ್ ಏರ್‌ಫೋರ್ಸ್‌ಗೆ ಸೇರಿದಳು. ಈಗ ಗಣರಾಜ್ಯೋತ್ಸವದ ದಿನದಂದು ಯುದ್ಧ ವಿಮಾನ ಹಾರಾಟ ಮಾಡುತ್ತಿರುವುದು ನನಗೆ ಹೆಮ್ಮೆ ಎನಿಸಿದೆ. **– ಅನುರಾಧ ನಂಜಪ್ಪ, ಪುಣ್ಯಾ ನಂಜಪ್ಪ ತಾಯಿ**

ಪುಣ್ಯಾ ನಂಜಪ್ಪ ಶ್ರಮಕ್ಕೆ ಸಿಕ್ಕ ಫಲ



ಪುಣ್ಯಾ ನಂಜಪ್ಪ ಈ ಹಂತಕ್ಕೆ ಬರಲು ತುಂಬಾ ಕಷ್ಟಪಟ್ಟಿದ್ದಾರೆ. ತಂದೆ ಕಳೆದುಕೊಂಡ ನೋವಿದ್ದರೂ ತಾನು ಗುರಿ ಸಾಧಿಸುವುದರಿಂದ ವಿಮುಖಳಾಗಲಿಲ್ಲ. ಛಲ ಬಿಡದೆ ಗುರಿ ಸಾಧಿಸಿದ್ದಾರೆ. ಇದು ಮೈಸೂರಿಗೆ ಮಾತ್ರವಲ್ಲದೆ ಕರ್ನಾಟಕವೇ ಹೆಮ್ಮೆ ಪಡುವ ಸಂಗತಿ. ದೃಢತೆ, ಏಕಾಗ್ರತೆ, ಅರ್ಪಣಾ ಮನೋಭಾವ ಹಾಗೂ ಅಚಲ ವಿಶ್ವಾಸದಿಂದ ಈ ಸಾಧನೆ ಮಾಡುತ್ತಿದ್ದಾರೆ.

– ಅಯ್ಯಣ್ಣ, ಮಾಜಿ ಅಧ್ಯಕ್ಷರು, ರೋಟರಿ ಮಿಡ್‌ಟೌನ್

ನಾನು ಸಹಿಸಲ್ಲ

ಸೀಮಿತ ಎಂದು ಹೈಕಮಾಂಡ್ ಹೇಳಿದಂತೆ 37 ಸದಸ್ಯರಿಗೆ ಅವಕಾಶ ಮಾಡಿಕೊಟ್ಟೆವು. ನಂತರ ರಾಹುಲ್ ಗಾಂಧಿ ಮಧ್ಯೆ ಪ್ರವೇಶಿಸಿ ಕಾರ್ಯಕರ್ತರಿಗೂ ಅವಕಾಶ ಮಾಡಿ ಎಂದರು, ಅವರ ಸಲಹೆಯಂತೆ ಹೊಸದಾಗಿ 35 ಮಂದಿ ಪಟ್ಟಿ ಸಿದ್ಧಪಡಿಸಿ ವರಿಷ್ಠರಿಗೆ ಕಳುಹಿಸಿಕೊಡಲಾಗಿತ್ತು. ನಾವು ಕಳುಹಿಸಿದ ಪಟ್ಟಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ 12 ಹೆಸರುಗಳನ್ನು ಬದಲಿಸಿ ಅದೇ ಪ್ರಮಾಣದಲ್ಲಿ ಬೇರೆ ಹೆಸರುಗಳನ್ನು ಸೇರಿಸಿದ್ದಾರೆ. ರಾಜ್ಯ ನಾಯಕರು ಬಹಳ ಕಸರತ್ತು ನಡೆಸಿ ಸಿದ್ಧಪಡಿಸಿದ ಪಟ್ಟಿಯನ್ನೇ ಪರಿಷ್ಕರಣೆ ಮಾಡುವುದಾದರೆ ನಾವು ಏತಕ್ಕೆ ಇಷ್ಟು ಸಮಯ ಹಾಳು ಮಾಡಬೇಕಿತ್ತು ಎಂದು ಮುಖ್ಯಮಂತ್ರಿ ಅವರು ತಮ್ಮ ಆಪ್ತರ ಬಳಿ ಹೇಳಿಕೊಂಡಿದ್ದಾರೆ. ಚುನಾವಣೆಯಲ್ಲಿ ನನ್ನ ವಿರುದ್ಧವೇ ಕೆಲಸ ಮಾಡಿದವರಿಗೆ ನಾನು ಅವಕಾಶ ಮಾಡಿ ಕೊಟ್ಟರೆ ಮುಖ್ಯಮಂತ್ರಿ ಗಾದಿಗೆ ಬೆಲೆ ಇದೆಯೇ? ನಾವು ಯಾರನ್ನು ದೂರ ಇರಿಸಿದ್ದೆವೋ ಅಂತಹವರನ್ನು ಪಟ್ಟಿಗೆ ಸೇರಿಸಿರುವುದನ್ನು ನಾನು ಸಹಿಸುವುದಿಲ್ಲ. ನಾನಂತೂ ಈ ಪಟ್ಟಿಗೆ ಅನುಮತಿ ನೀಡುವುದಿಲ್ಲ, ಸರ್ಕಾರಿ ಆದೇಶವನ್ನೂ ಹೊರಡಿಸುವುದಿಲ್ಲ ಎಂದು ಮುಖ್ಯಮಂತ್ರಿ ಅವರು ಬಿಗಿ ಪಟ್ಟು ಹಾಕಿರುವ ಹಿನ್ನೆಲೆಯಲ್ಲಿ ಸುರ್ಜೇವಾಲ, ಮುಖ್ಯಮಂತ್ರಿ ಅವರನ್ನು ಸಮಾಧಾನಪಡಿಸಿ ಪಟ್ಟಿ ಪರಿಷ್ಕರಿಸಲು ರಾಜ್ಯಕ್ಕೆ ಎರಡು ದಿನ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಮಾನವ–ವನ್ಯಜೀವಿ ಸಂಘರ್ಷ ಶಾಶ್ವತ ತಡೆಗೆ ಅಗತ್ಯ ಕ್ರಮ

ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಖಂಡ್ರೆ ಭರವಸೆ



ಹೆಡಿಯಾಲ ವಲಯ ಅರಣ್ಯಾಧಿಕಾರಿಗಳ ಕಚೇರಿಯಲ್ಲಿ ಸಚಿವ ಈಶ್ವರ ಬಿ ಖಂಡ್ರೆ ಕಾಡಂಚಿನ ಗ್ರಾಮಗಳ ರೈತರ ಅಹವಾಲು ಆಲಿಸಿದರು.



ಹೆಡಿಯಾಲ ವಲಯದಲ್ಲಿ ಆನೆ, ಹುಲಿ ಮಾತ್ರವಲ್ಲದೇ ಸಸ್ಯಹಾರಿ ಪ್ರಾಣಿಗಳಾದ ಜಿಂಕೆ, ಸಾಂಬರ್(ಕಡವೆ), ಕಾಡು ಹಂದಿಗಳು ರೈತರ ಜಮೀನಿನ ಮೇಲೆ ದಾಳಿ ಮಾಡಿ ಬೆಳೆ ಹಾನಿಗೊಳಿಸುತ್ತಿವೆ. ಇದನ್ನು ತಡೆಗಟ್ಟಲು ಬಂಡೀಪುರದ ಅಧಿಕಾರಿಗಳು ರೈಲ್ವೆ ಬ್ಯಾರಿಕೇಡ್‌ಗೆ ಮೆಸ್ ಅಳವಡಿಸಿ ಪ್ರಾಣಿಗಳು ಬ್ಯಾರಿಕೇಡ್‌ನಿಂದ ನುಸುಳದಂತೆ ಕ್ರಮ ಕೈಗೊಂಡಿದ್ದಾರೆ. ಹೆಚ್ಚುವರಿಯಾಗಿ 10 ಕಿಮೀ ಮೆಸ್ ಅಳವಡಿಸಲು ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಿದ್ದು, ಅದಕ್ಕೂ ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.

–ಈಶ್ವರ್ ಖಂಡ್ರೆ, ಅರಣ್ಯ ಸಚಿವ.

ನಂಜನಗೂಡು, ಜ.23– ಮಾನವ–ವನ್ಯಜೀವಿ ಸಂಘರ್ಷ ಶಾಶ್ವತ ತಡೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮಗಳಲ್ಲಿ ಆನೆ ಹಾವಳಿ ತಡೆಗೆ ಅಗತ್ಯವಿದ್ದ ಕಡೆ ರೈಲ್ವೆ ಬ್ಯಾರಿಕೇಡ್ ಅಳವಡಿಸಲು ಅಗತ್ಯ ಅನುದಾನ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ ಮತ್ತು ಪರಿಸರ ಖಾತೆ ಸಚಿವ ಈಶ್ವರ ಬಿ ಖಂಡ್ರೆ ತಿಳಿಸಿದರು.

ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತಾ ಪ್ರದೇಶದ ಹೆಡಿಯಾಲ ವಲಯದ ಓಂಕಾರ ಅರಣ್ಯ ಪ್ರದೇಶಗಳಿಗೆ ಭೇಟಿ ನೀಡಿ ಕಾಡಂಚಿನಲ್ಲಿ ಅಳವಡಿಸಿರುವ ರೈಲ್ವೆ ಬ್ಯಾರಿಕೇಡ್ ಅನ್ನು ವೀಕ್ಷಿಸಿ, ನಂತರ ಹೆಡಿಯಾಲ ವಲಯ ಕಚೇರಿಯಲ್ಲಿ ಮಾನವ–ವನ್ಯಜೀವಿ ಸಂಘರ್ಷ ತಡೆ ಕುರಿತಂತೆ ಗ್ರಾಮಸ್ಥರೊಂದಿಗೆ ಸಭೆ ನಡೆಸಿ, ಅವರು ಮಾತನಾಡಿದರು.

ಈಗಾಗಲೇ ಆನೆ ಕಾರ್ಯಪಡೆ ರಚಿಸಲಾಗಿದ್ದು, ಕಾಡಂಚಿನ ಗ್ರಾಮಗಳಿಗೆ ಆನೆಗಳು ದಾಳಿ ಮಾಡುವುದನ್ನು ತಡೆಗಟ್ಟಲು ಅಗತ್ಯ ಕ್ರಮ ಕೈಗೊಂಡು, ಮಾನವ–ವನ್ಯಜೀವಿ ಸಂಘರ್ಷ ನಡೆಯುವ ಸ್ಥಳ ಗುರುತಿಸಲಾಗಿದೆ. ಈ ವ್ಯಾಪ್ತಿಯಲ್ಲಿ ರೈಲ್ವೆ ಬ್ಯಾರಿಕೇಡ್(ತಡೆಗೋಡೆ) ನಿರ್ಮಾಣ ಮಾಡಲಾಗುತ್ತಿದೆ. ಈಗಾಗಲೇ 312 ಕಿಮೀ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾಮಗಾರಿ ಪೂರ್ಣಗೊಳಿಸಲಾಗಿದ್ದು, ಹೆಚ್ಚುವರಿಯಾಗಿ 120 ಕಿಮೀ ರೈಲ್ವೆ ಬ್ಯಾರಿಕೇಡ್ ನಿರ್ಮಿಸಲು ಉದ್ದೇಶಿಸಲಾಗಿದೆ.

ಅಲ್ಲದೇ ಮುಂದಿನ ಬಜೆಟ್‌ನಲ್ಲಿ 200 ಕೋಟಿ ಅನುದಾನ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದೇನೆ. ಆ ಮೂಲಕ ಹಂತ ಹಂತವಾಗಿ ಆನೆ ಹಾವಳಿ ಇರುವ ಸ್ಥಳದಲ್ಲಿ ಶಾಶ್ವತ ಪರಿಹಾರ ಕಾಮಗಾರಿ ಕೈಗೊಳ್ಳಲಾಗುತ್ತದೆ ಎಂದು ವಿವರಿಸಿದರು.

ಅತೀ ಹೆಚ್ಚು ಪ್ರಾಣಿಗಳನ್ನು ಹೊಂದಿರುವ ಹಾಗೂ ವೈವಿಧ್ಯಮಯ ವನ್ಯ ಸಂಪತ್ತು ಇರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಆನೆ ಕ್ಷಿಪ್ರ ಕಾರ್ಯಪಡೆ ಕಾರ್ಯ ನಿರ್ವಹಿಸುತ್ತಿದ್ದು, ಅದಕ್ಕೆ ಮತ್ತಷ್ಟು ಸೌಲಭ್ಯ ಕಲ್ಪಿಸಿ ಗಟ್ಟಿಗೊಳಿಸಲು ನಿರ್ಧರಿಸಲಾಗಿದೆ. ಆನೆ ಕಾರ್ಯಪಡೆಗೆ ಹೆಚ್ಚುವರಿ ವಾಹನದ ಬೇಡಿಕೆ ಇದ್ದು, ಅದನ್ನು ಶೀಘ್ರವಾಗಿ ಮಂಜೂರು ಮಾಡುವುದಾಗಿ ತಿಳಿಸಿದರು. ಈ ವೇಳೆ ರೈತರು ಮಾತನಾಡಿ, ಆನೆ ದಾಳಿಯಿಂದ ಬೆಳೆ ಹಾನಿಯಾದರೆ ಪರಿಹಾರ ದೊರೆಯುತ್ತದೆ. ಆದರೆ ಜಿಂಕೆ, ಕಾಡು ಹಂದಿ, ನವಿಲು ಸೇರಿದಂತೆ ಇತರೆ ಕಾಡು ಪ್ರಾಣಿಗಳಿಂದ ನಾಶವಾದರೂ ಪರಿಹಾರ ಒದಗಿಸಬೇಕು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ನಿಮ್ಮ ಸಮಸ್ಯೆಯನ್ನು ನಾನು ಖುದ್ದಾಗಿ ನೋಡಿದ್ದೇನೆ. ಕಾಡಂಚಿನ ರೈತರು ಕಾಡುಪ್ರಾಣಿಗಳಿಂದ ಬೆಳೆ ನಷ್ಟವಾದರೆ ಪರಿಹಾರ ನೀಡುವುದು ಬೇಡ. ಬದಲಿಗೆ ನಷ್ಟವನ್ನೇ ಭರಿಸುವಂತೆ ಮನವಿ ಮಾಡಿದ್ದೀರಿ. ನಾನು ಈ ಬಗ್ಗೆ ವಿಸ್ತೃತ ವರದಿ ತಯಾರಿಸಿ ಸಿಎಂ ಗಮನಕ್ಕೆ ತಂದು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿ ರೈತರ ಬೇಡಿಕೆ ಈಡೇರಿಸಲು ಪ್ರಯತ್ನಿಸುತ್ತೇನೆ. ಸಾರ್ವಜನಿಕರೊಡನೆ ಅರಣ್ಯಾಧಿಕಾರಿಗಳು ಸಂಯಮದಿಂದ ವರ್ತಿಸುವಂತೆ ಸೂಚನೆ ನೀಡಿದರು. ಇದಕ್ಕೂ ಮುನ್ನ ತಾಲೂಕಿನ ಬಳ್ಳೂರು ಹುಂಡಿಯಲ್ಲಿ ಇತ್ತೀಚೆಗೆ ಹುಲಿ ದಾಳಿಗೆ ಬಲಿಯಾದ ರತ್ನಮ್ಮ ಅವರ ನಿವಾಸಕ್ಕೆ ತೆರಳಿ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿ ತಾತ್ಕಾಲಿಕ ಉದ್ಯೋಗ, ಮಾಸಾಶನ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಈ ವೇಳೆ ಶಾಸಕರಾದ ದರ್ಶನ್ ಧ್ರುವನಾರಾಯಣ, ಗಣೇಶ್ ಪ್ರಸಾದ್, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವನ್ಯಜೀವಿ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸುಭಾಷ್ ಮಾಲ್ಖೇಡ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರಮೇಶ್ ಕುಮಾರ್, ಎಸಿಎಫ್ ಪರಮೇಶ್ ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಶ್ರೀಕಂಠ ನಾಯಕ, ಮುಖಂಡರಾದ ನಾಗೇಶ್ ರಾಜ್, ಗ್ರಾಪಂ ಅಧ್ಯಕ್ಷೆ ಮಹದೇವಿ, ಗ್ರಾಪಂ ಸದಸ್ಯರಾದ ಗೋವಿಂದರಾಜು, ಅಶ್ರಫ್ ಅಲಿ ಸೇರಿದಂತೆ ಇತರರಿದ್ದರು.

ಜಂಟಿ ಸರ್ವೇ ನಡೆಸಿ ರೈತರಿಗೆ ಭೂಮಿ ಮಂಜೂರಾತಿ

ಕಳೆದ 50 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ರೈತರಿಗೆ ಸಾಗುವಳಿ ಚೀಟಿ ನೀಡದ ಕಾರಣ ಆರ್‌ಟಿಸಿಯಲ್ಲಿ ಅರಣ್ಯ ಭೂಮಿ ಎಂದು ಬರುವ ಕಾರಣವೊಡ್ಡಿ ಪರಿಹಾರ ನೀಡದೆ ರೈತರಿಗೆ ಅನ್ಯಾಯವೆಸಗಲಾಗುತ್ತಿದೆ. ಆದ್ದರಿಂದ ಜಂಟಿ ಸರ್ವೇ ಕಾರ್ಯ ನಡೆಸಿ ರೈತರಿಗೆ ಭೂಮಿ ಮಂಜೂರು ಮಾಡಿಕೊಡಬೇಕೆಂದು ರೈತರು ಆಗ್ರಹಿಸಿದರು. ಇದಕ್ಕುತ್ತರಿಸಿದ ಸಚಿವರು ಅರಣ್ಯ ಮತ್ತು ಕಂದಾಯ ಇಲಾಖೆಗಳು ಜಂಟಿ ಸರ್ವೇ ನಡೆಸಿ ಕಾಡಿನ ಗಡಿ ಗುರ್ತಿಸಿ ಕಂದಾಯ ಭೂಮಿಗೆ ಸೇರಲ್ಪಟ್ಟ ಜಮೀನಿಗೆ ಸಾಗುವಳಿ ಚೀಟಿ ನೀಡಲು ಕ್ರಮವಹಿಸಲಾಗುವುದು. 1978ಕ್ಕಿಂತಲೂ ಹಿಂದೆ ಸಾಗುವಳಿ ಮಾಡುತ್ತಿರುವ ಅರಣ್ಯ ಇಲಾಖೆಗೆ ಸೇರಲ್ಪಟ್ಟ ಭೂಮಿಯನ್ನು ಅರಣ್ಯ ಹಕ್ಕು ಕಾಯ್ದೆಯಡಿ ವಿತರಿಸಲು ಕ್ರಮವಹಿಸುವುದಾಗಿ ಭರವಸೆ ನೀಡಿದರು.

ಬ್ಯಾರಿಕೇಡ್‌ಗಳನ್ನು ಮುರಿಯಲು ಪ್ರಚೋದನೆ; ರಾಹುಲ್ ವಿರುದ್ಧ ಪ್ರಕರಣ ದಾಖಲಿಸಲು ಡಿಜಿಪಿಗೆ ಸೂಚನೆ: ಅಸ್ಸಾಂ ಸಿಎಂ



ಗುವಾಹಟಿ, ಜ.23– ಬ್ಯಾರಿಕೇಡ್‌ಗಳನ್ನು ಮುರಿಯುವುದಕ್ಕೆ ಜನಸ್ತೋಮಕ್ಕೆ ಪ್ರಚೋದನೆ ನೀಡಿದ್ದಕ್ಕಾಗಿ ರಾಹುಲ್ ಗಾಂಧಿ ವಿರುದ್ಧ ಪ್ರಕರಣ ದಾಖಲಿಸಲು ಡಿಜಿಪಿ ಜಿ.ಪಿ.ಸಿಂಗ್ ಅವರಿಗೆ ಸೂಚನೆ ನೀಡಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಹೇಳಿದ್ದಾರೆ.

ಕಾಂಗ್ರೆಸ್ ಯುವ ಘಟಕದ ಅಧ್ಯಕ್ಷ ಶ್ರೀನಿವಾಸ್ ಅವರ ಟ್ವೀಟ್‌ಗೆ ಪ್ರತಿಕ್ರಿಯೆ ನೀಡಿರುವ ಸಿಎಂ ಹಿಮಂತ ಬಿಸ್ವ ಶರ್ಮಾ ಈ ಮಾಹಿತಿ ಹಂಚಿಕೊಂಡಿದ್ದಾರೆ.

ಶ್ರೀನಿವಾಸ್ ಅವರ ಹ್ಯಾಂಡಲ್‌ನಲ್ಲಿದ್ದ ವೀಡಿಯೋಗಳನ್ನು ಸಾಕ್ಷ್ಯವನ್ನಾಗಿ ಬಳಕೆ ಮಾಡಿಕೊಳ್ಳಲಾಗುತ್ತದೆ ಎಂದು ಅವರು ಹೇಳಿದ್ದಾರೆ. ಇವು ಅಸ್ಸಾಮಿ ಸಂಸ್ಕೃತಿಯ ಭಾಗವಲ್ಲ. ನಮ್ಮದು ಶಾಂತಿಯುತ ರಾಜ್ಯ. ಇಂತಹ ನಕ್ಸಲೀಯ ತಂತ್ರಗಳು ನಮ್ಮ ಸಂಸ್ಕೃತಿಗೆ ಸಂಪೂರ್ಣವಾಗಿ ಪರಕೀಯವಾಗಿವೆ ಎಂದು ಮುಖ್ಯಮಂತ್ರಿ, ರಾಹುಲ್ ಗಾಂಧಿ ಭಾರತ್ ಜೋಡೋ ನ್ಯಾಯ್ ಯಾತ್ರೆಯ ವೇಳೆ ಉಂಟಾದ ಘರ್ಷಣೆಗಳ ಬಗ್ಗೆ ಪ್ರತಿಕ್ರಿಯೆ ನೀಡಿದ್ದಾರೆ.

ನಿಮ್ಮ ಅಶಿಸ್ತಿನ ನಡವಳಿಕೆ ಮತ್ತು ಒಪ್ಪಿಗೆ ಸೂಚಿಸಿದ ಮಾರ್ಗಸೂಚಿಗಳ ಉಲ್ಲಂಘನೆಯು ಈಗ ಗುವಾಹಟಿಯಲ್ಲಿ ಭಾರೀ ಟ್ರಾಫಿಕ್ ಜಾಮ್‌ಗೆ ಕಾರಣವಾಗಿದೆ ಎಂದು ಹಿಮಂತ ಬಿಸ್ವ ಶರ್ಮಾ ಹೇಳಿದ್ದಾರೆ.

ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ನ್ಯಾಯ್ ಯಾತ್ರೆಯನ್ನು ಮಂಗಳವಾರ ನಗರಕ್ಕೆ ಪ್ರವೇಶಿಸದಂತೆ ತಡೆಯಲಾಯಿತು, ಬ್ಯಾರಿಕೇಡ್‌ಗಳನ್ನು ಮುರಿದು ಘೋಷಣೆಗಳನ್ನು ಕೂಗಿದ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆಯನ್ನು ಪ್ರಚೋದಿಸಿದರು.

ನಂತರ ನಗರದ ಹೊರವಲಯದಲ್ಲಿ ಪಕ್ಷದ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಗಾಂಧಿ, ನಾವು ಬ್ಯಾರಿಕೇಡ್‌ಗಳನ್ನು ಮುರಿದಿದ್ದೇವೆ, ಆದರೆ ಕಾನೂನನ್ನು ಮುರಿಯುವುದಿಲ್ಲ ಎಂದು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ 11 ದಿನ ಉಪವಾಸ ಮಾಡಿದ್ದೇ ಅನುಮಾನ

ಚಿಕ್ಕಬಳ್ಳಾಪುರ, ಜ.23– ಗುಜರಾತ್ ಹತ್ಯಾಕಾಂಡ ವೇಳೆ ಅಂದಿನ ಮುಖ್ಯಮಂತ್ರಿ ಆಗಿದ್ದ ಮೋದಿ ರಾಜಧರ್ಮ, ಕಾನೂನು ಪರಿಪಾಲನೆ ಮಾಡಲಿಲ್ಲ. ಅಂತಹ ಮೋದಿ ಅವರಿಂದ ಅಯೋಧ್ಯೆ ರಾಮಲಲ್ಲಾ ಪ್ರತಿಷ್ಠಾಪನೆ ಮಾಡಿಸಿದ್ದು ಎಷ್ಟು ಸರಿ? ಮೋದಿಯಿಂದ ದೇವಾಲಯಕ್ಕೆ ಎಷ್ಟು ಪಾವಿತ್ರ್ಯತೆ ಬರಲಿದೆ ಎಂದು ಮಾಜಿ ಸಿಎಂ ವೀರಪ್ಪ ಮೊಯ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮಾಧ್ಯಮದೊಂದಿಗೆ ಮಾತನಾಡಿರುವ ಅವರು, ನರೇಂದ್ರ ಮೋದಿ ಗರ್ಭಗುಡಿಗೆ ಪ್ರವೇಶ ಮಾಡಿದ್ದೇ ತಪ್ಪು, ಪ್ರಾಣ ಪ್ರತಿಷ್ಠಾಪನೆ ಮಾಡಿದ್ದು ಸಹ ತಪ್ಪು, ನಿಜವಾದ ಸ್ವಾಮೀಜಿಗಳು, ಬ್ರಾಹ್ಮಣರು ಆಗಿದ್ರೆ ನರೇಂದ್ರ ಮೋದಿ ಅವರನ್ನು ಗರ್ಭಗುಡಿ ಒಳಗೆ ಬಿಡಬಾರದಿತ್ತು ಎಂದು ವಾಗ್ದಾಳಿ ನಡೆಸಿದರು.

ಮೋದಿ ಉಪವಾಸ ಮಾಡಿಲ್ಲ. ಎಳನೀರು ಮಾತ್ರ ಕುಡಿದು ಉಪವಾಸ ಮಾಡಿದ್ದರೆ ಒಂದೆರಡು ದಿನದಲ್ಲಿ ಮನುಷ್ಯ ಬೀಳುತ್ತಾನೆ. 11 ದಿನಗಳ ಉಪವಾಸ ಮಾಡಿದರೆ ಮನುಷ್ಯ ಬದುಕಲು ಸಾಧ್ಯವಿಲ್ಲ. ಈ ಮೂಲಕ ಪ್ರಧಾನಮಂತ್ರಿ ನರೇಂದ್ರ ಮೋದಿ ಉಪವಾಸ ವ್ರತದ ಮೇಲೆ ಅನುಮಾನ ವ್ಯಕ್ತಪಡಿಸಿದ್ದಾರೆ. ರಾಮ ಮಂದಿರ ಅಪೂರ್ಣ ಮಂದಿರ. ಕೇವಲ ರಾಮ ಲಲ್ಲಾ ಪ್ರಾಣ ಪ್ರತಿಷ್ಠಾಪನೆ ಮಾಡಿದ್ರೆ ಸಾಲದು. ಅಲ್ಲಿ ರಾಮ ಲಕ್ಷಣ, ಸೀತಾ ಹಾಗೂ ಆಂಜನೇಯನ ವಿಗ್ರಹಗಳು ಇರಬೇಕು ಆಗಲೇ ರಾಮ ಮಂದಿರ ಪೂರ್ಣ ಆಗೋದು ಎಂದರು.

ಅಯೋಧ್ಯೆಯಲ್ಲಿ ಭವ್ಯ ಶ್ರೀರಾಮ ಮಂದಿರ ಲೋಕಾರ್ಪಣೆಗೊಂಡಿದೆ. ಪ್ರಧಾನಿ ಮೋದಿ ಅಮೃತ ರಾಮಲಲ್ಲಾ ಪ್ರಾಣಪ್ರತಿಷ್ಠೆ ನೆರವೇರಿಸಿದ್ದಾರೆ. ರಾಮ ಮಂದಿರ ಆವರಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ತಮ್ಮ 11 ದಿನಗಳ ಕಠಿಣ ಉಪವಾಸ ವ್ರತ ಅಂತ್ಯಗೊಳಿಸಿದ್ದಾರೆ. ಸ್ವಾಮೀಜಿಗಳು ಪ್ರಧಾನಿ ಮೋದಿಗೆ ಶ್ರೀರಾಮನ ಪ್ರಸಾದ ನೀಡಿ ಕಠಿಣ ವ್ರತ ಪೂರ್ಣಗೊಳಿಸಿದ್ದಾರೆ.

ದುಷ್ಕರ್ಮಿಗಳನ್ನು ಬಂಧಿಸಲು ಒತ್ತಾಯಿಸಿ ಪ್ರತಿಭಟನೆ



ಮೈಸೂರು,ಜ.23(ಪಿಎಂ)– ಕಲಬುರಗಿಯ ಕೋಟನೂರ ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಅಪಮಾನ ಮಾಡಿದ ದುಷ್ಕರ್ಮಿಗಳನ್ನು ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಒತ್ತಾಯಿಸಿ ಕರ್ನಾಟಕ ದಲಿತ್ ಪ್ಯಾಂಥರ್ಸ್ ಹಾಗೂ ಗಾಂಧಿನಗರದ ದಲಿತ ಸಂಘಟನೆಗಳ ವತಿಯಿಂದ ಮಂಗಳವಾರ ರಾತ್ರಿ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಎಫ್‌ಟಿಎಸ್ ವೃತ್ತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟನಾಕಾರರು, ದುಷ್ಕರ್ಮಿಗಳನ್ನು ಬಂಧಿಸುವಂತೆ ಒತ್ತಾಯಿಸಿದರು. ಕರ್ನಾಟಕ ದಲಿತ್ ಪ್ಯಾಂಥರ್ಸ್ ನಗರಾಧ್ಯಕ್ಷ ಕಿರಣ್‌ಕುಮಾರ್, ಮುಖಂಡರಾದ ಯೋಗನರಸಿಂಹ, ರಂಗಸ್ವಾಮಿ, ಮಂಜುನಾಥ್, ಅನುಪಮ್, ಹರೀಶ್, ಪ್ರತಾಪ್, ಪ್ರಕಾಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಲೋಕಸಭೆ ಚುನಾವಣೆ ಏಪ್ರಿಲ್ 16ಕ್ಕೆ: ಚುನಾವಣಾ ಆಯೋಗದಿಂದ ತಾತ್ಕಾಲಿಕ ದಿನಾಂಕ ಪ್ರಕಟ

ನವದೆಹಲಿ, ಜ.23– ಲೋಕಸಭಾ ಚುನಾವಣೆ ತಾತ್ಕಾಲಿಕ ದಿನಾಂಕವನ್ನು ಚುನಾವಣಾ ಆಯೋಗ ಪ್ರಕಟಿಸಿದೆ. 2024ರ ಲೋಕಸಭೆ ಚುನಾವಣೆಯನ್ನು ಏಪ್ರಿಲ್ 16ರಂದು ತಾತ್ಕಾಲಿಕವಾಗಿ ನಡೆಸಲಾಗುವುದು ಎಂದು ಜಿಲ್ಲಾ ಚುನಾವಣಾಧಿಕಾರಿಗಳಿಗೆ ಕೇಂದ್ರ ಚುನಾವಣಾ ಆಯೋಗ ಪತ್ರ ಬರೆದಿದೆ. ಚುನಾವಣಾ ಯೋಜಕರ ಪ್ರಾರಂಭ ಮತ್ತು ಅಂತಿಮ ದಿನಾಂಕಗಳನ್ನು ಲೆಕ್ಕಾಚಾರ ಮಾಡಲು ಚುನಾವಣಾ ಆಯೋಗ ಅಧಿಕಾರಿಗಳಿಗೆ ಅನುವು ಮಾಡಿಕೊಡಲು, ಚುನಾವಣೆಗೆ ಸಿದ್ಧತೆ ಮಾಡಿಕೊಳ್ಳಲು ತಾತ್ಕಾಲಿಕ ದಿನಾಂಕವನ್ನು ಘೋಷಿಸಲಾಗಿದೆ ಎಂದು ಸುತ್ತೋಲೆಯಲ್ಲಿ ತಿಳಿಸಿದೆ. ಹೆಚ್ಚಿನ ವಿವರ ಲಭ್ಯವಾಗಬೇಕಿದೆ.

ಜಯಲಲಿತಾಗೆ ಸೇರಿದ ಬೆಲೆ ಬಾಳುವ ವಸ್ತುಗಳನ್ನು ತಮಿಳುನಾಡು ಸರ್ಕಾರದ ಸುಪರ್ದಿಗೆ ನೀಡಿ



ವಿಶೇಷ ನ್ಯಾಯಾಲಯ ಆದೇಶ

ಬೆಂಗಳೂರು, ಜ.23– ತಮಿಳುನಾಡು ಮಾಜಿ ಸಿಎಂ ದಿವಂಗತ ಜೆ.ಜಯಲಲಿತಾ ಅವರಿಗೆ ಸೇರಿದ ಬೆಲೆಬಾಳುವ ವಸ್ತುಗಳನ್ನು ತಮಿಳುನಾಡು ಸರ್ಕಾರದ ಸುಪರ್ದಿಗೆ ನೀಡಿ ಎಂದು ಬೆಂಗಳೂರಿನ ವಿಶೇಷ ನ್ಯಾಯಾಲಯ ಆದೇಶ ನೀಡಿದೆ.

ಅಕ್ರಮ ಆಸ್ತಿ ಗಳಿಕೆ ಪ್ರಕರಣ ಸಂಬಂಧ ತಮಿಳುನಾಡು ಮಾಜಿ ಸಿಎಂ ಜೆ.ಜಯಲಲಿತಾ ಅವರಿಂದ ಜಪ್ತಿ ಮಾಡಲಾದ ಕೋಟ್ಯಾಂತರ ರೂಪಾಯಿ ಬೆಲೆಬಾಳುವ ವಸ್ತುಗಳನ್ನು ಹರಾಜು ಹಾಕುವ ಬದಲು ತಮಿಳುನಾಡು ಸರ್ಕಾರದ ಸುಪರ್ದಿಗೆ ನೀಡಲು ಪ್ರಕರಣದ ವಿಚಾರಣೆ ನಡೆಸಿದ ಬೆಂಗಳೂರಿನ ಸಿಬಿಐ ವಿಶೇಷ ನ್ಯಾಯಾಲಯ ಆದೇಶಿಸಿದೆ. ಆರ್‌ಟಿಐ ಕಾರ್ಯಕರ್ತ ಟಿ.ನರಸಿಂಹ ಮೂರ್ತಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಎಚ್.ಎ. ಮೋಹನ್ ಅವರು ಜಯಲಲಿತಾ ಅವರ ಒಡವೆಗಳನ್ನು ತಮಿಳುನಾಡು ಸರ್ಕಾರಕ್ಕೆ ಹಸ್ತಾಂತರಿಸಬೇಕು ಎಂದು ಕರ್ನಾಟಕದ ಗೃಹ ಇಲಾಖೆ ಕಾರ್ಯದರ್ಶಿ ಮತ್ತು ಪೊಲೀಸ್ ಇಲಾಖೆಗೆ ಆದೇಶಿಸಿದ್ದಾರೆ. ವಸ್ತುಗಳನ್ನು ಪರಿಶೀಲಿಸಿ ಪಡೆಯಲು ಕಾರ್ಯದರ್ಶಿ ಮಟ್ಟದಲ್ಲಿ ಸೂಕ್ತ ವ್ಯಕ್ತಿಗಳನ್ನು ನಿಯೋಜಿಸುವಂತೆ ತಮಿಳುನಾಡು ಸರ್ಕಾರದ ಗೃಹ ಇಲಾಖೆಗೆ ನ್ಯಾಯಾಲಯ ನಿರ್ದೇಶಿಸಿದ್ದು, ಜಯಲಲಿತಾ ವಿರುದ್ಧದ ಅಕ್ರಮ ಆಸ್ತಿ ಗಳಿಕೆ ಪ್ರಕರಣದ ವಿಚಾರಣೆಗಾಗಿ ವೆಚ್ಚವಾಗಿರುವ ಐದು ಕೋಟಿ ಹಣವನ್ನು ಡಿಡಿ ರೂಪದಲ್ಲಿ ಕರ್ನಾಟಕ ಸರ್ಕಾರಕ್ಕೆ ಪಾವತಿಸುವಂತೆ ತಮಿಳುನಾಡು ಸರ್ಕಾರಕ್ಕೆ ನ್ಯಾಯಾಲಯ ಈ ಮೂಲಕ ನಿರ್ದೇಶಿಸಿದೆ. ರಾಜ್ಯ ಸರ್ಕಾರಿ ವಿಶೇಷ ಅಭಿಯೋಜಕರಾಗಿರುವ ಕಿರಣ್ ಎಸ್. ಜವಳಿ ಅವರು ಜಪ್ತಿಯಾದ ಜಯಲಲಿತಾ ಅವರ ಆಸ್ತಿ–ವಸ್ತುಗಳ ವಿವರಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದರು. ಅದನ್ನು ಪರಿಗಣಿಸಿದ ನ್ಯಾಯಾಲಯ ಈ ಆದೇಶ ಮಾಡಿದೆ. ಅಕ್ರಮ ಆಸ್ತಿ ಗಳಿಕೆ ಪ್ರಕರಣ ಸಂಬಂಧ ಬೆಂಗಳೂರಿನ ವಿಶೇಷ ನ್ಯಾಯಾಲಯವು ಜಯಲಲಿತಾಗೆ ನಾಲ್ಕು ವರ್ಷ ಜೈಲು ಮತ್ತು 100 ಕೋಟಿ ರೂಪಾಯಿ ದಂಡ ವಿಧಿಸಿ 2014ರ ಸೆಪ್ಟೆಂಬರ್ 27ರಂದು ಆದೇಶಿಸಿತ್ತು. ಜೊತೆಗೆ ಜಪ್ತಿ ಮಾಡಲಾದ ಜಯಲಲಿತಾ ಅವರ ಬೆಲೆಬಾಳುವ ವಸ್ತುಗಳನ್ನು ಆರ್‌ಬಿಐ, ಎಸ್‌ಬಿಐಗೆ ಅಥವಾ ಸಾರ್ವಜನಿಕ ಹರಾಜು ಮೂಲಕ ಮಾರಾಟ ಮಾಡಬೇಕು. ಅದರಿಂದ ಬಂದ ಹಣವನ್ನು ದಂಡ ಮೊತ್ತಕ್ಕೆ ಹೊಂದಾಣಿಕೆ ಮಾಡಬೇಕು ಎಂದು ನಿರ್ದೇಶಿಸಿತ್ತು.

ಇದರಿಂದ ಆರ್‌ಟಿಐ ಕಾರ್ಯಕರ್ತ ನರಸಿಂಹ ಮೂರ್ತಿ ಅವರು ಜಯಲಲಿತಾ ಅವರ ವಸ್ತುಗಳ ವಿಲೇವಾರಿಗೆ ಕೈಗೊಂಡಿರುವ ಕ್ರಮದ ಮಾಹಿತಿ ನೀಡುವ ಸಂಬಂಧ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

ಏನೆಲ್ಲಾ ವಸ್ತುಗಳಿವೆ: 7,040 ಗ್ರಾಂ ತೂಕದ 468 ಬಗೆಯ ಚಿನ್ನ ಹಾಗೂ ವಜ್ರಖಚಿತ ಆಭರಣಗಳು, 700 ಕೆ ಜಿ ತೂಕದ ಬೆಳ್ಳಿ ಆಭರಣಗಳು, 740 ದುಬಾರಿ ಚಪ್ಪಲಿಗಳು, 11,344 ರೇಷ್ಮೆ ಸೀರೆಗಳು, 250 ಶಾಲು, 12 ರೆಫ್ರಿಜಿರೇಟರ್, 10 ಟಿ ವಿ ಸೆಟ್ , 8 ವಿಸಿಆರ್, 1 ವಿಡಿಯೊ ಕ್ಯಾಮರಾ, 4 ಸಿಡಿ ಪ್ಲೇಯರ್, 2 ಆಡಿಯೋ ಡೆಕ್, 24 ಟೂ–ಇನ್ ಒನ್ ಟೇಪ್ ರೇಕಾರ್ಡರ್, 1,040 ವಿಡಿಯೋ ಕ್ಯಾಸೆಟ್, 3 ಐರನ್ ಲಾಕರ್, 1,93,202 ರೂಪಾಯಿ ನಗದು ಸೇರಿದಂತೆ ಹಲವು ವಸ್ತುಗಳು ಜಯಲಲಿತಾ ಅವರಿಂದ ಜಪ್ತಿ ಮಾಡಲಾಗಿತ್ತು.

ರಾಮ ಮಂದಿರ ಅಭಿವೃದ್ಧಿಗೆ ಸ್ಫೂರ್ತಿ



ನವದೆಹಲಿ: ಅಯೋಧ್ಯೆಯಲ್ಲಿನ ಭವ್ಯವಾದ ರಾಮ ಮಂದಿರವು 'ನಮಗೆ ಅಭಿವೃದ್ಧಿ ಮತ್ತು ಯಶಸ್ಸಿಗೆ ಹೊಸ ಮಾದರಿಗಳನ್ನು ಸೃಷ್ಟಿಸಲು ಸ್ಫೂರ್ತಿಯಾಗಿರುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮಂಗಳವಾರ ಬರೆದಿರುವ ಪತ್ರದಲ್ಲಿದೆ ಹೇಳಿದ್ದಾರೆ. ನನ್ನ ಜೀವನದ ಅತ್ಯಂತ ಅವಿಸ್ಮರಣೀಯ ಕ್ಷಣಗಳನ್ನು ಕಂಡು ಅಯೋಧ್ಯೆಯಿಂದ ಮರಳಿದ ನಂತರ ನಾನು ಈ ಪತ್ರವನ್ನು ನಿಮಗೆ ಬರೆಯುತ್ತಿದ್ದೇನೆ. ನನ್ನ ಹೃದಯದಲ್ಲಿ ಅಯೋಧ್ಯೆಯನ್ನು ಇರಿಸಿಕೊಂಡು ಬಂದಿದ್ದೇನೆ, ನನ್ನಿಂದ ಯಾವತ್ತಿಗೂ ಬೇರೆಯಾಗದ ಅಯೋಧ್ಯೆ ಎಂದು ಅವರು ಬರೆದಿದ್ದಾರೆ. ರಾಮ ಮಂದಿರದ ಉದ್ಘಾಟನೆಗೂ ಮೊದಲು ಮುರ್ಮು ಅವರು ಪ್ರಧಾನಿಗೆ ಪತ್ರ ಬರೆದಿದ್ದರು. ಇದಕ್ಕೆ ಉತ್ತರವಾಗಿ ಪ್ರಧಾನಿ ಈ ಪತ್ರ ಬರೆದಿದ್ದಾರೆ. ದೇಶದ 140 ಕೋಟಿ ಜನರೊಂದಿಗೆ ಸೇರಿ ಬಾಲರಾಮನನ್ನು ಸ್ವಾಗತಿಸುವುದು ಅದ್ಭುತ ಅನುಭವ ಆಗಿತ್ತು ಎಂದು ಮೋದಿ ಅವರು ಹೇಳಿದ್ದಾರೆ.

ಮಡಿಕೇರಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಪ್ರತಿಭಟನೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ಮಂಗಳವಾರ ಅಂಗನವಾಡಿ ಕಾರ್ಯಕರ್ತೆಯರು ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಮಡಿಕೇರಿ, ಜ.23–ಕನಿಷ್ಠ ವೇತನ, ಪಿಂಚಣಿ ಸೌಲಭ್ಯ ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಅಂಗನವಾಡಿ ಕಾರ್ಯಕರ್ತೆಯರು ನಗರದಲ್ಲಿ ಮಂಗಳವಾರ ಬೃಹತ್ ಪ್ರತಿಭಟನೆ ನಡೆಸಿದರು.

ಜಿಲ್ಲೆಯ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು, ಕೊಡಗು ಜಿಲ್ಲಾ ಅಂಗನವಾಡಿ ನೌಕರರ ಸಂಘ ಹಾಗೂ ಸಿಐಟಿಯು ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿ ಪ್ರಸ್ತುತ ಮಾಸಿಕ 11,500 ರೂ. ಗೌರವಧನ ಪಡೆಯುತ್ತಿದ್ದಾರೆ. 2017 ರಿಂದ ಗೌರವಧನ ಹೆಚ್ಚಳವಾಗಿಲ್ಲ. ಬೆಲೆ ಏರಿಕೆಯ ಇತ್ತೀಚಿನ ದಿನಗಳಲ್ಲಿ ಕನಿಷ್ಠ 31 ಸಾವಿರ ರೂ. ವೇತನ ನೀಡಬೇಕು. ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಿ ನಿವೃತ್ತರಾಗುವವರಿಗೆ ಕನಿಷ್ಠ 10 ಸಾವಿರ ರೂ. ಪಿಂಚಣಿ ಸೌಲಭ್ಯ ಕಲ್ಪಿಸಬೇಕೆಂದು ಆಗ್ರಹಿಸಿದರು.

ಸೋಮವಾರಪೇಟೆ ತಾಲೂಕು ಅಂಗನವಾಡಿ ನೌಕರರ ಸಂಘದ ಖಜಾಂಚಿ ಎಂ.ಬಿ.ಜಮುನಾ ಹಾಗೂ ಬಿಸಿಯೂಟ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಪ್ರಮೀಳಾ ಮಾತನಾಡಿ, ಹಲವು ವರ್ಷಗಳಿಂದ ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುತ್ತಿದೆ. ಆದರೆ, ಯಾವುದೇ ಪರಿಹಾರ ಸಿಕ್ಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಬಳಿಕ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಸಮಿತಿಯ ಜಿಲ್ಲಾಧ್ಯಕ್ಷ ಪಿ.ಆರ್.ಭರತ್, ಪ್ರಧಾನ ಕಾರ್ಯದರ್ಶಿ ಎ.ಸಿ.ಸಾಬು, ಕುಟ್ಟಪ್ಪ, ಪೊನ್ನಂಪೇಟೆ ತಾಲೂಕು ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ವಿ.ಎಸ್.ಸುಮಿತ್ರಾ, ಕಾರ್ಯದರ್ಶಿ ಬಿ.ಸಿ.ಲಲಿತಾಕ್ಷಿ, ಮಡಿಕೇರಿ ತಾಲೂಕು ಸಂಘದ ಅಧ್ಯಕ್ಷೆ ಬಿ.ಎಸ್.ಸರೋಜ, ವಿರಾಜಪೇಟೆ ತಾಲೂಕು ಅಧ್ಯಕ್ಷೆ ಎ.ವಿ.ಶೀಲಾ, ಕಾರ್ಯದರ್ಶಿ ಎಂ.ಬಿ. ಲೀಲಾವತಿ ಮತ್ತಿತರರು ಪಾಲ್ಗೊಂಡಿದ್ದರು.

ಲೈನ್‌ಮನೆ ತಡೆಗೋಡೆಗೆ ಬಸ್ ಡಿಕ್ಕಿ



ಮಡಿಕೇರಿ, ಜ.23– ಕೇರಳದಿಂದ ಮೈಸೂರಿಗೆ ಹೋಗುತ್ತಿದ್ದ ಕೇರಳ ಬಸ್ ಲೈನ್‌ಮನೆಯ ತಡೆಗೋಡೆಗೆ ಡಿಕ್ಕಿ ಹೊಡೆದ ಘಟನೆ ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ಹೋಬಳಿಯ ಕೊತ್ತೂರು ಗ್ರಾಮದಲ್ಲಿ ಮಂಗಳವಾರ ಮುಂಜಾನೆ ನಡೆದಿದೆ.

ಕೇರಳ ಸಾರಿಗೆ ಸಂಸ್ಥೆಯ ಬಸ್ ಎಂದಿನಂತೆ ಕೇರಳದಿಂದ ಪೊನ್ನಂಪೇಟೆ ಕೊತ್ತೂರು ಮಾರ್ಗವಾಗಿ ಮೈಸೂರಿಗೆ ಹೋಗುವಾಗ ಮುಂಜಾನೆ 3 ಗಂಟೆಯಲ್ಲಿ ರಸ್ತೆ ಬದಿಯ ಲೈನ್‌ಮನೆಯ ತಡೆಗೋಡೆಗೆ ಡಿಕ್ಕಿ ಹೊಡೆದಿದೆ ಪರಿಣಾಮ ತಡೆಗೋಡೆಗೆ ಹಾನಿಯಾಗಿದ್ದು, ಬಸ್‌ನ ಪ್ರಯಾಣಿಕರು ಅಪಾಯದಿಂದ ಪಾರಾಗಿದ್ದಾರೆ. ಕುಟ್ಟ ಠಾಣೆ ಪೊಲೀಸರು, ಸ್ಥಳ ಪರಿಶೀಲಿಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ

ನಾಳೆ ಜಿಲ್ಲೆಗೆ ಸಿಎಂ ಸಿದ್ದರಾಮಯ್ಯ ಭೇಟಿ

▸ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ▸ ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜು ಮಾಹಿತಿ



ವಿರಾಜಪೇಟೆ ಪಂಜರುಪೇಟೆಯ ಶಾಸಕರ ಗೃಹಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೋಸರಾಜು ಮಾತನಾಡಿದರು.

ವಿರಾಜಪೇಟೆ, ಜ.23– ಜಿಲ್ಲೆಗೆ ಜ.25 ರಂದು ಆಗಮಿಸಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೋಸರಾಜು ತಿಳಿಸಿದರು.

ವಿರಾಜಪೇಟೆ ಪಂಜರುಪೇಟೆಯ ಶಾಸಕರ ಗೃಹಕಚೇರಿಯಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10.30ಕ್ಕೆ ಹೆಲಿಕಾಪ್ಟರ್ ಮೂಲಕ ವಿರಾಜಪೇಟೆಗೆ ಆಗಮಿಸಲಿದ್ದಾರೆ. ಬಳಿಕ ಪಟ್ಟಣದ ಸಂತಅನ್ನಮ್ಮ ಕಾಲೇಜು ಮೈದಾನದಲ್ಲಿ ವಿರಾಜಪೇಟೆ ಕ್ಷೇತ್ರದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ. ಬಳಿಕ ಸಾರ್ವಜನಿಕ ಸಮಾವೇಶದಲ್ಲಿ ಮಾತನಾಡಲಿದ್ದಾರೆ ಎಂದು ಮಾಹಿತಿ ನೀಡಿದರು. ಮಧ್ಯಾಹ್ನ 2.30ಕ್ಕೆ ಮಡಿಕೇರಿಯಲ್ಲಿ ನಡೆಯುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಉದ್ಘಾಟನೆ ಹಾಗೂ ವಿವಿಧ ಯೋಜನೆಗಳ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಬಳಿಕ ನಗರದ ಗಾಂಧಿ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಸಿ, ಸಂಜೆ 4.15ಕ್ಕೆ ಮಡಿಕೇರಿಯ ಗಾಲ್ಫ್ ಗ್ರೌಂಡ್‌ನ ಹೆಲಿಪ್ಯಾಡ್ ಮೂಲಕ ಬೆಂಗಳೂರಿಗೆ ಪ್ರಯಾಣ ಬೆಳೆಸಲಿದ್ದಾರೆ ಎಂದು ತಿಳಿಸಿದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಇದೇ ತಿಂಗಳು ಕ್ಷೇತ್ರದ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ 194 ಕೋಟಿ ರೂ. ಅನುದಾನ ಬಿಡುಗಡೆಯಾಗಲಿದೆ. ಈಗಾಗಲೇ ಕೆಲ ಕಾಮಗಾರಿಗಳು ಪ್ರಗತಿಯಲಿದ್ದು, ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಮೃತ ಯೋಜನೆಯಡಿ ವಿರಾಜಪೇಟೆಗೆ ಶಾಶ್ವತ ಕುಡಿಯುವ ನೀರಿಗೆ 58 ಕೋಟಿ ರೂ., ನಗರ ಭೂ ಸಾರಿಗೆ ನಿರ್ದೇಶನಾಲಯದಿಂದ ದೊಡ್ಡಟ್ಟಿ ಚೌಕಿಯಿಂದ ಕಾವೇರಿ ಕಾಲೇಜು–ಗಡಿಯಾರ ಕಂಬದ ವರೆಗೆ ಪಾದಚಾರಿಗಳ ರಸ್ತೆ ಹಾಗೂ ಬೀದಿದೀಪಗಳ ಕಾಮಗಾರಿ, ಪಟ್ಟಣದ ಗೌರಿಕೆರೆ ಅಭಿವೃದ್ಧಿ, ಅರಸು ನಗರದ ಬೆಟ್ಟ ಪ್ರದೇಶದ ಮನೆಗಳಿಗೆ ಮೆಟ್ಟಿಲುಗಳ ನಿರ್ಮಾಣಕ್ಕೆ 850 ಕೋಟಿ ರೂ., ಪರಿಶಿಷ್ಟ ಕಲ್ಯಾಣ ಇಲಾಖೆಯ ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಬಾಲಕರ ವಿದ್ಯಾರ್ಥಿ ನಿಲಯಕ್ಕೆ 3 ಕೋಟಿ ರೂ., ವಿರಾಜಪೇಟೆಯಲ್ಲಿ ನೆನೆಗುದಿಗೆ ಬಿದ್ದಿರುವ ಅಂಬೇಡ್ಕರ್ ಭವನದ ಕಾಮಗಾರಿಗೆ 25 ಲಕ್ಷ ರೂ. ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಅನುದಾನ ಬಿಡುಗಡೆಯಾಗಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಕಾಂಗ್ರೆಸ್ ಮುಖಂಡ ಕೆ.ಬಿ.ಶಾಂತಪ್ಪ, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿಪೂಣಚ್ಚ, ಪೊನ್ನಂಪೇಟೆ ಬ್ಲಾಕ್ ಅಧ್ಯಕ್ಷ ಮೀದೇರಿರ ನವೀನ್ ಮತ್ತಿತರರು ಉಪಸ್ಥಿತರಿದ್ದರು.

ಕೃಷಿಕರು, ಬುಡಕಟ್ಟು ಕಾರ್ಮಿಕರ ಪ್ರತಿಭಟನೆ



ಜೀತಪದ್ಧತಿ ಮುಕ್ತಿ ನೆಪದಲ್ಲಿ ಲೈನ್‌ಮನೆ ಕಾರ್ಮಿಕರನ್ನು ಗಿರಿಜನ ಬಾಲಕರ ವಸತಿ ನಿಲಯದಲ್ಲಿ ಇರಿಸಿಕೊಳ್ಳಲಾಗಿದೆ ಎಂದು ಆರೋಪಿಸಿ ಕೃಷಿಕರು ಮತ್ತು ಬುಡಕಟ್ಟು ಕಾರ್ಮಿಕರು ಪೊನ್ನಂಪೇಟೆ ತಾಲೂಕಿನ ಕುಟ್ಟ ಗ್ರಾಮದಲ್ಲಿ ಪ್ರತಿಭಟನೆ ನಡೆಸಿದರು.

ಗೋಣಿಕೊಪ್ಪ, ಜ.23–ಸರ್ಕಾರೇತರ ಸಂಸ್ಥೆಯೊಂದು ಜೀತಪದ್ಧತಿ ಮುಕ್ತಿ ನೆಪದಲ್ಲಿ ಲೈನ್‌ಮನೆ ಕಾರ್ಮಿಕರನ್ನು ಗಿರಿಜನ ಬಾಲಕರ ವಸತಿ ನಿಲಯದಲ್ಲಿ ಇರಿಸಿಕೊಂಡಿದೆ ಎಂದು ಆರೋಪಿಸಿ ಕೃಷಿಕರು ಮತ್ತು ಬುಡಕಟ್ಟು ಕಾರ್ಮಿಕರು ಪೊನ್ನಂಪೇಟೆ ತಾಲೂಕಿನ ಕುಟ್ಟ ಗ್ರಾಮದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಹಾತೂರು, ದೇವನೂರು, ಮಾಯಮುಡಿ, ಕೊತೂರು, ನಾಲ್ಕೇರಿ, ಕೆ.ಬಾಡಗ, ಪಾಲಿಬೆಟ್ಟದ ವ್ಯಾಪ್ತಿಯ ಸುಮಾರು 12 ಕುಟುಂಬಗಳ 28 ಕಾರ್ಮಿಕರನ್ನು ಜೀತದ ಪದ್ಧತಿ ಮುಕ್ತಿ ನೆಪದಲ್ಲಿ 25 ದಿನಗಳಿಂದ ವಸತಿ ನಿಲಯದಲ್ಲಿ ಇರಿಸಿಕೊಳ್ಳಲಾಗಿದೆ. ಇದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿದ್ದು, ಕೊಡಗಿನಲ್ಲಿ ಜೀತಪದ್ಧತಿ ಇಲ್ಲದಿದ್ದರೂ ಹೊರಗಿನಿಂದ ಬಂದ ಕೆಲವರು ಎನ್‌ಜಿಓ ಸಂಸ್ಥೆ ಎಂದು ಹೇಳಿಕೊಂಡು ಬೆಳೆಗಾರರು ಹಾಗೂ ಕಾರ್ಮಿಕರ ನಡುವೆ ಕಂದಕ ಸೃಷ್ಟಿಸುತ್ತಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ಇದೇ ವೇಳೆ ಮನವಿ ಸ್ವೀಕರಿಸಿದ ಉಪವಿಭಾಗಾಧಿಕಾರಿ ನರ್ವಾಡೆ ವಿನಾಯಕ್, ಈ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳುವುದಾಗ ಭರವಸೆ ನೀಡಿದರು. ಪ್ರತಿಭಟನೆಯಲ್ಲಿ ರೈತ ಸಂಘದ ಸಂಚಾಲಕ ಪುಚ್ಚಿಮಾಡ ಸುಭಾಸ್ ಸುಬಯ್ಯ ಹಾಗೂ ಬುಡಕಟ್ಟು ಕೃಷಿಕರ ಸಂಘದ ಜಿಲ್ಲಾಧ್ಯಕ್ಷ ಗಣೇಶ್, ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶಿವು ಮಾದಪ್ಪ, ಜಿಪಂ ಮಾಜಿ ಸದಸ್ಯ ಮೂಕೊಂಡ ವಿಜು ಸುಬ್ರಮಣಿ, ತಿತಿಮತಿ ಲ್ಯಾಂಪ್ಸ್ ಸೊಸೈಟಿಯ ಅಧ್ಯಕ್ಷ ಮಣಿ, ರೈತಸಂಘ ಜಿಲ್ಲಾ ಕಾರ್ಯದರ್ಶಿ ಅಜ್ಜಮಾಡ ಚಂಗಪ್ಪ, ವಿರಾಜಪೇಟೆ ಅಧ್ಯಕ್ಷ ಬಾಚಮಾಡ ಭವಿ ಕುಮಾರ್, ಬಾಳಲೆ ಹೋಬಳಿ ಅಧ್ಯಕ್ಷ ಕಿಸಾ ಮಾಚ್ಚಯ್ಯ, ಶ್ರೀಮಂಗಲ ಹೋಬಳಿ ಅಧ್ಯಕ್ಷ ಚಟ್ಟಂಗಡ ಕಂಬ ಕಾರ್ಯಪ್ಪ, ಮಾಯಮುಡಿ ಗ್ರಾಮದ ಅಧ್ಯಕ್ಷ ಪುಚ್ಚಿಮಾಡ ರಾಯ್ ಮಾದಪ್ಪ ಇದ್ದರು.

ಜ.26ರಿಂದ 28ರವರೆಗೆ ಫಲಪುಷ್ಪ ಪ್ರದರ್ಶನ

ಮಡಿಕೇರಿ, ಜ.23–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ತೋಟಗಾರಿಕೆ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಜ.26 ರಿಂದ 28ರ ವರೆಗೆ ನಗರದ ರಾಜಾಸೀಟ್‌ನ ಉದ್ಯಾನ ಹಾಗೂ ಗಾಂಧಿ ಮೈದಾನದಲ್ಲಿ ಫಲಪುಷ್ಪ ಪ್ರದರ್ಶನ ನಡೆಯಲಿದೆ.

ಜ.26ರಂದು ಬೆಳಗ್ಗೆ 11 ಗಂಟೆಗೆ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಲಾಗುವುದು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್.ಭೋಸರಾಜು, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರಾದ ಡಾ.ಮಂತರ್ ಗೌಡ, ಎ.ಎಸ್. ಪೊನ್ನಣ್ಣ, ಸಂಸದ ಪ್ರತಾಪ್ ಸಿಂಹ, ವಿಧಾನಪರಿಷತ್ ಸದಸ್ಯರಾದ ಎಂ.ಪಿ. ಸುಜಾ ಕುಶಾಲಪ್ಪ ಎಸ್.ಎಲ್. ಭೋಜೇಗೌಡ, ನಗರಸಭೆ ಅಧ್ಯಕ್ಷೆ ಎನ್.ಪಿ. ಅನಿತಾ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಕಾರ್ಯದರ್ಶಿ ಡಾ.ಶಾಮ್ಲಾ ಇಕ್ಬಾಲ್, ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎನ್.ವಿ.ಪ್ರಸಾದ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕತ್ತಲೆಕಾಡು ಜೇನುಕೊಲ್ಲಿಯಲ್ಲಿ ದೀಪೋತ್ಸವ



ಮಡಿಕೇರಿ, ಜ.23– ಅಯೋಧ್ಯೆಯ ಬಾಲರಾಮ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ಕತ್ತಲೆಕಾಡು ಜೇನುಕೊಲ್ಲಿಯಲ್ಲಿ ವಿನಾಯಕ ಸೇವಾ ಸಮಿತಿ ವತಿಯಿಂದ ದೀಪೋತ್ಸವ ಹಾಗೂ ಭಜನಾ ಕಾರ್ಯಕ್ರಮ ಜರುಗಿತು. ಸಮಿತಿ ಆವರಣದಲ್ಲಿ ಗ್ರಾಮದ ಸಾರ್ವಜನಿಕರು, ಹಣತೆಗಳನ್ನು ಬೆಳಗಿದರು. ಬಳಿಕ ಸುಭಾಷ್ ಮತ್ತು ಸ್ಥಳೀಯ ಮಕ್ಕಳು ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು. ಇದೇ ಸಂದರ್ಭ ಅನ್ನಸಂತರ್ಪಣೆ ನಡೆಯಿತು. ಕತ್ತಲೆಕಾಡು, ಜೇನುಕೊಲ್ಲಿ, ಕ್ಲೋಸ್‌ಬರ್ನ್ ಭಾಗದ ಸಾರ್ವಜನಿಕರು ಪಾಲ್ಗೊಂಡಿದ್ದರು. ಸಮಿತಿ ಅಧ್ಯಕ್ಷ ಎಂ.ಎಸ್. ಅಶೋಕ್, ಕಾರ್ಯದರ್ಶಿ ಬ್ರಿಜೇಶ್ ರೈ, ಖಜಾಂಚಿ ಸತೀಶ್ ರೈ, ಮಾಜಿ ಅಧ್ಯಕ್ಷ ಹೊನ್ನಪ್ಪ ಆಚಾರ್ಯ, ಮಹಿಳಾ ಘಟಕದ ಪ್ರತಿಭಾ, ರಮಣಿ ಶೇಷಪ್ಪ, ವಿದ್ಯಾರ್ಥಿ ಘಟಕದ ಸದಸ್ಯರು ಹಾಜರಿದ್ದರು.

ಫೆ.11ರಂದು ವಧು–ವರರ ಸಮಾವೇಶ

ಮಡಿಕೇರಿ, ಜ.23– ಕೊಡಗು ಗೌಡ ನಿವೃತ್ತ ನೌಕರರ ಸಂಘದ ವತಿಯಿಂದ ಅರೆಭಾಷಿಕ ಗೌಡ ಜನಾಂಗದ ವಧು–ವರರ ಸಮಾವೇಶ ಫೆ.11ರಂದು ಬೆಳಗ್ಗೆ 9.30ಕ್ಕೆ ನಗರದ ಕೊಡಗುಗೌಡ ವಿದ್ಯಾ ಸಂಘದ ಸಭಾಂಗಣದಲ್ಲಿ ನಡೆಯಲಿದೆ.

ಆಸಕ್ತರು ತಮ್ಮ ಭಾವಚಿತ್ರ ಮತ್ತು ಇತರೆ ಮಾಹಿತಿಗಳೊಂದಿಗೆ ಖುದ್ದಾಗಿ ಭಾಗವಹಿಸಬಹುದು. ಅಪೇಕ್ಷಿತ ವಧು–ವರರನ್ನು ಕರೆದುಕೊಂಡು ಬರಬೇಕು. ಮಾಹಿತಿಗೆ ಮೊ.ಸಂ: 9379213818, 9739495381 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ಚಾಮರಾಜನಗರದ ಜಿಲ್ಲಾಡಳಿತ ಭವನದ ಎದುರು ಮಂಗಳವಾರ ಸಿಐಟಿಯು ನೇತೃತ್ವದಲ್ಲಿ ರಾಜ್ಯ ಅಂಗನವಾಡಿ ನೌಕರರ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜ.23– ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಸಿಐಟಿಯು ನೇತೃತ್ವದಲ್ಲಿ ರಾಜ್ಯ ಅಂಗನವಾಡಿ ನೌಕರರ ಸಂಘದ ವತಿಯಿಂದ ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರ ದೇವಾಲಯ ಮುಂಭಾಗದಲ್ಲಿ ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷೆ ಕೆ.ಸುಜಾತ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ನಾಗಮಣಿ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಸಂಸದರ ಆಪ್ತಸಹಾಯಕರಿಗೆ ಮನವಿ ಸಲ್ಲಿಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ನಾಗಮಣಿ ಮಾತನಾಡಿ, ಆಹಾರ, ಆರೋಗ್ಯ, ಶಿಕ್ಷಣದ ಯೋಜನೆಗಳಾದ ಐಸಿಡಿಎಸ್, ಎಂಡಿಎಂ, ಎನ್‌ಎಚ್‌ಎಂ, ಐಸಿಪಿಎಸ್, ಎಸ್‌ಎಸ್‌ಎ, ಎಂಎನ್‌ಆರ್‌ಇಜಿ ಮುಂತಾದ ಯೋಜನೆಗಳನ್ನು ಕಾಯಂಗೊಳಿಸಬೇಕು. ಭಾರತೀಯ ಕಾರ್ಮಿಕ ಸಮ್ಮೇಳನ ಶಿಫಾರಸ್ಸಿನಂತೆ ಈ ಯೋಜನೆಯಡಿ ದುಡಿಯುತ್ತಿರುವ ಸಿಬ್ಬಂದಿ ಸೇರಿದಂತೆ 1 ಕೋಟಿ ನೌಕರರಿಗೆ ಕನಿಷ್ಠ ವೇತನ, ನಿವೃತ್ತಿ ಸೌಲಭ್ಯ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಖಜಾಂಚಿ ಜೆ.ಭಾಗ್ಯ, ಪದಾಧಿಕಾರಿಗಳಾದ ಶಾಯಿದ ಬಾನು, ಪಾರ್ವತಮ್ಮ, ಶಾಂತಮ್ಮ, ಭಾಗ್ಯ, ಸುಜಿಯಾ, ತುಳಸಮ್ಮ, ಮೀನಾಕ್ಷಿ, ಗುರುಮಲ್ಲಮ್ಮ, ಜಯಮಾಲ, ಗುರುಲಿಂಗಮ್ಮ, ಸುಮಿತ್ರ, ಮರಿಯಮ್ಮ, ಸುನೀಲ್ ಇತರರು ಭಾಗವಹಿಸಿದ್ದರು.

ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

● ರಾಹುಲ್ ಗಾಂಧಿ ಮೇಲೆ ಹಲ್ಲೆಗೆ ಯತ್ನ ● ಶಾಸಕ ಸಿ.ಪುಟ್ಟರಂಗಶೆಟ್ಟಿ ಆರೋಪ



ರಾಹುಲ್ ಗಾಂಧಿ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆಗೆ ಯತ್ನಿಸಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಮಂಗಳವಾರ ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಜ.23–ಭಾರತ್ ಜೋಡೋ ನ್ಯಾಯ ಯಾತ್ರೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮೇಲೆ ಬಿಜೆಪಿ ಕಾರ್ಯಕರ್ತರು ಹಲ್ಲೆಗೆ ಯತ್ನಿಸಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ದೇವಾಲಯ ಮುಂಭಾಗ ಶಾಸಕ ಸಿ.ಪುಟ್ಟರಂಗಶೆಟ್ಟಿ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತಕ್ಕೆ ತೆರಳಿ ಅಲ್ಲಿನ ಹೆದ್ದಾರಿಯಲ್ಲಿ ಕೆಲಕಾಲ ಮಾನವ ಸರಪಳಿ ರಚಿಸಿ, ಬಿಜೆಪಿ ಕಾರ್ಯಕರ್ತರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಅಸ್ಸಾಂ ಮೂಲಕ ಸಾಗುತ್ತಿದ್ದ ಭಾರತ್ ಜೋಡೋ ನ್ಯಾಯ ಯಾತ್ರೆ ವೇಳೆ ರಾಹುಲ್ ಗಾಂಧಿ ಮೇಲೆ ಹಲ್ಲೆಗೆ ಬಿಜೆಪಿ ಕಾರ್ಯಕರ್ತರು ಯತ್ನಿಸಿರುವುದು ಖಂಡನೀಯ. ಹಲ್ಲೆಗೆ ಯತ್ನಿಸಿದ ಬಿಜೆಪಿ ಕಾರ್ಯಕರ್ತರನ್ನು ಬಂಧಿಸಿ, ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ನ್ಯಾಯ ಯಾತ್ರೆಯನ್ನು ಬಿಜೆಪಿ ಗೂಂಡಾಗಳು ತಡೆದು ರಾಹುಲ್ ಗಾಂಧಿ ಮೇಲೆ ಹಲ್ಲೆಗೆ ಯತ್ನಿಸಿದ್ದಾರೆ. ಬಿಜೆಪಿಯವರು ದೇಶದಲ್ಲಿ ರಾಮರಾಜ್ಯ ಮಾಡುತ್ತಿಲ್ಲ, ಗೂಂಡಾರಾಜ್ಯ ತರುವ ಕೆಲಸ ಮಾಡಿದ್ದಾರೆ ಎಂದು ದೂರಿದರು.

ಜಿಲ್ಲಾಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನ, ಅರಕಲವಾಡಿ ಗುರುಸ್ವಾಮಿ, ಹೆಚ್.ವಿ.ಚಂದ್ರು, ತೋಟೋಶ್, ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಜಿಲ್ಲಾ ಮಹಿಳಾ ಅಧ್ಯಕ್ಷೆ ಲತಾ ರಾಜಶೇಖರ ಜತ್ತಿ ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವ್, ಆರ್.ಮಹದೇವ್, ಜಿಪಂ ಮಾಜಿ ಸದಸ್ಯರಾದ ಸದಾಶಿವಮೂರ್ತಿ, ರಮೇಶ್, ಕೊಪ್ಪಾಳಿ ಮಹದೇವನಾಯಕ, ಮುಖಂಡರಾದ ಡಿ.ಎನ್. ನಟರಾಜ್, ಸೋಮಣ್ಣ ನಗರಸಭಾ ಸದಸ್ಯರಾದ ಚಿನ್ನಮ್ಮ, ಆರ್.ಪಿ.ನಂಜುಂಡಸ್ವಾಮಿ, ಸೈಯದ್ ರಫಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗಣರಾಜ್ಯೋತ್ಸವಕ್ಕೆ ನಾಗರಾಜು ದಂಪತಿಗೆ ಆಹ್ವಾನ

ಕೊಳ್ಳೇಗಾಲ, ಜ.23– ದೆಹಲಿಯಲ್ಲಿ 26ರಂದು ನಡೆಯುವ ಗಣರಾಜ್ಯೋತ್ಸವದ ಪೆರೇಡ್ ವೀಕ್ಷಣೆಗೆ ಕೊಳ್ಳೇಗಾಲದ ಕೃಷಿ ಪತ್ತಿನ ಸಹಕಾರಿ ಸಂಘದ ಮುಖ್ಯ



ಕಾರ್ಯನಿರ್ವಾಹಣಾಧಿಕಾರಿ ನಾಗರಾಜು ಮತ್ತು ರಾಜೇಶ್ವರಿ ದಂಪತಿಯನ್ನು ಕೇಂದ್ರ ಸರ್ಕಾರ ಆಹ್ವಾನಿಸಿದೆ.

ಕೊಳ್ಳೇಗಾಲ ಪಿಎಸಿಸಿ ಜನಸ್ನೇಹಿ ವ್ಯವಸ್ಥೆ, ಸಾಫ್ಟ್‌ವೇರ್ ಬಳಕೆ, ಕೇಂದ್ರದ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಗುರುತಿಸಿಕೊಂಡ ಹಿನ್ನೆಲೆಯಲ್ಲಿ ಗಣರಾಜ್ಯೋತ್ಸವದಲ್ಲಿ ಪಾಲ್ಗೊಳ್ಳಲು ಆಮಂತ್ರಣ ನೀಡಲಾಗಿದೆ. ಕೇಂದ್ರ ಸರ್ಕಾರದ ಸಾಲಸೌಲಭ್ಯ ಹಾಗೂ ಯೋಜನೆಗಳನ್ನು ರೈತರಿಗೆ ಸಮರ್ಪಕ ಅನುಷ್ಠಾನ ಹಾಗೂ ಯುಟಿಲೆಟ್ ಯುಟಿಆರ್ ಇಟಲೆಟ್ (ಸಾಫ್ಟ್‌ವೇರ್ ಅನ್ನು) ಗಣಕೀಕೃತ ವ್ಯವಸ್ಥೆಯನ್ನು ಕೊಳ್ಳೇಗಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಜಾರಿ ಮಾಡಿತ್ತು. ನಾಗರಾಜು ಮತ್ತು ರಾಜೇಶ್ವರಿ ದಂಪತಿ ಜ.25ರಂದು ಬೆಳಗ್ಗೆ 8 ಗಂಟೆಗೆ ಬೆಂಗಳೂರಿನಿಂದ ದೆಹಲಿಗೆ ವಿಮಾನದಲ್ಲಿ ಹೊರಡಲಿದ್ದಾರೆ.



ಚಾಮರಾಜನಗರ ಜಿಲ್ಲೆಯ ಕುಲಗಾಣ ಗ್ರಾಮದ ಜಲವಾಸುದೇವ ಸಭಾಂಗಣದಲ್ಲಿ ಕೂಡಾರೈ ವೇಲ್ಲುಂ ಮಹೋತ್ಸವ ಅಂಗವಾಗಿ ಏರ್ಪಡಿಸಿದ್ದ ಸಂಗೀತ ಕಛೇರಿಯಲ್ಲಿ ನಂಜನಗೂಡಿನ ಶ್ರೀವಿದ್ಯಾ ಪ್ರದರ್ಶಕ ಕಲೆಗಳ ಕೇಂದ್ರದ ಮುಖ್ಯ ಶಿಕ್ಷಕಿ ಆರ್.ಶ್ರೀವಿದ್ಯಾ ಹಾಗೂ ಆರ್.ವೈಷ್ಣವಿ ಅವರು ಕಾರ್ಯಕ್ರಮ ನಡೆಸಿಕೊಟ್ಟರು. ಮೃದಂಗ: ತುಮಕೂರು ಬಿ.ಶಶಿಶಂಕರ್, ಪಿಟೀಲು: ಶಾಂತಕುಮಾರ್ ಹಾಗೂ ಘಟಂ: ಶರತ್ ಕೌಶಿಕ್ ಅವರು ಪಕ್ಕವಾದ್ಯ ನೀಡಿದರು.

ಶಾಸಕ, ಜಿಲ್ಲಾಧಿಕಾರಿ ರಸ್ತೆ ಕಾಮಗಾರಿ ಪರಿಶೀಲನೆ



ಚಾಮರಾಜನಗರದ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಗೂ ಜಿಲ್ಲಾಧಿಕಾರಿ ಶಿಲ್ಪಾನಾಗ್ ಪರಿಶೀಲಿಸಿದರು.

ಚಾಮರಾಜನಗರ, ಜ.23–ನಗರದ ಬಿ.ರಾಚಯ್ಯ ಜೋಡಿರಸ್ತೆ ಅಗಲೀಕರಣ ಹಾಗೂ ನ್ಯಾಯಾಲಯ ರಸ್ತೆ ಅಭಿವೃದ್ಧಿ ಕಾಮಗಾರಿ ಸ್ಥಳವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಹಾಗೂ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಂಗಳವಾರ ಪರಿಶೀಲಿಸಿದರು.

ಪಟ್ಟಣದ ರಸ್ತೆಗಳ ಅಭಿವೃದ್ಧಿ ಸಂಬಂಧ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ದಾಖಲಾದ ಹಿನ್ನೆಲೆಯಲ್ಲಿ ಬೆಳಗ್ಗೆಯೇ ನಗರದ ಅಂಬೇಡ್ಕರ್ ಭವನದಿಂದ ಆರಂಭವಾದ ಪರಿಶೀಲನೆ ಕಾರ್ಯದಲ್ಲಿ ಶಾಸಕ ಹಾಗೂ ಜಿಲ್ಲಾಧಿಕಾರಿ ರಸ್ತೆಯುದ್ದಕ್ಕೂ ಸಂಚರಿಸಿ ರಸ್ತೆ ಅಗಲೀಕರಣಕ್ಕೆ ಎದುರಾಗಿರುವ ಸಮಸ್ಯೆಗಳನ್ನು ಖುದ್ದು ವೀಕ್ಷಿಸಿದರು.

ಕರಿನಂಜನಪುರ ರಸ್ತೆಯ ಎರಡು ಬದಿಗಳಲ್ಲಿ ಒತ್ತುವರಿಯಾಗಿರುವ ಬಗ್ಗೆ ಸ್ಥಳದಲ್ಲಿದ್ದ ನಗರಸಭೆ ಅಧಿಕಾರಿಗಳಿಂದ ಮಾಹಿತಿ ಪಡೆದು ಒತ್ತುವರಿಯಾಗಿರುವ ರಸ್ತೆಯ ವಿಸ್ತೀರ್ಣದ ಅಳತೆಯನ್ನು ಪರಿಶೀಲಿಸಿದರು. ಕರಿನಂಜನಪುರ ರಸ್ತೆಯಲ್ಲಿ ನಡೆಯುತ್ತಿರುವ ಕಾಂಕ್ರೀಟ್ ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ ಜನರ ಸಂಚಾರಕ್ಕೆ ಮುಕ್ತಗೊಳಿಸಬೇಕು. ಮನೆ ಕಟ್ಟಲು ಲೈಸೆನ್ಸ್ ನೀಡುವ ಸಂದರ್ಭದಲ್ಲಿ ಯಾವುದೇ ಸರ್ಕಾರಿ ಜಾಗ ಒತ್ತುವರಿ ಯಾಗದಂತೆ ಜವಾಬ್ದಾರಿ ವಹಿಸುವಂತೆ ಶಾಸಕರು ನಗರಸಭೆ ಅಧಿಕಾರಿಗಳಿಗೆ ಸೂಚಿಸಿದರು.

ಬಳಿಕ ಬಿ.ರಾಚಯ್ಯ ಜೋಡಿರಸ್ತೆಯಲ್ಲಿ ಚರಂಡಿಗಳಿಂದ ಆಗುತ್ತಿರುವ ಸಮಸ್ಯೆಗಳನ್ನು ಪರಿಶೀಲಿಸಿದರು. ಜೋಡಿ ರಸ್ತೆಯ ಕಾಮಗಾರಿ ಕುರಿತು ನಗರಸಭೆ ಅಧಿಕಾರಿಗಳಿಂದ ಮಾಹಿತಿ ಪಡೆದ ಶಾಸಕರು, ಪರಿಹಾರ ಸಂಬಂಧ ಅಗತ್ಯ ಪ್ರಸ್ತಾವನೆ ತಯಾರಿಸಿ ಸಲ್ಲಿಸುವಂತೆ ತಿಳಿಸಿದರು.

ನಗರಸಭಾ ಸದಸ್ಯರಾದ ಆರ್.ಪಿ.ನಂಜುಂಡಸ್ವಾಮಿ, ಎಂ.ಆರ್.ರಾಜಪ್ಪ, ಮಹೇಶ್, ಪೌರಾಯುಕ್ತ ಎಸ್.ವಿ.ರಾಮದಾಸ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ನಟರಾಜು, ಗಿರಿಜಮ್ಮ, ರಾಮಚಂದ್ರ, ಕಂದಾಯ ನಿರೀಕ್ಷಕ ಶರವಣ, ಹಿರಿಯ ಆರೋಗ್ಯ ನಿರೀಕ್ಷರಾದ ಮಂಜುನಾಥ್, ನಾರಾಯಣ್, ಸಮುದಾಯ ಸಂಘಟನಾಧಿಕಾರಿ ವೆಂಕಟನಾಯಕ್ ಸೇರಿದಂತೆ ಇತರರು ಇದ್ದರು.

ಚಿಕ್ಕಲ್ಲೂರು ಜಾತ್ರೆಯಲ್ಲಿ ಪ್ರಾಣಿ ಬಲಿ ನಿಷೇಧ

ಚಾಮರಾಜನಗರ, ಜ.23– ಕೊಳ್ಳೇಗಾಲ ತಾಲೂಕಿನ ಶ್ರೀಕ್ಷೇತ್ರ ಚಿಕ್ಕಲ್ಲೂರು ಘನನೀಲ ಸಿದ್ದಾಪ್ಪಾಜಿ ಜಾತ್ರಾ ಮಹೋತ್ಸವ ಜ.25 ರಿಂದ 30ರ ವರೆಗೆ ಜರುಗಲಿದ್ದು, ಜಾತ್ರಾ ಮಹೋತ್ಸವದಲ್ಲಿ ಯಾವುದೇ ಪ್ರಾಣಿ–ಪಕ್ಷಿ ಬಲಿ ನೀಡದಂತೆ ನಿಷೇಧಿಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಆದೇಶಿಸಿದ್ದಾರೆ.



ದೇವಸ್ಥಾನಗಳಲ್ಲಿ ದೇವರ ಹೆಸರಿನಲ್ಲಿ ಪ್ರಾಣಿಗಳ ಬಲಿ ನೀಡುವುದು ಕಾನೂನಿಗೆ ವಿರೋಧವಾಗಿರುವುದರಿಂದ ಸುವ್ಯವಸ್ಥೆ ಕಾಪಾಡುವ ಉದ್ದೇಶ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಚಿಕ್ಕಲ್ಲೂರು ದೇವಸ್ಥಾನ ಆವರಣ ಅಥವಾ ಗ್ರಾಮದ ವ್ಯಾಪ್ತಿ ಭಕ್ತರು ಯಾವುದೇ ಪ್ರಾಣಿ–ಪಕ್ಷಿ ಬಲಿ ನೀಡಬಾರದು ಎಂದು ತಿಳಿಸಿದ್ದಾರೆ.

ಏಕಮುಖ ಸಂಚಾರ: ಚಿಕ್ಕಲ್ಲೂರು ಜಾತ್ರೆ ಹಿನ್ನೆಲೆಯಲ್ಲಿ ಭಕ್ತರು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಹಾಗೂ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ಉದ್ದೇಶದಿಂದ ಜ.25 ರಿಂದ 30ರವರೆಗೆ ತಾತ್ಕಾಲಿಕವಾಗಿ ಏಕಮುಖ ಮಾರ್ಗದಲ್ಲಿ ವಾಹನ ಸಂಚರಿಸಲು ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ. ಚಿಕ್ಕಲ್ಲೂರು ಗ್ರಾಮಕ್ಕೆ ಒಳ ಬರಲು ಏಕಮುಖವಾಗಿ ಕೊತ್ತನೂರು ಗ್ರಾಮ–ಬಾಣೂರು ಕ್ರಾಸ್–ಬಾಣೂರು–ಸುಂದ್ರಳ್ಳಿ ಮಾರ್ಗವಾಗಿ ಸಂಚರಿಸಬೇಕು. ಚಿಕ್ಕಲ್ಲೂರು ಗ್ರಾಮದಿಂದ ಹೊರ ಹೋಗಲು ಏಕಮುಖವಾಗಿ ಚಿಕ್ಕಲ್ಲೂರು–ಬಾಣೂರು ಕ್ರಾಸ್–ಕೊತ್ತನೂರು ಮಾರ್ಗದಲ್ಲಿ ಸಂಚರಿಸಬೇಕು ಎಂದು ತಿಳಿಸಿದ್ದಾರೆ.

ಸೆಕ್ಟರ್ ಅಧಿಕಾರಿಗಳ ನಿಯೋಜನೆ: ಚಿಕ್ಕಲ್ಲೂರು ಜಾತ್ರೆಗೆ ಹೆಚ್ಚುವರಿ ಸೆಕ್ಟರ್ ಅಧಿಕಾರಿಗಳನ್ನು ಡಿಸಿ ಶಿಲ್ಪಾನಾಗ್ ನಿಯೋಜಿಸಿ ದ್ದಾರೆ. ಜಾತ್ರಾ ಮಹೋತ್ಸವದ ಜ.25 ರಿಂದ 30ರ ಮಧ್ಯರಾತ್ರಿ ವರೆಗೆ ಪ್ರಾಣಿಬಲಿ ನೀಡುವುದು ಮತ್ತು ಮಾರಕಾಸ್ತ್ರಗಳನ್ನು ತರುವುದನ್ನು ತಡೆಗಟ್ಟಲು ಹಾಗೂ ಹೈಕೋರ್ಟ್ ನಿರ್ದೇಶನದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಕಾನೂನು ಮತ್ತು ಸುವ್ಯವಸ್ಥೆಗೆ ಕೊಳ್ಳೇಗಾಲ ಉಪವಿಭಾಗಾಧಿಕಾರಿ ಹಾಗೂ ತಹಶೀಲ್ದಾರ್ ಅವರೊಂದಿಗೆ ಸೆಕ್ಟರ್ ಅಧಿಕಾರಿಗಳನ್ನು ನಿಯೋಜಿಸಿ ಕರ್ತವ್ಯ ನಿರ್ವಹಿಸಲು ಸೂಚಿಸಲಾಗಿದೆ.

ಅಸ್ಸಾಂನಲ್ಲಿ ಭಾರತ್ ಜೋಡೋ ನ್ಯಾಯಯಾತ್ರೆ ಮೇಲೆ ದಾಳಿ ಖಂಡಿಸಿ ಮೈಸೂರಲ್ಲಿ ಕಾಂಗ್ರೆಸ್ ಪ್ರತಿಭಟನೆ

ಕೇಂದ್ರ ಬಿಜೆಪಿ ಸರ್ಕಾರ ಪ್ರಚೋದಿತ ದಾಳಿ; ಅರಣ್ಯ ಸಚಿವ ಈಶ್ವರ್ ಖಂಡ್ರೆ ಆರೋಪ

ಮೈಸೂರು, ಜ.23(ಎಂಟಿವೈ)– ಅಸ್ಸಾಂನಲ್ಲಿ ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೋ ನ್ಯಾಯಯಾತ್ರೆ' ಮೇಲೆ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿ, ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಿದ್ದಾರೆ ಎಂದು ಆರೋಪಿಸಿ ಅರಣ್ಯ ಸಚಿವ ಈಶ್ವರ್ ಖಂಡ್ರೆ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಮೈಸೂರಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಮೈಸೂರಿನ ದಾಸಪ್ಪ ವೃತ್ತದ ಬಳಿ ಮಂಗಳವಾರ ಬೆಳಗ್ಗೆ ಮೈಸೂರು ನಗರ ಹಾಗೂ ಗ್ರಾಮಾಂತರ ಕಾಂಗ್ರೆಸ್ ಮುಖಂಡರು ಪ್ರತಿಭಟನೆ ನಡೆಸಿ, ಕೇಂದ್ರದ ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಪಕ್ಷಗಳ ಹೋರಾಟವನ್ನು ಹತ್ತಿಕ್ಕುವ ಸಂಚು ನಡೆಸುತ್ತಿದೆ. ಕಾಂಗ್ರೆಸ್ ರಾಷ್ಟ್ರೀಯ ನಾಯಕರಾದ ರಾಹುಲ್‌ಗಾಂಧಿ ನೇತೃತ್ವದಲ್ಲಿ ಉತ್ತರ ಭಾರತದಲ್ಲಿ ವಿವಿಧ ರಾಜ್ಯಗಳ ಮೂಲಕ ಭಾರತ್ ಜೋಡೋ ನ್ಯಾಯ ಯಾತ್ರೆ ಕೈಗೊಂಡು ನಾನಾ ಜಾತಿ, ಧರ್ಮಗಳ ಜನರ ಸಂಕಷ್ಟವನ್ನು ಆಲಿಸುತ್ತಿದ್ದಾರೆ. ದಿನೇ ದಿನೆ ರಾಹುಲ್ ಗಾಂಧಿ ಯಾತ್ರೆ ಪ್ರಸಿದ್ಧಿ ಪಡೆಯುತ್ತಿದೆ. ಲಕ್ಷಾಂತರ ಮಂದಿ ಯಾತ್ರೆಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ಇದನ್ನು ಸಹಿಸದ ಬಿಜೆಪಿ ನಾಯಕರು ಯಾತ್ರೆಗೆ ಅಡ್ಡಿಯುಂಟು ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಅರಣ್ಯ ಸಚಿವ ಈಶ್ವರ ಖಂಡ್ರೆ ಮಾತನಾಡಿ, ಸಮಾಜದ ಎಲ್ಲರಿಗೂ


ಮೈಸೂರಿನ ದಾಸಪ್ಪ ವೃತ್ತದಲ್ಲಿ ಸಚಿವ ಈಶ್ವರ್ ಖಂಡ್ರೆ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಸಮಾನತೆ, ಸೌಲಭ್ಯ, ನ್ಯಾಯ ದೊರೆತಾಗ ಮಾತ್ರ ರಾಮರಾಜ್ಯ ಸಾಧ್ಯ. ಆದರೆ, ರಾಹುಲ್ ಗಾಂಧಿ ಅವರ ನ್ಯಾಯಯಾತ್ರೆಯ ಮೇಲೆ ದಾಳಿ ನಡೆಯುತ್ತಿರುವುದು ಯಾವ ನ್ಯಾಯ? ರಾಮರಾಜ್ಯ ಆಗಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ರಾಜಕೀಯ ಸ್ವಾರ್ಥಕ್ಕಾಗಿ ಇಂದು ದೇಶವನ್ನು ಧರ್ಮ, ಜಾತಿ ಹೆಸರಲ್ಲಿ ಒಡೆಯಲಾಗುತ್ತಿದೆ. ಇದು ದೇಶದ ಸಮಗ್ರತೆ, ಸಾರ್ವಭೌಮತ್ವಕ್ಕೆ ಮಾರಕ. ರಾಹುಲ್ ಗಾಂಧಿ ನ್ಯಾಯ ಯಾತ್ರೆಯಲ್ಲಿ ಬಿಜೆಪಿಯ ಕಾರ್ಯಕರ್ತರು ದಾಳಿ ಮಾಡುತ್ತಿರುವುದು ಅಕ್ಷಮ್ಯ ಮತ್ತು ಹೇಯ ಕೃತ್ಯ. ಇದು ಪ್ರಜಾಪ್ರಭುತ್ವ ನೀತಿಗೆ ವಿರುದ್ಧವಾಗಿದೆ. ಬಿಜೆಪಿ ಬಾಯಲ್ಲಿ ಶಾಂತಿ ಮಂತ್ರ ಪಠಿಸುತ್ತದೆ, ಬಗಲಲ್ಲಿ ದೊಣ್ಣೆ ಹಿಡಿದು ಹಲ್ಲೆಗೆ ಹೋಗುತ್ತದೆ. 25 ಬಿಜೆಪಿ ಕಾರ್ಯಕರ್ತರು ಬಡಿಗೆ ಹಿಡಿದು ತಮ್ಮ ನ್ಯಾಯಯಾತ್ರೆಯ ಬಸ್ ಹಿಂದೆ ಬಂದಿದ್ದರು ಎಂದು ನಾಗಾಂವ್‌ನಲ್ಲಿ ಸ್ವತಃ ರಾಹುಲ್ ಗಾಂಧಿ ಅವರೇ ಹೇಳಿದ್ದಾರೆ. ಜತೆಗೆ ಅಸ್ಸಾಂನ ಬಿಜೆಪಿ ಸರ್ಕಾರ ನ್ಯಾಯಯಾತ್ರೆಯಲ್ಲಿ ಭಾಗಿಯಾಗದಂತೆ ಆ ರಾಜ್ಯದ ಜನತೆಗೆ ಬೆದರಿಕೆ ಹಾಕುತ್ತಿದೆ. ನಾವು ಪ್ರಜಾಪ್ರಭುತ್ವ ರಾಷ್ಟ್ರದಲ್ಲಿದ್ದೇವೋ ಅಥವಾ ಸರ್ವಾಧಿಕಾರಿ ರಾಷ್ಟ್ರದಲ್ಲಿದ್ದೇವೆಯೋ ಎಂದು ಅನುಮಾನ ಮೂಡುತ್ತಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಶಾಸಕರಾದ ಕೆ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ನಗರಾಧ್ಯಕ್ಷ ಆರ್.ಮೂರ್ತಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಎಂಸಿಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಮಾಜಿ ಉಪಮೇಯರ್ ಪುಷ್ಪವಲ್ಲಿ, ಶಾಂತಕುಮಾರಿ, ತಾ.ಪಂ. ಮಾಜಿ ಅಧ್ಯಕ್ಷೆ ಮಂಜುಳಾ ಮಂಜುನಾಥ್, ಮಾಧ್ಯಮ ವಕ್ತಾರ ಮಹೇಶ್, ಕಾಂಗ್ರೆಸ್ ಸದಸ್ಯ ಪಿ.ರಾಜು, ಮುಖಂಡರಾದ ಡಾ.ಸುಶ್ರುತ್ ಗೌಡ, ಈಶ್ವರ್ ಚಕ್ಕಡಿ, ನಾಗೇಶ್, ಶ್ರೀನಾಥ್‌ಬಾಬು, ಡೈರಿ ವೆಂಕಟೇಶ್, ಜೆ.ಜೆ.ಆನಂದ್, ನಾಗೇಶ್, ಎಂ.ಕೆ.ಅಶೋಕ, ಹೇಮಂತ್, ಮೇರಿ, ಇಂದಿರಾ, ರಾಣಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಒಂದನೇ ಪುಟದಿಂದ

ಕರ್ಪೂರಿ ಠಾಕೂರ್‌ಗೆ 'ಭಾರತ ರತ್ನ'

ಸಂಸದರಾಗಿದ್ದಾರೆ. ಮುಖ್ಯಮಂತ್ರಿಯಾಗಿ, ಠಾಕೂರ್ ಅಮು ಮುಂಗೇರಿ ಲಾಲ್ ಆಯೋಗದ ವರದಿಯನ್ನು ಜಾರಿಗೆ ತರಲು ನಿರ್ಧರಿಸಿದರು. ಅದು ಹಿಂದುಳಿದ ಜಾತಿಗಳಿಗೆ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿಯನ್ನು ಸ್ಥಾಪಿಸಲು ಶಿಫಾರಸು ಮಾಡಿತು.

ಹಿಂದುಳಿದವರ ಪರ ಧ್ವನಿ: ಕರ್ಪೂರಿ ಠಾಕೂರ್, ಸಾಮಾಜಿಕ ನ್ಯಾಯಕ್ಕೆ ಸಮಾನಾರ್ಥಕವಾದ ಹೆಸರು. ಉತ್ತರ ಭಾರತದಲ್ಲಿ ಹಿಂದುಳಿದ ವರ್ಗಗಳ ಪರವಾಗಿ ದನಿಯೆತ್ತಿದ ಠಾಕೂರ್, ಬಿಹಾರದ ರಾಜಕೀಯದಲ್ಲಿ ಪ್ರಭಾವಿ ವ್ಯಕ್ತಿಯಾಗಿ ಉಳಿದಿದ್ದಾರೆ. ಇವರು ನಾಯ್(ಸವಿತಾ ಸಮಾಜ) ಸಮುದಾಯದ ಗೋಕುಲ್ ಠಾಕೂರ್ ಮತ್ತು ರಾಮ್ದುಲಾರಿ ದೇವಿ ದಂಪತಿ ಪುತ್ರ. ಕರ್ಪೂರಿ ಠಾಕೂರ್ ಅವರಿಂದಾಗಿ ಈಗ ಕರ್ಪೂರಿ ಗ್ರಾಮ ಎಂದು ಕರೆಯಲ್ಪಡುವ ಪಿತೌಂಜಿಯಾ ಗ್ರಾಮ ಅವರನ್ನು ಬಿಹಾರದ ಮುಖ್ಯಮಂತ್ರಿ ಹುದ್ದೆಗೆ ಕರೆದೊಯ್ದಿದ್ದು ರೋಚಕ.

1970ರ ದಶಕದಲ್ಲಿ ಬಿಹಾರದ ಮುಖ್ಯಮಂತ್ರಿಯಾಗಿ ಅವರ ಅಧಿಕಾರಾವಧಿಯು ವಿಶೇಷವಾಗಿ ಸಮಾಜದ ವಂಚಿತ ವರ್ಗಗಳಿಗೆ ನಾಂದಿ ಹಾಡಿತು. ಹೃದಯವಂತ ಸಮಾಜವಾದಿ ಠಾಕೂರ್ ಅವರು ತಮ್ಮ ವಿದ್ಯಾರ್ಥಿ ದಿನಗಳಲ್ಲಿ ರಾಷ್ಟ್ರೀಯವಾದಿ ವಿಚಾರಗಳಿಂದ ಆಳವಾಗಿ ಪ್ರಭಾವಿತರಾಗಿದ್ದರು. ನಂತರ ಅಖಿಲ ಭಾರತ ವಿದ್ಯಾರ್ಥಿಗಳ ಒಕ್ಕೂಟವನ್ನು ಸೇರಿದರು. ಅವರ ರಾಜಕೀಯ ಸಿದ್ಧಾಂತವು 'ಲೋಹಿಯಾ' ಚಿಂತನೆಯ ಶಾಲೆಯಿಂದ ಮತ್ತಷ್ಟು ರೂಪುಗೊಂಡಿತು, ಇದು ಕೆಳಜಾತಿಗಳ ಸಬಲೀಕರಣಕ್ಕೆ ಒತ್ತು ನೀಡಿತು. ಸರ್ಕಾರಿ ಸೇವೆಗಳಲ್ಲಿ ಹಿಂದುಳಿದ ವರ್ಗಗಳಿಗೆ ಸಮಾನ ಪ್ರಾತಿನಿಧ್ಯವನ್ನು ಖಾತ್ರಿಪಡಿಸುವ ಗುರಿಯನ್ನು ಹೊಂದಿದ್ದ ಮೀಸಲಾತಿಗಾಗಿ 'ಕರ್ಪೂರಿ ಠಾಕೂರ್ ಫಾರ್ಮುಲಾ'ವನ್ನು ಪರಿಚಯಿಸಿದ್ದು ಠಾಕೂರ್ ಅವರ ಅತ್ಯಂತ ಮಹತ್ವದ ಕೊಡುಗೆಗಳಲ್ಲಿ ಒಂದಾಗಿದೆ. ನವೆಂಬರ್ 1978ರಲ್ಲಿ ಅವರು ಬಿಹಾರದಲ್ಲಿ ಹಿಂದುಳಿದ ವರ್ಗಗಳಿಗೆ ಶೇ.26 ಮೀಸಲಾತಿಯನ್ನು ಜಾರಿಗೆ ತಂದರು. ಇದು 1990ರ ದಶಕದಲ್ಲಿ ಮಂಡಲ್ ಆಯೋಗದ ಶಿಫಾರಸುಗಳಿಗೆ ವೇದಿಕೆಯನ್ನು ಸಿದ್ಧಪಡಿಸಿತು. ಈ ನೀತಿಯು ಹಿಂದುಳಿದ ವರ್ಗಗಳಿಗೆ ಅಧಿಕಾರ ನೀಡುವುದಲ್ಲದೆ, ಹಿಂದಿ ಹೃದಯ ಭೂಮಿಯಲ್ಲಿ ರಾಜಕೀಯದ ಮುಖವನ್ನು ಬದಲಿಸಿದ ಪ್ರಾದೇಶಿಕ ಪಕ್ಷಗಳ ಉದಯಕ್ಕೂ ಕಾರಣವಾಯಿತು.

ಶಿಕ್ಷಣ ಮಂತ್ರಿಯಾಗಿ ಠಾಕೂರ್ ಅವರು ಮೆಟ್ರಿಕ್ಯುಲೇಷನ್ ಹಂತದಲ್ಲಿ ಇಂಗ್ಲಿಷ್ ಅನ್ನು ಕಡ್ಡಾಯ ವಿಷಯವಾಗಿ ರದ್ದುಗೊಳಿಸಿದರು. ಇದು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅನೇಕ ವಿದ್ಯಾರ್ಥಿಗಳಿಗೆ ತಡೆಗೋಡೆ ಎಂದು ಗುರುತಿಸಿದರು. ಅವರು ಹಲವಾರು ಶಾಲೆಗಳು ಮತ್ತು ಕಾಲೇಜುಗಳನ್ನು ಸ್ಥಾಪಿಸಿದರು, ವಿಶೇಷವಾಗಿ ಹಿಂದುಳಿದ ಪ್ರದೇಶಗಳಲ್ಲಿ ಮತ್ತು 8ನೇ ತರಗತಿಯವರೆಗಿನ ಶಿಕ್ಷಣವನ್ನು ಉಚಿತವಾಗಿ ಕಲ್ಪಿಸಿದರು. ಇದೆಲ್ಲದರ ಮೂಲಕ ಡ್ರಾಪ್‌ಔಟ್ ದರವನ್ನು ಗಣನೀಯವಾಗಿ ಕಡಿಮೆ ಮಾಡಿದರು.

ಠಾಕೂರ್ ಅವರ ಪರಂಪರೆಯು ಶೈಕ್ಷಣಿಕ ಸುಧಾರಣೆಗಳನ್ನು ಮೀರಿ ವಿಸ್ತರಿಸಿದೆ. ಅವರು ಪ್ರಮುಖ ಭೂ ಸುಧಾರಣೆಗಳನ್ನು ಪ್ರಾರಂಭಿಸಿದರು. ಜಮೀನ್ದಾರರಿಂದ ಭೂರಹಿತ ದಲಿತರಿಗೆ ಭೂಮಿಯನ್ನು ಮರುಹಂಚಿಕೆ ಮಾಡಲು ಕಾರಣವಾಯಿತು. ಅವರಿಗೆ 'ಜನನಾಯಕ್' ಅಥವಾ 'ಪೀಪಲ್ಸ್ ಹೀರೋ' ಎಂದು ಗುರುತಿಸಿಕೊಂಡರು. ಸವಲತ್ತು ಪಡೆದ ವರ್ಗದಿಂದ ಗಮನಾರ್ಹ ಪ್ರತಿರೋಧ ಮತ್ತು ನಿಂದನೆಯನ್ನು ಎದುರಿಸುತ್ತಿದ್ದರೂ ಠಾಕೂರ್ ಅವರ ನೀತಿಗಳು ಭವಿಷ್ಯದ ನಾಯಕರಿಗೆ ಸಾಮಾಜಿಕ ನ್ಯಾಯಕ್ಕಾಗಿ ಪ್ರತಿಪಾದನೆ ಮುಂದುವರೆಸಲು ಅಡಿಪಾಯ ಹಾಕಿದವು.

ಬಾಲರಾಮನ ದರ್ಶನ

ಎಂದು ಚಂಡೀಗಢದ ಭಕ್ತ ತೇಜೇಂದರ್ ಸಿಂಗ್ ಹೇಳಿದ್ದಾರೆ. ದೇಗುಲದ ದ್ವಾರದಲ್ಲಿ ನೆರೆದಿದ್ದ ಅಪಾರ ಜನಸ್ತೋಮವನ್ನು ಕುರಿತು ಮಾತನಾಡಿದ ಅವರು, ಲಕ್ಷಗಟ್ಟಲೆ ಜನರು ಶ್ರೀರಾಮನ ದರ್ಶನ ಪಡೆಯುತ್ತಾರೆ. ಹೀಗಾಗಿ ಜನಜಂಗುಳಿ ಹೆಚ್ಚಲಿದೆ ಎಂದರು.

ಭಾರೀ ನೂಕುನುಗ್ಗಲು; ಯೋಗಿ ವೈಮಾನಿಕ ಸಮೀಕ್ಷೆ: ರಾಮಲಲ್ಲಾನ ದರ್ಶನ ಪಡೆಯಲು ಭಾರೀ ಸಂಖ್ಯೆಯಲ್ಲಿ ಭಕ್ತರು ಇಂದು ಆಗಮಿಸಿದ್ದರು. ಈ ವೇಳೆ ನೂಕುನುಗ್ಗಲು ಉಂಟಾಗಿ ಭಕ್ತರೊಬ್ಬರು ಗಾಯಗೊಂಡಿದ್ದಾರೆ. ಈ ವಿಚಾರಕ್ಕೆ ಸಿಎಂ ಯೋಗಿ ಆದಿತ್ಯನಾಥ್ ಕೂಡ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಸ್ವತಃ ಸಿಎಂ ಯೋಗಿ ಅಯೋಧ್ಯೆ ತಲುಪಿ ಶ್ರೀರಾಮ ಜನ್ಮಭೂಮಿ ಮಂದಿರ ಸಂಕೀರ್ಣದ ವೈಮಾನಿಕ ಸಮೀಕ್ಷೆ ನಡೆಸಿದರು. ಪ್ರಾಣ ಪ್ರತಿಷ್ಠೆಯ ಮರುದಿನ, ಅಯೋಧ್ಯೆಯಲ್ಲಿ ಹೊಸದಾಗಿ ನಿರ್ಮಿಸಲಾದ ರಾಮಮಂದಿರದಲ್ಲಿ ರಾಮಲಲ್ಲಾನ ದರ್ಶನಕ್ಕಾಗಿ ಅಪಾರ ಸಂಖ್ಯೆಯ ಭಕ್ತರು ಆಗಮಿಸಿದ್ದಾರೆ. ರಾಮಲಲ್ಲಾನ ದರ್ಶನ ಪಡೆಯಲು ಬೆಳಗಿನ ಜಾವ 3 ಗಂಟೆಯಿಂದಲೇ ಭಕ್ತರು ದೇವಸ್ಥಾನದಲ್ಲಿ ಸಾಲುಗಟ್ಟಿ ನಿಂತಿದ್ದರು. ನೂಕುನುಗ್ಗಲು ಕಂಡ ದೇವಸ್ಥಾನದ ಟ್ರಸ್ಟ್ ಸದಸ್ಯರು ಅಭೂತಪೂರ್ವ ಜನಸಂದಣಿಯನ್ನು ನಿಯಂತ್ರಿಸಲು ಸೂಕ್ತ ಭದ್ರತೆ ಒದಗಿಸಿ ವ್ಯವಸ್ಥೆ ಮುಂದುವರಿಸುವಂತೆ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದರು.

ಇನ್ನು ಭಾರಿ ದಂಡದ ಬರೆ

ವಸೂಲಿ ಪ್ರಕ್ರಿಯೆ ಆರಂಭವಾದ ನಂತರ ಎಕ್ಸ್‌ಪ್ರೆಸ್‌ವೇಯಲ್ಲಿ ವಿರುದ್ಧ ದಿಕ್ಕಿನಲ್ಲಿ ಸಂಚರಿಸುವ ಚಾಳಿ ಕಂಡುಬಂದಿದ್ದು, ಅದರಿಂದ ಅಪಘಾತಗಳು ಸಂಭವಿಸುತ್ತಿವೆ. ಅದನ್ನು ತಪ್ಪಿಸಲು ಶ್ರೀರಂಗಪಟ್ಟಣ, ಮಂಡ್ಯ, ಮದ್ದೂರು, ಚನ್ನಪಟ್ಟಣ, ರಾಮನಗರ ಠಾಣಾ ಪೊಲೀಸರು ತಮ್ಮ ವ್ಯಾಪ್ತಿಯಲ್ಲಿ ಬರುವ ಪ್ರವೇಶ–ನಿರ್ಗಮನ ಸ್ಥಳಗಳಲ್ಲಿ ಸಿಬ್ಬಂದಿಗಳನ್ನು ನಿಯೋಜಿಸಿದ್ದರು. ಆದರೂ ಅವರ ಕಣ್ತಪ್ಪಿಸಿ ಸಂಚಾರ ನಿಯಮ ಉಲ್ಲಂಘಿಸುತ್ತಿದ್ದಾರೆ. ಕೆಲವು ವಾಹನ ಚಾಲಕರಂತೂ ಪೊಲೀಸ್ ಸಿಬ್ಬಂದಿಯನ್ನೂ ಲೆಕ್ಕಿಸದೇ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿದ್ದು, ಮುಖ್ಯ ಪಥಗಳಲ್ಲಿಯೇ ವಿರುದ್ಧ ದಿಕ್ಕಿನಲ್ಲಿ ಚಾಲನೆ ಮಾಡುತ್ತಿರುವುದು ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಆ ಮಾರ್ಗ ಸಂಚರಿಸುವ ವಾಹನ ಸವಾರರೂ ಫೋಟೋ, ವಿಡಿಯೋ ತೆಗೆದು ಹೈವೇ ಅಥಾರಿಟಿ ಆಫ್ ಇಂಡಿಯಾ, ಗೃಹ ಇಲಾಖೆ ಅಧಿಕಾರಿಗಳಿಗೆ ರವಾನಿಸುತ್ತಿದ್ದಾರೆ.

ದಿನದಿಂದ ದಿನಕ್ಕೆ ಈ ಹಾವಳಿ ಹೆಚ್ಚಾಗುತ್ತಿದ್ದು, ಅಪಘಾತಗಳಿಗೆ ಕಾರಣವಾಗುತ್ತಿರುವುದರಿಂದ ಎಕ್ಸ್‌ಪ್ರೆಸ್‌ವೇಯಲ್ಲಿ ಆಯಾ ಠಾಣಾ ಪೊಲೀಸರು ಕಾರ್ಯಾಚರಣೆ ಆರಂಭಿಸಿದ್ದು, ನಿಯಮ ಉಲ್ಲಂಘಿಸುವವರ ವಿರುದ್ಧ ಎಫ್‌ಐಆರ್ ದಾಖಲಿಸುತ್ತಿದ್ದಾರೆ.

ಏಕಮುಖ ಸಂಚಾರದ ವಿರುದ್ಧ ಚಾಲನೆ ಮಾಡಿದರೆ ಐಪಿಸಿ ಸೆಕ್ಷನ್ 279 ರೀತ್ಯಾ ಅಪಾಯಕಾರಿ ಚಾಲನೆ, ವ್ಯತಿರಿಕ್ತ ಚಾಲನೆ, ಪಥ ಶಿಸ್ತು ಪಾಲನೆ ಮಾಡದಿರುವುದು, ಅಜಾಗರೂಕ ಚಾಲನೆ, ಸೀಟ್ ಬೆಲ್ಟ್ ಅಳವಡಿಸದೇ ಇರುವುದು. ಹೀಗೆ ಹಲವು ಕಲಂಗಳಡಿ ಎಫ್‌ಐಆರ್ ದಾಖಲಿಸಿ ಭಾರೀ ದಂಡದ ಬಿಸಿ ಮುಟ್ಟಿಸುತ್ತಿರುವ ಪೊಲೀಸರು, ಎಕ್ಸ್‌ಪ್ರೆಸ್‌ವೇಯಲ್ಲಿ ಅಪಘಾತಗಳಿಗೆ ಕಡಿವಾಣ ಹಾಕಲು ಮುಂದಾಗಿದ್ದಾರೆ. ಎಡಿಜಿಪಿ (ಸಂಚಾರ)ಯವರ ನಿರ್ದೇಶನದಂತೆ ಮಂಡ್ಯ, ರಾಮನಗರ ಎಸ್ಪಿರವರ ಮಾರ್ಗದರ್ಶನದಂತೆ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ಇದೀಗ ಕಾರ್ಯಾಚರಣೆ ಆರಂಭಿಸಿರುವ ಆಯಾಯ ಜಿಲ್ಲಾ ವ್ಯಾಪ್ತಿಯ ಪೊಲೀಸರು, ಎಫ್‌ಐಆರ್ ದಾಖಲಿಸುತ್ತಿದ್ದಾರೆ. ಟೋಲ್ ಶುಲ್ಕ ಉಳಿಸುವ ಸಲುವಾಗಿ ಸರ್ವಿಸ್ ರಸ್ತೆ ಮುಖ್ಯ ಪಥದಲ್ಲಿ ಜಿಗ್‌ಜಾಗ್ ಮಾಡಲು ಹೋಗಿ ನೀವೂ ಪ್ರಾಣ ಕಳೆದುಕೊಳ್ಳಬೇಡಿ, ಹಾಗೂ ಅಪಘಾತಕ್ಕೆ ಕಾರಣರಾಗಿ ಅಮಾಯಕರ ಪ್ರಾಣವನ್ನು ತೆಗೆಯಬೇಡಿ ಎಂದು ಎಚ್ಚರಿಸಿರುವ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್, ಒಂದು ವೇಳೆ ಟೋಲ್ ಫೀ ಕಟ್ಟಲು ಇಷ್ಟವಿಲ್ಲದಿದ್ದರೆ ನಿಮಗಾಗಿಯೇ ಇರುವ ಸರ್ವಿಸ್ ರಸ್ತೆಯಲ್ಲೇ ಸಂಚರಿಸಿ ಎಂದು ವಾಹನ ಚಾಲಕರಲ್ಲಿ ಮನವಿ ಮಾಡಿದ್ದಾರೆ.

ನಮ್ಮ ಅಭಿಪ್ರಾಯ ಯಾರೂ ಕೇಳಿಲ್ಲ!

ಮಾಡಿದವರಿಗೆ ನೋವು, ಅಸಮಾಧಾನ ಆಗುವುದು ಸಹಜ ಎಂದರು.

ಪಿಎಸ್‌ಐ ಪರೀಕ್ಷೆಗೆ ಮುನ್ನೆಚ್ಚರಿಕೆ: ಹೈಕೋರ್ಟ್ ಆದೇಶದ ಪ್ರಕಾರ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪಿಎಸ್‌ಐ ಮರುಪರೀಕ್ಷೆಯನ್ನು ಎಲ್ಲ ಮುನ್ನೆಚ್ಚರಿಕೆ ಕ್ರಮಗಳೊಂದಿಗೆ ನಡೆಸಲಾಗುತ್ತಿದ್ದು, ಅಭ್ಯರ್ಥಿಗಳು ಆತಂಕ ಪಡುವ ಅಗತ್ಯವಿಲ್ಲ. ಬಹಳ ದಿನದಿಂದ ನನೆಗುದಿಗೆ ಬಿದ್ದಿದ್ದ ಪಿಎಸ್‌ಐ ಪರೀಕ್ಷೆಯನ್ನು ಈ ಬಾರಿ ಎಚ್ಚರಿಕೆಯಿಂದ ನಡೆಸುತ್ತಿದ್ದೇವೆ, ಯಾವುದೇ ಸಮಸ್ಯೆ ಆಗುವುದಿಲ್ಲವೆಂಬ ವಿಶ್ವಾಸವಿದೆ.

ಕಳೆದ ಬಾರಿ ಅಕ್ರಮದ ಕುರಿತು ನ್ಯಾಯಮೂರ್ತಿ ವೀರಪ್ಪ ಆಯೋಗ ಮುಖ್ಯಮಂತ್ರಿ ಅವರಿಗೆ ನೀಡಿದೆ, ವರದಿಯಲ್ಲಿನ ಶಿಫಾರಸು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಮುಖ್ಯಮಂತ್ರಿ ಜೊತೆ ಕುಳಿತು ವರದಿ ವಿಶ್ಲೇಷಣೆ ಮಾಡಲಾಗುವುದು, ಪರೀಕ್ಷೆ ಅಕ್ರಮ ಕುರಿತು ಬಹಿರಂಗ ಆರೋಪ ಮಾಡಿದವರು ಆಯೋಗದ ಮುಂದೆ ಹಾಜರಾಗಲಿಲ್ಲ. ಆಡಿಯೋ ವೈರಲ್ ಪ್ರಕರಣಕ್ಕೂ ಪಿಎಸ್‌ಐ ಮರುಪರೀಕ್ಷೆಗೂ ಯಾವುದೇ ಸಂಬಂಧವಿಲ್ಲ, ಈಗಾಗಲೇ ಎಸ್‌ಐ ಲಿಂಗಯ್ಯ ಎಂಬುವರನ್ನು ಸಿಸಿಬಿ ಪೊಲೀಸರು ವಿಚಾರಣೆ ಮಾಡುತ್ತಿದ್ದಾರೆ. ಆರೋಪಿತ ಎಸ್‌ಐ ಇಂಟೆಲಿಜೆನ್ಸ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಈ ಪರೀಕ್ಷೆಯಲ್ಲಿಯೂ ಅಕ್ರಮ ನಡೆಯುತ್ತಿರಬಹುದು ಎಂಬ ಸಂಶಯದಿಂದ ನಕಲಿ ಕರೆ ಮಾಡಿದ್ದಾಗಿ ಹೇಳಿಕೆ ನೀಡಿದ್ದು, ಸಿಸಿಬಿ ತನಿಖೆ ಮುಂದುವರಿಸಿದೆ ಎಂದರು. ರಾಹುಲ್ ಗಾಂಧಿ ಅವರು ಹಿಂದೆ ಭಾರತ್ ಜೋಡೋ ಪಾದಯಾತ್ರೆಗೆ ಅಸ್ಸಾಂ ಮುಖ್ಯಮಂತ್ರಿ ಉದ್ದೇಶಪೂರ್ವಕವಾಗಿ ಅಡ್ಡಿಪಡಿಸುತ್ತಿದ್ದಾರೆ, ಬಿಜೆಪಿಯವರು ಪಾದಯಾತ್ರೆ ತಡೆಯುವ ಹಾಗೂ ಯಾತ್ರಿಗಳ ಮೇಲೆ ಗಲಾಟೆ ನಡೆಸುವ ಕೆಲಸ ಮಾಡುತ್ತಿದ್ದಾರೆ. ರಾಹುಲ್ ಗಾಂಧಿ ಅವರಿಗೇ ಈ ರೀತಿ ಆದರೆ, ಜನಸಾಮಾನ್ಯರ ಗತಿ ಏನು ಎಂದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಜೈ ಶ್ರೀರಾಮ್ ಅಂದರೆ ತಪ್ಪೇನು, ನಾವೆಲ್ಲರೂ ಜೈ ಶ್ರೀರಾಮ್ ಅಂತ ಹೇಳಿದ್ದೇವೆ, ನಾವೆಲ್ಲ ಶ್ರೀರಾಮನ ಭಕ್ತರೇ. ಶ್ರೀರಾಮ ನಾಲ್ಕು ಜನಕ್ಕೆ ಸೀಮಿತವಲ್ಲ, ನಮಗೆ ದಶರಥ ರಾಮ ಬೇಕು, ಮೋದಿಯ ರಾಮ ಬೇಕಾಗಿಲ್ಲ. ಈ ದೇಶವನ್ನು ರಾಮರಾಜ್ಯ ಮಾಡಿದ ದಶರಥ ರಾಮ ಬೇಕೇ ಹೊರತು, ರಾಮನ ಹೆಸರು ಹೇಳಿಕೊಂಡು ಒಡೆದಾಳುವ ನೀತಿ ಆಚರಣೆ ಮಾಡುವವರು ಬೇಕಿಲ್ಲ ಎಂದರು.

ಅನುದಾನ ಹೆಚ್ಚಳ, ಕನಿಷ್ಠ ವೇತನಕ್ಕೆ ಆಗ್ರಹಿಸಿ

ಸಿಐಟಿಯು, ಅಂಗನವಾಡಿ ಕಾರ್ಯಕರ್ತರ ಪ್ರತಿಭಟನೆ



ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಜಿಲ್ಲಾ ಸಂಘ ಹಾಗೂ ಸಿಐಟಿಯು ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜ.23(ಜಿಎ)–2024–25ನೇ ಸಾಲಿನ ಆರ್ಥಿಕ ಆಯವ್ಯಯದಲ್ಲಿ ಐಸಿಡಿಎಸ್(ಇಂಟರ್‌ಗ್ರೇಟಡ್ ಚೈಲ್ಡ್ ಡೆವಲಪ್‌ಮೆಂಟ್ ಸರ್ವಿಸ್)ಗೆ ಅನುದಾನ ಹೆಚ್ಚಳ ಮತ್ತು ಕನಿಷ್ಠ ವೇತನ ಘೋಷಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರು ಜಿಲ್ಲಾ ಸಂಘ ಹಾಗೂ ಸಿಐಟಿಯು ವತಿಯಿಂದ ಹಳೆ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ದೇಶದ ಅಭಿವೃದ್ಧಿಯ ಸಂಕೇತಗಳಾದ ಮಹಿಳೆಯರು ಮತ್ತು ಮಕ್ಕಳಿಗೆ ಕೊಡುವ ಸವಲತ್ತುಗಳಿಗೆ ಶೇ.90ರಿಂದ 60 ಪಾಲನ್ನು ಕಡಿಮೆ ಮಾಡಿದ್ದು, 2021ರ ಬಜೆಟ್‌ನಲ್ಲಿ 8542 ಕೋಟಿ ರೂ.ಕಡಿತ ಮಾಡಲಾಗಿದೆ. ಇದರಿಂದ ದೇಶದ 11–12 ಕೋಟಿ ಫಲಾನುಭವಿಗಳು ವಂಚಿತರಾಗುತ್ತಿದ್ದಾರೆ. ಮಹಿಳೆಯರ ಬಗ್ಗೆ ಮಾತನಾಡುವ ಕೇಂದ್ರ ಸರ್ಕಾರ ಅಂಗನವಾಡಿ ನೌಕರರನ್ನು 4500 ರೂ., ಸಹಾಯಕಿಯರಿಗೆ 2250 ರೂ., ಬಿಸಿಯೂಟದವರಿಗೆ 600 ರೂ. ಆಶಾ ಕಾರ್ಯಕರ್ತೆಯರಿಗೆ 2 ಸಾವಿರ ರೂಗೆ ದುಡಿಸುವುದು ಸಾಮಾಜಿಕ ನ್ಯಾಯವೇ ಎಂದು ಪ್ರತಿಭಟನಾಕಾರರು ಪ್ರಶ್ನಿಸಿದರು.

ಆಹಾರ, ಆರೋಗ್ಯ, ಶಿಕ್ಷಣದ ಯೋಜನೆಗಳಾದ ಐಸಿಡಿಎಸ್, ಎಂಡಿಎಂ, ಎನ್‌ಎಚ್‌ಎಂ, ಐಸಿಪಿಎಸ್, ಎಸ್‌ಎಸ್‌ಎ, ನರೇಗಾ ಯೋಜನೆಗಳಿಗೆ ನೌಕರರನ್ನು ಕಾಯಂ ಮಾಡಬೇಕು. ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನಂತೆ ದುಡಿಯುತ್ತಿರುವ ಸಿಬ್ಬಂದಿ ಸೇರಿ 1 ಕೋಟಿ ನೌಕರರಿಗೆ ಕನಿಷ್ಠ ವೇತನ, ನಿವೃತ್ತಿ ಸೌಲಭ್ಯ ನೀಡಬೇಕು. 3ರಿಂದ 6 ವರ್ಷದೊಳಗಿನ ಮಕ್ಕಳಿಗೆ ಉಚಿತ, ಕಡ್ಡಾಯ ಮತ್ತು ಸಾರ್ವತ್ರಿಕವಾಗಿ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಅಂಗನವಾಡಿ ಕೇಂದ್ರಗಳಲ್ಲಿಯೇ ನೀಡಲು ಕಾನೂನು ರೂಪಿಸಬೇಕು. ಅಂಗನವಾಡಿ, ಬಿಸಿಯೂಟ ನೌಕರರು, ಆಶಾ ಕಾರ್ಯಕರ್ತೆಯರಿಗೆ 31 ಸಾವಿರ ಕನಿಷ್ಠ ವೇತನ, 10 ಸಾವಿರ ಪಿಂಚಣಿ ನೀಡಬೇಕು ಎಂದು ಆಗ್ರಹಿಸಿದರು.

2022ರ ಏಪ್ರಿಲ್ ಸುಪ್ರೀಂ ಕೋರ್ಟ್ ತೀರ್ಪಿನಂತೆ ಎಲ್ಲಾ ಅಂಗನವಾಡಿ ನೌಕರರನ್ನು ಉದ್ಯೋಗಸ್ಥರೆಂದು ಪರಿಗಣಿಸಿ ಗ್ರಾಚ್ಯುಟಿ ಕಾಯಿದೆ ಜಾರಿ ಮಾಡಬೇಕು. ವಿದ್ಯುತ್, ರೈಲ್ವೆ ಸೇರಿದಂತೆ ಯಾವುದೇ ಸಾರ್ವಜನಿಕ ವಲಯಗಳ ಖಾಸಗೀಕರಣ ನಿಲ್ಲಬೇಕು. ಕಾರ್ಮಿಕ ಪರವಾದ ನೀತಿಗಳನ್ನು ಜಾರಿಗೊಳಿಸಬೇಕು. ಅಂಗನವಾಡಿ ಕೇಂದ್ರಗಳಿಗೆ ಮೂಲಸೌಕರ್ಯ ಕಲ್ಪಿಸಬೇಕು. ಖಾಲಿ ಹುದ್ದೆಗಳನ್ನು 3 ತಿಂಗಳ ಒಳಗಡೆ ಭರ್ತಿ ಮಾಡದಿದ್ದರೆ ಹೆಚ್ಚುವರಿ ವೇತನ ಕೊಡಬೇಕು. ತಾತ್ಕಾಲಿಕ ಸಹಾಯಕಿ ನೇಮಕಕ್ಕೆ ಅನುಮತಿ ಕೊಡಬೇಕು. ಮುಂಗಡವಾಗಿ ಕರೆನ್ಸಿ ಹಣ, ಕೋಳಿಮೊಟ್ಟೆ, ಬಾಡಿಗೆ, ಗ್ಯಾಸ್, ತರಕಾರಿ ಬಿಲ್‌ಗಳನ್ನು ಹಾಕದೇ ಫಲಿತಾಂಶ ಕೇಳಬಾರದು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷೆ ಸುನಂದಾ.ಎಚ್.ಎಸ್, ಪ್ರಧಾನ ಕಾರ್ಯದರ್ಶಿ ಪುಷ್ಪಲತಾ, ಖಜಾಂಚಿ ಕಾರ್ಯದರ್ಶಿ, ಕಾವೇರಮ್ಮ ಲೀಲಾವತಿ ಸೇರಿದಂತೆ ನೂರಾರು ಅಂಗನವಾಡಿ ಕಾರ್ಯಕರ್ತರು, ಸಿಐಟಿಯು ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಎಐಸಿಸಿ ಅಧ್ಯಕ್ಷ ಖರ್ಗೆ ವಿರುದ್ಧ ಅವಹೇಳನಕಾರಿ ಹೇಳಿಕೆ

ಚಕ್ರವರ್ತಿ ಸೂಲಿಬೆಲೆ ವಿರುದ್ಧ ಖರ್ಗೆ ಅಭಿಮಾನಿಗಳಿಂದ ಪೊಲೀಸರಿಗೆ ದೂರು


ಚಕ್ರವರ್ತಿ ಸೂಲಿಬೆಲೆ ವಿರುದ್ಧ ಕರ್ನಾಟಕ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದಿಂದ ಮೈಸೂರಿನ ದೇವರಾಜ ಪೊಲೀಸ್ ಠಾಣೆಯಲ್ಲಿ ಮಂಗಳವಾರ ದೂರು ಸಲ್ಲಿಸಲಾಯಿತು.

ಮೈಸೂರು,ಜ.23(ಜಿಎ)– ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಚಕ್ರವರ್ತಿ ಸೂಲಿಬೆಲೆ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಆಪಾದಿಸಿ ಅಖಿಲ ಕರ್ನಾಟಕ ಮಲ್ಲಿಕಾರ್ಜುನ ಖರ್ಗೆ ಅಭಿಮಾನಿಗಳ ಸಂಘದಿಂದ ಚಕ್ರವರ್ತಿ ಸೂಲಿಬೆಲೆ ವಿರುದ್ಧ ಮೈಸೂರಿನ ದೇವರಾಜ ಪೊಲೀಸ್ ಠಾಣೆಗೆ ಮಂಗಳವಾರ ದೂರು ಸಲ್ಲಿಸಲಾಗಿದೆ.

ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಸಿ.ನರೇಂದ್ರ ಮಾತನಾಡಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಬಗ್ಗೆ ಚಕ್ರವರ್ತಿ ಸೂಲಿಬೆಲೆ ಲಘುವಾಗಿ ಟೀಕಿಸಿದ್ದಾರೆ. ಮಲ್ಲಿಕಾರ್ಜುನ ಖರ್ಗೆಯವರ ರಾಜಕೀಯ ಅನುಭವ, ಹಿರಿತನಕ್ಕೆ ಬೆಲೆ ಕೊಡಬೇಕು. ಒಬ್ಬ ಕಾರ್ಮಿಕನಾಗಿ ಇಂದು ರಾಜಕೀಯದಲ್ಲಿ ಎತ್ತರಕ್ಕೆ ಬೆಳೆದಿದ್ದು, ತಾವು ಸಚಿವರಾಗಿದ್ದ ವೇಳೆ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ. ಇಂತಹ ವ್ಯಕ್ತಿಯ ಬಗ್ಗೆ ಲಘುವಾಗಿ ಟೀಕಿಸಿದರೆ ಅದನ್ನ ಖರ್ಗೆ ಅಭಿಮಾನಿಗಳು ಸಹಿಸಲ್ಲ. ಈ ಹಿನ್ನೆಲೆಯಲ್ಲಿ ಚಕ್ರವರ್ತಿ ಸೂಲಿಬೆಲೆ ವಿರುದ್ಧ ಪೊಲೀಸ್ ಠಾಣೆಗೆ ದೂರು ನೀಡಿದ್ದೇವೆ. ಆತನ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಮತ್ತೊಂದೆಡೆ ಛಲವಾದಿ ನಾರಾಯಣ ಸ್ವಾಮಿಯವರು ಪ್ರಿಯಾಂಕ ಖರ್ಗೆ ಅವರ ಬಗ್ಗೆ ಲಘುವಾಗಿ ನಿಂದಿಸಿದ್ದಾರೆ. ಬಿಜೆಪಿಯನ್ನು ಓಲೈಸುವ ಉದ್ದೇಶದಿಂದ ಈ ರೀತಿ ಹೇಳಿಕೆಗಳನ್ನು ನೀಡುವುದು ಸರಿಯಲ್ಲ. ಕೂಡಲೇ ಕ್ಷಮೆಯಾಚಿಸಬೇಕು. ಇಲ್ಲವಾದರೆ, ರಾಜ್ಯದಾದ್ಯಂತ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಈ ವೇಳೆ ಕೆಪಿಸಿಸಿ ಸಂಯೋಜಕ ಬಂಡಿಪಾಳ್ಯ ವಿಜಯ್‌ಕುಮಾರ್, ನಾಗರಾಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಶಿಷ್ಯ ವೇತನಕ್ಕೆ ಆಗ್ರಹಿಸಿ ಸಂಶೋಧನಾ ವಿದ್ಯಾರ್ಥಿಗಳ ಪ್ರತಿಭಟನೆ


ಕರ್ನಾಟಕ ರಾಜ್ಯ ಸಂಶೋಧಕರ ವೇದಿಕೆಯಿಂದ ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯಸೌಧದ ಮುಂಭಾಗ ಮಂಗಳವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಜ.23(ಜಿಎ)–ಶಿಷ್ಯ ವೇತನ ನೀಡುವಂತೆ ಒತ್ತಾಯಿಸಿ ಸಂಶೋಧನಾ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ಸಂಶೋಧಕರ ವೇದಿಕೆ, ದಲಿತ ವಿದ್ಯಾರ್ಥಿ ಪರಿಷತ್ತು, ದಲಿತ ವಿದ್ಯಾರ್ಥಿ ಒಕ್ಕೂಟದ ಆಶ್ರಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯಸೌಧ ಕ್ರಾಫರ್ಡ್ ಭವನದ ಎದುರು ಪ್ರತಿಭಟನೆ ನಡೆಸಿದರು.

ಮೈಸೂರು ವಿವಿಯಲ್ಲಿ ಸಂಶೋಧನೆಗೆ ನೋಂದಣಿಯಾಗಿರುವ ಎಸ್‌ಸಿ, ಎಸ್‌ಟಿ ಸಂಶೋಧನಾ ವಿದ್ಯಾರ್ಥಿಗಳಿಗೆ ಕಳೆದ 2021ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದ ಎಲ್ಲರಿಗೂ ಶಿಷ್ಯವೇತನ ನೀಡಲಾಗಿತ್ತು. 2022–2023, 2024ನೇ ಸಾಲಿನಲ್ಲಿ ನೂತನವಾಗಿ ಅರ್ಜಿ ಕರೆದಿಲ್ಲ. ಪ್ರಸ್ತುತ 45 ಸಂಶೋಧನಾ ವಿದ್ಯಾರ್ಥಿಗಳು ನೂತನವಾಗಿ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಇವರೆಲ್ಲಾ ಗ್ರಾಮೀಣಾ ಭಾಗದವರಾಗಿದ್ದು, ಆರ್ಥಿಕವಾಗಿ ಕಡುಬಡವರಾಗಿದ್ದಾರೆ. ಇವರಿಗೆ ಯಾವುದೇ ಆರ್ಥಿಕ ನೆರವು ಇಲ್ಲ. ಮೈಸೂರು ವಿವಿ ಆಡಳಿತ ಮಂಡಳಿ ತಕ್ಷಣವೇ ಶಿಷ್ಯ ವೇತನ ನೀಡದಿದ್ದರೆ ಸಂಶೋಧನೆ ಮುಂದುವರಿಸಲು ತೊಂದರೆಯಾಗುತ್ತದೆ. ಹೀಗಾಗಿ ಕೂಡಲೇ 45 ಸಂಶೋಧಕರಿಗೆ ಶಿಷ್ಯವೇತನ, ಹೊಸದಾಗಿ ಸಂಶೋಧನೆಗೆ ನೋಂದಣಿಯಾಗುವ ವಿದ್ಯಾರ್ಥಿಗಳಿಗೆ ಶಿಷ್ಯವೇತನ ಆರಂಭಿಸಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ಸಂಶೋಧಕರ ವೇದಿಕೆ ಅಧ್ಯಕ್ಷ ರಾಜೇಶ್ ಚಾಕನಹಳ್ಳಿ, ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾಧ್ಯಕ್ಷ ವಿಶ್ವಪ್ರಸಾದ್.ಎಚ್.ಪಿ, ಸಂಶೋಧನಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ರಾಜಸ್ಥಾನ್ ಶಿಲ್ಪಿ ರಚಿಸಿದ ರಾಮ ಲಲ್ಲಾ ಮೂರ್ತಿ ಚಿತ್ರ ಬಹಿರಂಗ

ಅಯೋಧ್ಯೆ: ಅಯೋಧ್ಯೆಯ ಭವ್ಯವಾದ ರಾಮಮಂದಿರದಲ್ಲಿ ರಾಮಲಲ್ಲಾನ ಪ್ರಾಣ ಪ್ರತಿಷ್ಠಾಪನೆಯು ನಿನ್ನೆ ಜನವರಿ 22ರಂದು ನಡೆಯಿತು. ಇದನ್ನು ಆಚರಿಸಲು ದೇಶದಾದ್ಯಂತ ರಾಮನ ಹೆಸರಿನಲ್ಲಿ ದೀಪಗಳನ್ನು ಬೆಳಗಿಸಲಾಯಿತು.



ರಾಮಲಲ್ಲಾನ ಪ್ರತಿಮೆಯನ್ನು ತಯಾರಿಸುವ ಕಾರ್ಯವನ್ನು ಮೂವರು ಶಿಲ್ಪಿಗಳಿಗೆ ವಹಿಸಲಾಗಿತ್ತು. ಅದರಲ್ಲಿ ಎರಡು ಮೂರ್ತಿಗಳನ್ನು ಆಯ್ಕೆ ಮಾಡಿ, ಮೈಸೂರು ಶಿಲ್ಪಿ ಅರುಣ್ ಯೋಗಿರಾಜ್ ಅವರು ನಿರ್ಮಿಸಿದ ಮೂರ್ತಿಗೆ ಪ್ರಾಣ ಪ್ರತಿಷ್ಠಾಪಿಸಿ ದೇವಸ್ಥಾನದಲ್ಲಿ ಸ್ಥಾಪಿಸಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ, ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಲು ಆಯ್ಕೆಯಾದ ಉಳಿದ ಎರಡು ವಿಗ್ರಹಗಳು ಎಲ್ಲಿ ಎಂದು ನೀವು ಆಶ್ಚರ್ಯಪಡಬಹುದು. ಆದ್ದರಿಂದ ರಾಮ ಲಲ್ಲಾನ ಅವರ ಎರಡನೇ ವಿಗ್ರಹದ ಚಿತ್ರವೂ ಹೊರಬಂದಿದೆ. ಇದನ್ನು ರಾಜಸ್ಥಾನದ ಜೈಪುರದ ನಿವಾಸಿ ಸತ್ಯನಾರಾಯಣ ಪಾಂಡೆ ಅವರು ಬಿಳಿ ಮಕ್ರಾನಾ ಅಮೃತಶಿಲೆಯಿಂದ ತಯಾರಿಸಿದ್ದಾರೆ. ಈ ವಿಗ್ರಹವು ಪ್ರಸ್ತುತ ದೇವಾಲಯದ ಟ್ರಸ್ಟ್‌ನಲ್ಲಿದೆ. ಮೂರನೇ ವಿಗ್ರಹದ ಚಿತ್ರವನ್ನು ಇನ್ನೂ ಬಹಿರಂಗಪಡಿಸಲಾಗಿಲ್ಲ, ಇದನ್ನು ಕರ್ನಾಟಕದ ಗಣೇಶ ಭಟ್ ನಿರ್ಮಿಸಿದ್ದಾರೆ.

ಕಾಂಗ್ರೆಸ್ ಅಭಿವೃದ್ಧಿ ಮೇಲೆ ಬಿಜೆಪಿ ರಾಜಕೀಯ ಮಾಡುತ್ತಿದೆ

● ಅರಣ್ಯ ಸಚಿವ ಈಶ್ವರ್ ಖಂಡ್ರೆ ವಾಗ್ದಾಳಿ ● ಮೂವರು ಡಿಸಿಎಂ ಈಗ ಅಪ್ರಸ್ತುತ

ಮೈಸೂರು,ಜ.23(ಎಂಟಿವೈ)– ಕಾಂಗ್ರೆಸ್ ದೇಶದಲ್ಲಿ ಮಾಡಿರುವ ಅಭಿವೃದ್ಧಿ ಕಾರ್ಯದ ಮೇಲೆ ಇಂದು ಬಿಜೆಪಿಗರು ಸುಳ್ಳು ಹೇಳಿಕೊಂಡು, ಭಾವನಾತ್ಮಕ ವಿಚಾರಗಳನ್ನು ಕೆರಳಿಸಿ ರಾಜಕೀಯ ಮಾಡುತ್ತಿದ್ದಾರೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ವಾಗ್ದಾಳಿ ನಡೆಸಿದ್ದಾರೆ.



ಮೈಸೂರಲ್ಲಿ ಮಂಗಳವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೇಶದ ಅಭಿವೃದ್ಧಿಗೆ ಕಾಂಗ್ರೆಸ್ ಏನೂ ಮಾಡಿಲ್ಲ ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ದೇಶದಲ್ಲಿ ವಿಶ್ವವಿದ್ಯಾನಿಲಯ, ಅಣೆಕಟ್ಟೆ ವಿಮಾನ, ಬಸ್ಸು, ರೈಲು ನಿಲ್ದಾಣ, ಸಂಶೋಧನಾ ಸಂಸ್ಥೆ ಸೇರಿದಂತೆ ಸಾವಿರಾರು ಅಭಿವೃದ್ಧಿ ಕಾರ್ಯ ಮಾಡಿರುವುದು ಕಾಂಗ್ರೆಸ್ ಸರ್ಕಾರ. ಕಾಂಗ್ರೆಸ್ ಮಾಡಿದ ಅಭಿವೃದ್ಧಿ ಕಾರ್ಯದ ಮೇಲೆ ಬಿಜೆಪಿಗರು ಇಂದು ರಾಜಕೀಯ ಮಾಡುತ್ತಿದ್ದಾರೆ.

2018ರಲ್ಲಿ ಅಚ್ಛೇ ದಿನ್ ಎಂದರು, ಈಗ ರೈತರ ಆದಾಯ ದುಪ್ಪಟ್ಟು ಮಾಡುತ್ತೀವಿ ಎನ್ನುತ್ತಿದ್ದಾರೆ. ಕಳೆದ 9 ವರ್ಷದ ಅವಧಿಯಲ್ಲಿ ಕೇಂದ್ರ ಸರ್ಕಾರ ನೀಡಿದ್ದ ಭರವಸೆಯಲ್ಲಿ ಒಂದನ್ನೂ ಈಡೇರಿಸಿಲ್ಲ. ಸುಳ್ಳು ಹೇಳಿಕೊಂಡು, ಜನರನ್ನು ದಿಕ್ಕು ತಪ್ಪಿಸುತ್ತಾ ರಾಜಕೀಯ ಮಾಡುತ್ತಿದ್ದಾರೆ. ಅಭಿವೃದ್ಧಿಯನ್ನು ಕಡೆಗಣಿಸಿ ಜಾತಿ–ಜಾತಿ, ಧರ್ಮ–ಧರ್ಮಗಳ ಎತ್ತಿಕಟ್ಟುವ ಮೂಲಕ ಸಮಾಜ ಒಡೆಯುವ ಕೆಲಸ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಜನರ ಭಾವನೆ ಕೆರಳಿಸಿ, ಜಾತಿ ಸಂಘರ್ಷ ಮೂಡಿಸಿ ದೇಶದ ಅಖಂಡತೆಗೆ ಧಕ್ಕೆಯುಂಟು ಮಾಡುತ್ತಿದ್ದಾರೆ. ದೇಶ ರಕ್ಷಣೆ, ಏಕತೆ, ಅಖಂಡತೆ ಹಾಗೂ ಐಕ್ಯತೆ ಉಳಿವಿಗಾಗಿ ರಾಹುಲ್ ಗಾಂಧಿ ಭಾರತ್ ಜೋಡೋ ನ್ಯಾಯಯಾತ್ರೆ ಮಾಡುತ್ತಿದ್ದಾರೆ. ಎಲ್ಲಾ ವರ್ಗದ ಜನರನ್ನು ಭೇಟಿ ಮಾಡಿ, ಅವರ ಸಮಸ್ಯೆ ಆಲಿಸುತ್ತಿದ್ದಾರೆ. 14 ರಾಜ್ಯ, 88 ಲೋಕಸಭಾ ಕ್ಷೇತ್ರಗಳಲ್ಲಿ 6 ಸಾವಿರ ಕಿ.ಮೀ. ಭಾರತ್ ಜೋಡೋ ನ್ಯಾಯಯಾತ್ರೆ ನಡೆಯುತ್ತಿದೆ. ಆದರೆ, ಬಿಜೆಪಿಗರು ಗೂಂಡಾಗಳನ್ನು ಬಿಟ್ಟು ಅಸ್ಸಾಂನಲ್ಲಿ ಯಾತ್ರೆ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಕೈಯ್ಯಲಿ ಬಡಿಗೆ ಹಿಡಿದು ಹಲ್ಲೆಗೆ ಮುಂದಾಗಿದ್ದಾರೆ. ಇದಕ್ಕೆ ಅಲ್ಲಿನ ಬಿಜೆಪಿ ಸರ್ಕಾರ ಕುಮ್ಮಕ್ಕು ನೀಡಿದೆ ಎಂದು ದೂರಿದರು.

ನೈತಿಕತೆ ಇಲ್ಲ: ಅಯೋಧ್ಯೆ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರನ್ನು ಟೀಕಿಸುವ ನೈತಿಕತೆ ಬಿಜೆಪಿಯವರಿಗೆ ಇಲ್ಲ. ನಾನು ಕೂಡ ಆಸ್ತಿಕ, ನಾಸ್ತಿಕ ಅಲ್ಲ ಎಂದು ಸ್ವತಃ ಸಿದ್ದರಾಮಯ್ಯ ಅವರೇ ಹೇಳಿದ್ದಾರೆ. ಅವರು ನಾಸ್ತಿಕರಾಗಿದ್ದರೆ ಅವರ ಕ್ಷೇತ್ರದಲ್ಲಿ ರಾಮ ಮಂದಿರ ಕಟ್ಟಿಸುತ್ತಿರಲಿಲ್ಲ. ದೇವಸ್ಥಾನಗಳಿಗೆ ಅನುದಾನ ನೀಡುತ್ತಿರಲಿಲ್ಲ. ರಾಜ್ಯದ ಅನೇಕ ದೇವಾಲಯಗಳಿಗೆ ಸಿದ್ದರಾಮಯ್ಯನವರು ಅನುದಾನ ನೀಡಿದ್ದಾರೆ. ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ರಾಮ ನಮ್ಮ ಮನಸ್ಸಿನಲ್ಲಿದ್ದಾನೆ ಎಂದರು.

ಅಪ್ರಸ್ತುತ: ರಾಜ್ಯದಲ್ಲಿ ಮತ್ತೆ ಮೂವರು ಉಪ ಮುಖ್ಯಮಂತ್ರಿ ಸ್ಥಾನ ಕುರಿತು ಚರ್ಚೆ ಸದ್ಯಕ್ಕೆ ಅಪ್ರಸ್ತುತ. ಈ ಕುರಿತು ಈಗಾಗಲೇ ಹೈಕಮಾಂಡ್ ಸೂಚನೆ ನೀಡಿದೆ. ಅವರು ಸೂಕ್ತ ತೀರ್ಮಾನ ಮಾಡುತ್ತಾರೆ. ಡಿಸಿಎಂ ನೇಮಕ ವಿಚಾರವೇ ಅಪ್ರಸ್ತುತ ಎಂದು ಸ್ಪಷ್ಟಪಡಿಸಿದರು.

ಹೊಸಬರ ನೇಮಕ : ಕೆಪಿಸಿಸಿ ಕಾರ್ಯಾಧ್ಯಕ್ಷ ಸ್ಥಾನ ಶೀಘ್ರದಲ್ಲೇ ಬದಲಾಗಬಹುದು. ಇದರ ಬಗ್ಗೆ ನನಗೆ ಮಾಹಿತಿ ಇಲ್ಲ. ಸಚಿವರಾದ ಬಳಿಕ ಪಕ್ಷ ಸಂಘಟನೆಗೆ ಹೆಚ್ಚಿನ ಒತ್ತು ನೀಡಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಕಾರ್ಯಾಧ್ಯಕ್ಷ ಸ್ಥಾನಕ್ಕೆ ಬೇರೆಯವರ ನೇಮಕ ಮಾಡಬೇಕು ಎಂದು ಪಕ್ಷದ ವರಿಷ್ಠರ ಗಮನಕ್ಕೆ ತಂದಿದ್ದೇವೆ. ಅತೀ ಶೀಘ್ರದಲ್ಲೇ ಕಾರ್ಯಾಧ್ಯಕ್ಷ ಸ್ಥಾನಗಳಿಗೆ ಹೊಸಬರ ನೇಮಕ ಆಗಲಿದೆ ಎಂದು ಅವರು ಹೇಳಿದರು.


ಶ್ರೀರಾಮೋತ್ಸವ



ಮೈಸೂರಿನ ಶ್ರೀ ಬಿ.ಜಿ.ಎಸ್ ಬಾಲಜಗತ್ ಶ್ರೀರಾಂಪುರ ಪ್ರೌಢಶಾಲೆಯಲ್ಲಿ 108 ಅಡಿ ಎತ್ತರದ ಶ್ರೀರಾಮನ ಚಿತ್ರವನ್ನು ರಂಗೋಲಿಯಲ್ಲಿ ಬಿಡಿಸಿ ಬಣ್ಣ ತುಂಬುವುದರ ಮೂಲಕ ಶಾಲೆ ಶಿಕ್ಷಕರು, ಮಕ್ಕಳು ಹಾಗೂ ಪೋಷಕರು ಶ್ರೀ ರಾಮೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.



ಮೈಸೂರು ಯುವ ಬಳಗದ ಆಶ್ರಯದಲ್ಲಿ ಡಿ.ದೇವರಾಜ ಅರಸು ರಸ್ತೆಯಲ್ಲಿ ಶ್ರೀ ಬಾಲ ರಾಮನ ಪ್ರಾಣ ಪ್ರತಿಷ್ಠಾಪನ ದಿನದ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಪಾನಕ ಮತ್ತು ಮಜ್ಜಿಗೆಯನ್ನು ವಿತರಿಸಲಾಯಿತು. ಈ ವೇಳೆ ಶಾಸಕರಾದ ಕೆ.ಹರೀಶ್ ಗೌಡ, ಕಾಂಗ್ರೆಸ್ ನಗರ ಅಧ್ಯಕ್ಷರಾದ ಆರ್.ಮೂರ್ತಿ, ಮುಡಾ ಮಾಜಿ ಸದಸ್ಯ ನವೀನ್ ಕುಮಾರ್, ಮಾಜಿ ಉಪ ಮೇಯರ್ ಪುಷ್ಪವಲ್ಲಿ, ಮಹದೇವ, ಧರ್ಮೇಂದ್ರ, ಮಂಜುನಾಥ ಬಸವರಾಜ್, ರವಿಚಂದ್ರ, ನಂಜುಂಡಸ್ವಾಮಿ, ಹೇಮಂತ ಜಗದೀಶ, ಲೋಕೇಶ, ಶ್ರೀನಿವಾಸ್ ರಾಣಿ, ಶಾಂತ, ಮಂಜುಳಾ ಮತ್ತಿತರರು ಉಪಸ್ಥಿತರಿದ್ದರು.



ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಶಾಕಂಬರಿ ಧಾರ್ಮಿಕ ಕೇಂದ್ರದಲ್ಲಿ ರಾಮ ಭಜನೆ, ಹೋಮಾದಿಗಳೊಂದಿಗೆ ಶ್ರೀರಾಮನಿಗೆ ಪೂಜೆ ಸಲ್ಲಿಸಿ, ಪ್ರಸಾದ ವಿತರಿಸಲಾಯಿತು. ಶಾಕಂಬರಿ ಧಾರ್ಮಿಕ ಕೇಂದ್ರದ ಅಧ್ಯಕ್ಷ ಬಿ.ಆರ್.ನಟರಾಜ್ ಜೋಯಿಸ್ ಪ್ರಸಾದ್, ರಘುರಾಂ ವಾಜಪೇಯಿ ಮತ್ತಿತರರು ಉಪಸ್ಥಿತರಿದ್ದರು.



ಅಯೋಧ್ಯೆಯಲ್ಲಿ ಶ್ರೀರಾಮನ ಪ್ರಾಣ ಪ್ರತಿಷ್ಠಾಪನಾ ಅಂಗವಾಗಿ ಮೈಸೂರಿನ ಶ್ರೀರಾಂಪುರದ ಶ್ರೀ ವೆಂಕಟೇಶ್ವರ ಧ್ಯಾನಕೇಂದ್ರ ಉತ್ತರಾಧಿ ಮಠದಿಂದ ಶ್ರೀರಾಮನಾಮ ಜಪದೊಂದಿಗೆ ಭ್ರಮರಾಂಬ ಕಲ್ಯಾಣಮಂಟಪ ವೃತ್ತದಿಂದ ಶ್ರೀನಿವಾಸ ಧ್ಯಾನಕೇಂದ್ರದವರೆಗೂ ಮೆರವಣಿಗೆ ವಿಜೃಂಭಣೆಯಿಂದ ನೆರವೇರಿತು. ರಸ್ತೆಯ ಉದ್ದಗಲಕ್ಕೂ ಪ್ರಸಾದ ವಿತರಿಸಲಾಯಿತು. ಮೆರವಣಿಗೆಯಲ್ಲಿ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ದೇವಸ್ಥಾನದ ಆಡಳಿತ ಅಧಿಕಾರಿ ಪಂಡಿತ ಹೇಮಂತಚಾರ್ ನಂದಗುಡಿ, ವಾಸುದೇವ ಮೂರ್ತಿ, ಪ್ರಮೋದ್, ಗುರುರಾಜ್, ಆನಂದ ತೀರ್ಥ, ಜೋಶಿ ಮತ್ತು ಭಜನಾ ಮಂಡಳಿ ಸದಸ್ಯರು ಇದ್ದರು.



ಅಯೋಧ್ಯೆ ನಗರಿಯಲ್ಲಿ ಬಾಲರಾಮನ ಪ್ರತಿಷ್ಠಾಪನೆಯ ನಿಮಿತ್ತ ಮೈಸೂರು ಕುವೆಂಪುನಗರ ಎಂ ಬ್ಲಾಕ್‌ನಲ್ಲಿ ಶ್ರೀರಾಮ ಪೂಜಾ ಮಹೋತ್ಸವಕ್ಕೆ ಶಾಸಕ ಟಿ.ಎಸ್. ಶ್ರೀವತ್ಸ 6 ಅಡಿ ಗಂಧದ ಕಡ್ಡಿಯನ್ನು ಬೆಳಗಿಸುವ ಮೂಲಕ ಚಾಲನೆ ನೀಡಿದರು. ಈ ವೇಳೆ ರಾಜೇಶ್ ಜಾಧವ್, ಹೇಮಂತ್ ಕುಮಾರ್, ನಾಗೇಶ್, ಹೇಮಂತ್, ಶಿವಕುಮಾರ್, ರಾಜಗೋಪಾಲ್, ಗೌರವ್ ಶರ್ಮಾ, ರಾಘವೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಕೊಡಗಹಳ್ಳಿ ಕೋದಂಡರಾಮ ಮಂದಿರದಲ್ಲಿ ವಿಶೇಷ ಪೂಜೆ



ಮೈಸೂರು, ಜ.23–ತಿ.ನರಸೀಪುರ ತಾಲೂಕು ಬನ್ನೂರು ಹೋಬಳಿಯ ಇತಿಹಾಸ ಪ್ರಸಿದ್ಧ ಕೊಡಗಹಳ್ಳಿ ಗ್ರಾಮದ ಶ್ರೀ ಕೋದಂಡ ರಾಮಮಂದಿರದಲ್ಲಿ ಅಯೋಧ್ಯೆ ಶ್ರೀರಾಮ ಪ್ರಾಣ ಪ್ರತಿಷ್ಠಾಪನೆ ಪ್ರಯುಕ್ತ ವಿಶೇಷ ಪೂಜೆ ಏರ್ಪಡಿಸಲಾಗಿತ್ತು. ಪ್ರಧಾನ ಅರ್ಚಕರಾದ ಶ್ರೀನಿವಾಸ ದೀಕ್ಷಿತ್ ನೇತೃತ್ವದಲ್ಲಿ ಬೆಳಗ್ಗೆಯಿಂದಲೇ ದೇವರಿಗೆ ಅಭಿಷೇಕ, ಅಲಂಕಾರ, ಭಜನೆ, ಮಹಾಮಂಗಳಾರತಿ ಹಾಗೂ ತೀರ್ಥ ಪ್ರಸಾದವನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಪಟೇಲರಾದ ಕೆ.ಜೆ.ಚಿಕ್ಕಜವರಪ್ಪ, ಸುಮಾ ಶ್ರೀನಿವಾಸ್, ಕುಮಾರಿ ಶ್ರೀಸಿರಿ, ಮುಖಂಡರಾದ ಕೆ.ಜೆ.ನಾಗರಾಜ್, ಸರ್ಕಾರಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಬಾಲಸುಬ್ರಹ್ಮಣ್ಯ, ವಿಂಧ್ಯಾ, ರಾಜೇಂದ್ರಪ್ರಸಾದ್, ಸುಬ್ಬಣ್ಣ, ಚೆನ್ನಪ್ಪ, ಹರೀಶ್, ಗಿರೀಶ್ ಹಾಗೂ ಸುತ್ತಮುತ್ತಲಿನ ಗ್ರಾಮದ ಭಕ್ತರು ದೇವತಾ ಕಾರ್ಯದಲ್ಲಿ ಭಾಗವಹಿಸಿ ಪುನೀತರಾದರು.

ಮೈಸೂರಿನ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದ ಗೋಪುರಕ್ಕೆ ಭೂಮಿ ಪೂಜೆ

ಮೈಸೂರು, ಜ.23(ಬಿಎಲ್‌ಯು)– ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಾಣ ಮಾಡುತ್ತಿರುವ ರಾಜಗೋಪುರ ಹಾಗೂ ಶ್ರೀ ಚಾಮರಾಜ ಒಡೆಯರ್ ಭವನದ ಅನೆಕ್ಸ್‌ಗೆ ಇಂದು ಭೂಮಿ ಪೂಜೆ ನೆರವೇರಿಸಲಾಯಿತು.

ಮೈಸೂರಿನ ಉದ್ಯಮಿ ಡಾ.ಜಗನ್ನಾಥ ಶೆಣೈ ರಾಜಗೋಪುರದ ಭೂಮಿ ಪೂಜೆ ನೆರವೇರಿಸಿದರು. ಈ ವೇಳೆ ಮಾತನಾಡಿದ ಅವರು, ರಾಜಗೋಪುರ ನಿರ್ಮಾಣಕ್ಕೆ ನನ್ನ ಕೈಲಾದ ಅಳಿಲು ಸೇವೆ ಮಾಡುವುದಾಗಿ ಭರವಸೆ ನೀಡಿದರು.

ಆದಷ್ಟು ಬೇಗ ಗೋಪುರ ನಿರ್ಮಾಣ ಕಾರ್ಯ ಪೂರ್ಣಗೊಳ್ಳಬೇಕು. ಇದು ಒಬ್ಬರ ಜವಾಬ್ದಾರಿಯಾಗದೆ, ಇದರ ನಿರ್ಮಾಣ ಕಾರ್ಯದಲ್ಲಿ ಎಲ್ಲರೂ ಕೈ ಜೋಡಿಸಬೇಕು ಎಂದು ಮನವಿ ನೀಡಿದರು.

ಮಾಜಿ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ಗೋಪುರ ನಿರ್ಮಾಣ ಕಾರ್ಯಕ್ಕೆ ಅವಶ್ಯವಿರುವ ಹಣಕಾಸು ಕ್ರೂಢೀಕರಣಕ್ಕೆ ವೇಣುಗೋಪಾಲ ಸ್ವಾಮಿಯೇ ದಯೆ ತೋರುತ್ತಾನೆ. ಆದಷ್ಟು ಬೇಗ ಗೋಪುರ ನಿರ್ಮಾಣ ಕಾರ್ಯ ಪೂರ್ಣಗೊಳ್ಳಲಿದೆ ಎಂದು ಆಶಯ ವ್ಯಕ್ತಪಡಿಸಿದರು. ಕರ್ನಾಟಕ ಮಾತ್ರವಲ್ಲದೆ ಇಡೀ ದೇಶಕ್ಕೆ ಮೈಸೂರು ಮಹಾರಾಜರು ಸ್ಮರಣೀಯ ಕೊಡುಗೆ ನೀಡಿದ್ದಾರೆ. ದೂರದೃಷ್ಟಿ ಇಟ್ಟುಕೊಂಡು ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಾರೆ. ಹತ್ತು ಹಲವು ಕೊಡುಗೆ ನೀಡಿದ ಮೈಸೂರು ಮಹಾರಾಜರು ಎಂದೆಂದೂ ನೆನಪಾಗಿ ಉಳಿಯುತ್ತಾರೆ ಎಂದರು.

ಉತ್ತರ ಕರ್ನಾಟಕಕ್ಕೆ ಭೇಟಿ ನೀಡಿದ್ದ ವೇಳೆ ಅಲ್ಲಿನ ಜನರು ನಾವು ಸೌಲಭ್ಯಗಳಿಂದ ವಂಚಿತರಾಗಿದ್ದೇವೆ ಎಂದು ಗೋಳು ತೋಡಿಕೊಳ್ಳುತ್ತಾರೆ. ಹಳೇ ಮೈಸೂರು ಭಾಗದಲ್ಲಿ ಮಹಾರಾಜರು ದೂರದೃಷ್ಟಿ ಇಟ್ಟುಕೊಂಡು ಹಲವು ಯೋಜನೆ ಸಾಕಾರಗೊಳಿಸಿದ್ದಾರೆ. ಅಲ್ಲಿ ಹುಟ್ಟಿರುವ ನೀವೇ ಪುಣ್ಯವಂತರು ಎಂದು ಉತ್ತರ ಕರ್ನಾಟಕದ ಬಹಳಷ್ಟು ಶಾಸಕರು ನನಗೆ ಹೇಳುತ್ತಾರೆ ಎಂದು ರಾಮದಾಸ್ ಹೇಳಿದರು.

ಮೈಸೂರು ಮಹಾರಾಜರಾಗಿದ್ದ 10ನೇ ಚಾಮರಾಜ ಒಡೆಯರ್ ಸಹೋದರ ಪ್ರಿನ್ಸ್ ಸುಬ್ರಹ್ಮಣ್ಯರಾಜೇ ಅರಸ್ ಅವರ ಪತ್ನಿ ಲಕ್ಷಮ್ಮಣಿ ಈ ದೇವಾಲಯ ನಿರ್ಮಾಣ ಮಾಡಿದ್ದರು.

ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದ ಗೋಪುರ ಸುಮಾರು 10 ಅಡಿ ಇದೆ. ಇದು ಬಹಳ ಚಿಕ್ಕದ್ದಾಗಿದ್ದು, ನೋಡಲು ಕಾಣಿಸುವುದಿಲ್ಲ. ಆದ ಕಾರಣ ಇದನ್ನು ನೆಲಸಮಗೊಳಿಸಿ 25 ಲಕ್ಷ ರೂಪಾಯಿ ವೆಚ್ಚದಲ್ಲಿ ಹೊಸದಾಗಿ ನಿರ್ಮಾಣ ಮಾಡಲಾಗುತ್ತಿದೆ.

ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಶ್ರೀಧರರಾಜ ಅರಸ್, ವರ್ಚಸ್ವಿ ಸಿದ್ದಲಿಂಗರಾಜೇ ಅರಸ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದ ಗೋಪುರ ನಿರ್ಮಾಣಕ್ಕೆ ಉದ್ಯಮಿ ಡಾ. ಜಗನ್ನಾಥ ಶೆಣೈ ಗುದ್ದಲಿ ಪೂಜೆ ನೆರವೇರಿಸಿದರು. ಶಾಸಕ ಎಸ್.ಎ.ರಾಮದಾಸ್ ಸೇರಿದಂತೆ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಜ.28ಕ್ಕೆ 'ಡೈರೆಕ್ಟ್ ಆಕ್ಷನ್' ನಾಟಕ ಪ್ರದರ್ಶನ

ಮೈಸೂರು,ಜ.23(ಜಿಎ)–ಮೈಸೂರಿನ ಕಲಾಮಂದಿರದಲ್ಲಿ ಜ.28ರ ಸಂಜೆ 6 ಗಂಟೆಗೆ ನೆಲೆ ಹಿನ್ನೆಲೆ ಸಂಸ್ಥೆ ಸಹಯೋಗದಲ್ಲಿ ಬೆಂಗಳೂರಿನ ನಗ್ನ ಥಿಯೇಟರ್ ವತಿಯಿಂದ ಪ್ರೊ.ನಟರಾಜ್ ಹುಳಿಯಾರ್ ಅವರು ಪ್ರೊ.ಎಂ.ಡಿ. ನಂಜುಂಡಸ್ವಾಮಿ ಅವರ ಹೋರಾಟ ಗಾಥೆ ಕುರಿತಂತೆ ರಚಿಸಿರುವ 'ಡೈರೆಕ್ಟ್ ಆಕ್ಷನ್' ಎಂಬ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಹಿರಿಯ ರಂಗಕರ್ಮಿ ಎಚ್. ಜನಾರ್ಧನ್ (ಜನ್ನಿ) ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಬಡ್ಡಿ ನರೇಂದ್ರಬಾಬು ನಿರ್ದೇಶಿಸಿದ್ದು, ಪ್ರೊ.ಎಂ.ಡಿ.ಎನ್ ಪಾತ್ರವನ್ನು ಸಂಪತ್ ಮೈತ್ರೇಯಿ ನಿರ್ವಹಿಸುತ್ತಿದ್ದಾರೆ. ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರು 70ರ ದಶಕದಲ್ಲಿ ಪ್ರಬಲ ಹೋರಾಟ ಕಟ್ಟಿದರು. ಬಡತನ ಅವರಿಗೆ ಗೊತ್ತೇ ಇರಲಿಲ್ಲ. ಆದರೂ ರೈತನಾಗಿ ಉಳಿದುಕೊಂಡು ರೈತ ಚಳವಳಿ ಕಟ್ಟಿದರು. ಇವರಿಂದಾಗಿ ಲಕ್ಷಾಂತರ ರೈತರು ತಮ್ಮ ಹಕ್ಕಿಗಾಗಿ ಹೋರಾಟ ನಡೆಸಲು ಸ್ಫೂರ್ತಿ ದೊರೆಯಿತು ಎಂದರು. ಇಂದಿನ ದಲಿತ, ರೈತ, ಜನಪರ ಹೋರಾಟಕ್ಕೆ ಅವರು ಮಾದರಿ ಆಗಿದ್ದಾರೆ. ಇವರ ಬದುಕಿನ ಚಿತ್ರಣವನ್ನು ಪ್ರೊ.ನಟರಾಜ್ ಹುಳಿಯಾರ್ ಈ ನಾಟಕದ ಮೂಲಕ ಕಟ್ಟಿಕೊಟ್ಟಿದ್ದಾರೆ. ಇದು ಮತ್ತೆ ಇಂದಿನ ಹೋರಾಟಕ್ಕೆ ಮುನ್ನುಡಿಯಾಗಿದೆ. ಆದ್ದರಿಂದ ಎಲ್ಲಾ ಪ್ರಗತಿಪರರು, ಯುವಜನರು, ಹೋರಾಟಗಾರರು ವೀಕ್ಷಿಸಲೇಬೇಕಾದ ನಾಟಕ ಇದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕೆ.ಆರ್. ಗೋಪಾಲಕೃಷ್ಣ, ಅಹಿಂದ ಜವರಪ್ಪ, ವಿಷ್ಣುಕುಮಾರ್ ಉಪಸ್ಥಿತರಿದ್ದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ 'ಡೈರೆಕ್ಟ್ ಆಕ್ಷನ್' ನಾಟಕದ ಪೋಸ್ಟರ್ ಬಿಡುಗಡೆಗೊಳಿಸಲಾಯಿತು.

ರಾಮಜನ್ಮಭೂಮಿ ಅಯೋಧ್ಯೆಯಷ್ಟೇ ಕೃಷ್ಣನ ನೆಲವೂ ಪವಿತ್ರ



ಉಡುಪಿ, ಜ.23– ರಾಮ ಹುಟ್ಟಿದ ಜಾಗದಷ್ಟೇ ಕೃಷ್ಣನ ಮಥುರಾ ನಮಗೆ ಪವಿತ್ರ ಎಂದು ಬಿಜೆಪಿ ನಾಯಕ ಸಿಟಿ ರವಿ ತಿಳಿಸಿದರು.

ಅಯೋಧ್ಯೆ ರಾಮ ಮಂದಿರದ ಬಳಿಕ ಮಥುರಾ ಶ್ರೀಕೃಷ್ಣ ದೇವಾಲಯ ವಿಮೋಚನ ವಿಚಾರವಾಗಿ ಮಾಧ್ಯಮ ಪ್ರತಿನಿಧಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಜ್ಞಾನ ವ್ಯಾಪಿಯ ನಂದಿ ಕಾಶಿಯ ಪುನರುತ್ಥಾನಕ್ಕೆ ಕಾಯುತ್ತಿದ್ದಾನೆ. ಸನಾತನಿಗಳ ವಿರುದ್ಧ ಮಾಡಿದ ಪಾಪ ನೀವು ಹೊತ್ತುಕೊಳ್ಳಬೇಡಿ. ನಮ್ಮ ಕ್ಷೇತ್ರಗಳನ್ನು ಬಿಟ್ಟು ಕೊಡಿ, ಮಾಡಿದ ಪ್ರಾಯಶ್ಚಿತ ಮಾಡಿಕೊಳ್ಳಲು ಅವರಿಗೆ ಅವಕಾಶ ಎಂದರು. ಇದೀಗ ಅಯೋಧ್ಯೆ ರಾಮಮಂದಿರದಲ್ಲಿ ಬಾಲರಾಮನ ಪ್ರತಿಷ್ಠಾಪನೆ ಸಾಂಸ್ಕೃತಿಕ ಬೀಜಾಂಕುರ ಆಗಿದೆ. ಇಡೀ ಹಿಂದು ಸಮುದಾಯ ಬಾಲರಾಮ ಒಗ್ಗೂಡಿಸಿದ್ದಾನೆ. ಬಾಬರ್ ಮತ್ತು ಅವನ ಸಂತಾನಕ್ಕೆ ಓಲೈಸುವ ವೋಟ್ ಬ್ಯಾಂಕ್ ರಾಜಕೀಯದ ಅನಿವಾರ್ಯತೆ ಉಂಟಾಗಿದೆ. ರಾಮನನ್ನು ಬಿಟ್ಟರೆ ರಾಷ್ಟ್ರ ಇಲ್ಲ ವೋಟ್ ಇಲ್ಲ ಎನ್ನುವುದು ಅವರಿಗೆ ಗೊತ್ತಾಗಿದೆ. ಹೀಗಾಗಿಯೇ ರಾಮ ಕಾಲ್ಪನಿಕ ಎಂದಿದ್ದವರು. ಇದೀಗ ರಾಮನಾಮ ಜಪ ಆರಂಭಿಸಿದ್ದಾರೆ. ಅತಿಕ್ರಮಣಕಾರರನ್ನು ಬಿಟ್ಟು ರಾಮಕೃಷ್ಣ ಶಿವನ ಜೊತೆ ಮುಸಲ್ಮಾನರು ಗುರುತಿಸಿಕೊಳ್ಳುತ್ತಿದ್ದಾರ

ದಿವ್ಯ ಬಾಲಯೇಸುವಿನ ದೇವಾಲಯದ 43ನೇ ವಾರ್ಷಿಕೋತ್ಸವ

ಮೈಸೂರು, ಜ.23(ಬಿಎಲ್‌ಯು)– ಮೈಸೂರಿನ ಬೆಲವತ್ತ ಗ್ರಾಮದ ಪುಷ್ಪಗಿರಿಯಲ್ಲಿರುವ ದಿವ್ಯ ಬಾಲಯೇಸುವಿನ ದೇವಾಲಯದ 43ನೇ ವಾರ್ಷಿಕೋತ್ಸವ ಜನವರಿ 26ರಂದು ಅದ್ಧೂರಿಯಾಗಿ ನಡೆಯಲಿದೆ. ವಾರ್ಷಿಕೋತ್ಸವದ ಹಿನ್ನೆಲೆ ದಿವ್ಯ ಬಲಿಪೂಜೆ, ವಿಶೇಷ ಪ್ರಬೋಧನೆ ಮತ್ತು ನವೇನ ಪ್ರಾರ್ಥನೆಗಳು ನಡೆಯಲಿದ್ದು, ನಾಳೆ(ಜನವರಿ 24) ಸಂಜೆ 6 ಗಂಟೆಗೆ ಶ್ರೀರಂಗಪಟ್ಟಣದ ಕ್ಸೇವಿಯರ್ ಸದನದ ನಿರ್ದೇಶಕ ಸ್ವಾಮಿ ಎಡ್ವಡ್ ಫಿಲಿಪ್ಸ್ ಎಸ್.ಜೆ. ಪಾಲ್ಗೊಳ್ಳವರು. ಜನವರಿ 25 ರಂದು ಸಂಜೆ 6 ಗಂಟೆಗೆ ನಂಜನಗೂಡಿನ ಇನ್ಫೆಂಟ್ ಜೀಸಸ್ ದೇವಾಲಯದ ಧರ್ಮಕೇಂದ್ರದ ಗುರುಗಳಾದ ಸ್ವಾಮಿ ಅಂತಪ್ಪ ಎಂ ಪಾಲ್ಗೊಳ್ಳಲಿದ್ದಾರೆ. ಜನವರಿ 26 ರಂದು ಹಬ್ಬದ ದಿನ ಬಲಿ ಪೂಜೆ ನೆರವೇರಲಿದ್ದು, ಬೆಳಿಗ್ಗೆ 10 ಗಂಟೆಗೆ ಬೆಂಗಳೂರಿನ ವಿಶ್ರಾಂತ ಧರ್ಮಾಧ್ಯಕ್ಷರೂ ಆದ ಮೈಸೂರು ಧರ್ಮಕ್ಷೇತ್ರದ ಪ್ರೇಷಿತ ಆಡಳಿತಾಧಿಕಾರಿ ಡಾ. ಬೆರ್ನಾಡ್ ಮೊರಸ್ ಭಾಗವಹಿಸುವರು. ಸಂಜೆ 5.30 ಗಂಟೆಗೆ ಮಡಿಕೇರಿಯ ಸಂತ ಮಿಕಾಯೇಲರ ದೇವಾಲಯದ ಧರ್ಮ ಕೇಂದ್ರದ ಗುರುಗಳಾದ ಸ್ವಾಮಿ ಜಾರ್ಜ್ ದೀಪಕ್ ಭಾಗಿಯಾಗುವರು.

ಅದೇ ದಿನ ಸಂಜೆ 6.45 ಗಂಟೆಗೆ ಭವ್ಯ ಅಲಂಕೃತ ತೇರಿನ ಮೆರವಣಿಗೆ, ಪರಮ ಪ್ರಸಾದ, ಆಶೀರ್ವಾದ ದೊರೆಯಲಿದೆ.

ಜ.27ರಿಂದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ

ಮೈಸೂರು,ಜ.23(ಜಿಎ)–ತಿ. ನರಸೀಪುರದ ವೆಂಕಟೇಶ್ವರ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಹಾಗೂ ಕಾವೇರಿ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಜ. 27 ಮತ್ತು 28ರಂದು ನಂಜನ ಗೂಡು ಮುಖ್ಯ ರಸ್ತೆಯ ಎಪಿಎಂಸಿ ಆವರಣದಲ್ಲಿ ಜಿಲ್ಲಾ ಮಟ್ಟದ ಪುರುಷರ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಕ್ಲಬ್ ಅಧ್ಯಕ್ಷ ಸಿ.ಡಿ. ವೆಂಕಟೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂದ್ಯಾವಳಿಯನ್ನು ಜ.27 ರ ಸಂಜೆ 4ಕ್ಕೆ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸುವರು. ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. 28ರ ಸಂಜೆ ಪಂದ್ಯಾವಳಿ ಸಮಾರೋಪ ಸಮಾರಂಭ ನಡೆಯಲಿದ್ದು, ಮಾಜಿ ಸಚಿವ ಕೋಟೆ ಶಿವಣ್ಣ ಅಧ್ಯಕ್ಷತೆ ವಹಿಸುವರು, ಕೆಡಿಪಿ ಸದಸ್ಯ ಸುನಿಲ್ ಬೋಸ್ ಬಹುಮಾನ ವಿತರಿಸಲಿದ್ದಾರೆ ಎಂದರು.

ಈ ಪಂದ್ಯಾವಳಿಯಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಸುಮಾರು 40 ತಂಡ ಪಾಲ್ಗೊಳ್ಳಲಿವೆ. ಪ್ರಥಮ ಬಹುಮಾನವಾಗಿ 25 ಸಾವಿರ, ದ್ವಿತೀಯ ಬಹುಮಾನವಾಗಿ 15 ಸಾವಿರ, ತೃತೀಯ ಬಹುಮಾನವಾಗಿ ಹತ್ತು ಸಾವಿರ, ಚತುರ್ಥ ಬಹುಮಾನವಾಗಿ ಐದು ಸಾವಿರ ಹಾಗೂ ಈ ಎಲ್ಲಾ ತಂಡಗಳಿಗೂ ಟ್ರೋಫಿ ಸಹಾ ನೀಡಲಾಗುವುದು. ಜೊತೆಗೆ ಉತ್ತಮ ಪ್ರದರ್ಶನ ತೋರಿದ ಆಟಗಾರರಿಗೆ ಪಾರಿತೋಷಕ ನೀಡಿ ಅಭಿನಂದಿಸಲಾಗುತ್ತದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಬಿ.ಎಂ. ಮಹದೇವು, ಸುನಿಲ್‌ಕುಮಾರ್, ನಾಗೇಶ್ ಹಾಗೂ ರಮೇಶ್ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸಿ.ಡಿ. ವೆಂಕಟೇಶ್ ಮಾತನಾಡಿದರು.

ಜ.26, ಕದಳಿ ಮಹಿಳಾ ವೇದಿಕೆಯ ವಾರ್ಷಿಕೋತ್ಸವ

'ಕದಳಿ ಶ್ರೀ' ಪ್ರಶಸ್ತಿ ಪ್ರದಾನ, ಐದು ಕೃತಿಗಳ ಲೋಕಾರ್ಪಣೆ

ಮೈಸೂರು,ಜ.23(ಜಿಎ)–ಕದಳಿ ಮಹಿಳಾ ವೇದಿಕೆಯ ವಾರ್ಷಿಕೋತ್ಸವ, ಕದಳಿ ಶ್ರೀ ಪ್ರಶಸ್ತಿ ಪ್ರದಾನ ಮತ್ತು ಕೃತಿಗಳು ಲೋಕಾರ್ಪಣೆ ಸಮಾರಂಭ ಜ.26 ರ ಬೆಳಗ್ಗೆ 10.30ಕ್ಕೆ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ ಎಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷರಾದ ಮ.ಗು. ಸದಾನಂದಯ್ಯ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳ ಸಾನ್ನಿಧ್ಯದಲ್ಲಿ ಬೆಂಗಳೂರಿನ ಬಸವ ಸಮಿತಿ ಅಧ್ಯಕ್ಷರಾದ ಅರವಿಂದ ಜತ್ತಿ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಪ್ರಧಾನಮಂತ್ರಿ ಪ್ರಶಸ್ತಿ ಪುರಸ್ಕೃತ ಬೆಂಗಳೂರಿನ ರಿಷಿ ಶಿವಪ್ರಸನ್ನ ಬರೆದಿರುವ ಐದು ಕೃತಿಗಳನ್ನು ಡಾ.ಗೊ.ರು. ಚನ್ನಬಸಪ್ಪ ಲೋಕಾರ್ಪಣೆಗೊಳಿಸಲಿದ್ದಾರೆ ಎಂದರು. ನಂತರ ಸಮಾಜದಲ್ಲಿ ಗಣನೀಯ ಸೇವೆ ಸಲ್ಲಿಸುವವರಿಗೆ ನೀಡುವ 'ಕದಳಿ ಶ್ರೀ' ಪ್ರಶಸ್ತಿಯನ್ನು ಈ ಬಾರಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಬಿ.ಜಯಶ್ರೀ ಅವರಿಗೆ ಪ್ರದಾನ ಮಾಡಲಾಗುವುದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್‌ನ ನಗರ ಘಟಕದ ಅಧ್ಯಕ್ಷ ಡಾ.ಸಿ. ಸೋಮಶೇಖರ್ ಅಧ್ಯಕ್ಷತೆ ವಹಿಸುವರು. ರಿಷಿ ಶಿವಪ್ರಸನ್ನ, ಹೆಳವರ ಹುಂಡಿ ಸಿದ್ದಪ್ಪ ಹಾಗೂ ಶಾರದಾ ಶಿವಲಿಂಗಸ್ವಾಮಿ ಆಗಮಿಸಲಿದ್ದಾರೆ. ಸಂಜೆ 4ಕ್ಕೆ ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ನಟರಾಜ ಸ್ವಾಮೀಜಿ ಸಮ್ಮುಖ ವಹಿಸಲಿದ್ದು, ತಾವು ಸಮಾರೋಪ ನುಡಿ ಆಡುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆ ಕಾರ್ಯದರ್ಶಿ ವಾಗ್ದೇವಿ, ಶಾರದಾ ಶಿವಲಿಂಗ ಸ್ವಾಮಿ, ರಾಜೇಶ್ವರಿ ಮಲ್ಲಿಕಾರ್ಜುನ, ಶೈಲಾ ಸಿದ್ದರಾಮಪ್ಪ ಉಪಸ್ಥಿತರಿದ್ದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಶಾರದಾ ಶಿವಲಿಂಗಸ್ವಾಮಿ ಮಾತನಾಡಿದರು.

ಸಲಿಂಗಕಾಮದಿಂದ ಹೊರ ಬರುವ ಬಗೆ ಕಿರುಚಿತ್ರ ಬಿಡುಗಡೆ

ಮೈಸೂರು,ಜ.23(ಜಿಎ)–ಸಲಿಂಗ ಕಾಮದ ದುಷ್ಪರಿಣಾಮ ಹಾಗೂ ಅದರಿಂದ ಹೊರ ಬರುವ ಬಗೆ ಕುರಿತು ತಾವು ನಿರ್ಮಿಸಿರುವ 'ಡೋಂಟ್ ಟಚ್ ಮಿ' ಶೀರ್ಷಿಕೆಯ ಕಿರು ಚಿತ್ರವನ್ನು ತಾವು ಯೂಟ್ಯೂಬ್‌ನಲ್ಲಿ ಬಿಡುಗಡೆಗೊಳಿಸಿದ್ದು, ಆಸಕ್ತರು ವೀಕ್ಷಿಸಬೇಕೆಂದು ನಿರ್ದೇಶಕ ಪ್ರಕಾಶ್ ಮೈಸೂರು ಮನವಿ ಮಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಅನೇಕರು ಲೈಂಗಿಕ ಶೋಷಣೆಗೆ ಒಳಗಾಗುತ್ತಿದ್ದಾರೆ. ಇದಕ್ಕೆ ಅರಿವಿನ ಕೊರತೆ ಅಥವಾ ಕಿರುಕುಳ ಕಾರಣವಾಗಿರಬಹುದಾಗಿದೆ. ಇಂತಹವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಇದು ಅನೇಕ ಆರೋಗ್ಯ ಹಾಗೂ ಇನ್ನಿತರ ಸಮಸ್ಯೆಗಳಿಗೂ ಕಾರಣವಾಗುತ್ತಿದೆ. ಹೀಗಾಗಿ ಅರಿವು ಮೂಡಿಸಿ, ಈ ಸಮಸ್ಯೆಯಿಂದ ಹೊರ ಬರುವ ಮಾರ್ಗೋಪಾಯ ತಿಳಿಸುವ ನಿಟ್ಟಿನಲ್ಲಿ ಈ ಕಿರುಚಿತ್ರ ನಿರ್ಮಿಸಲಾಗಿದೆ. ಹೊಸಬೆಳಕು ಯೂಟ್ಯೂಬ್ ಚಾನಲ್‌ನಲ್ಲಿ ಚಿತ್ರ ಲಭ್ಯವಿದೆ(https://youtu.be/BJVIdMGIeaA) ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಪ್ರಕಾಶ್ ಮೈಸೂರು ಮಾತನಾಡಿದರು.

ಕಸಾಪದಿಂದ ಡಿ.ಲೀಟ್ ಪ್ರಶಸ್ತಿ ಪುರಸ್ಕೃತ ಡಾ.ಕೆ.ಲೀಲಾ ಪ್ರಕಾಶ್‌ಗೆ ಸನ್ಮಾನ

ಮೈಸೂರು,ಜ.23(ಜಿಎ)– ಬೆಂಗಳೂರಿನ ಎಸ್. ವ್ಯಾಸ ಯೋಗ ವಿಶ್ವ ವಿದ್ಯಾನಿಲಯದಿಂದ ಡಿ. ಲಿಟ್ ಪದವಿಗೆ ಭಾಜನರಾದ ಡಾ.ಕೆ. ಲೀಲಾ ಪ್ರಕಾಶ್ ಅವರನ್ನು ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನಿಸಲಾಯಿತು.

ಈ ವೇಳೆ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಮಾತನಾಡಿ, ಡಾ.ಕೆ. ಲೀಲಾ ಪ್ರಕಾಶ್ ಅವರು ಸ್ವತಃ ವಿದ್ವಾಂಸರಾಗಿದ್ದು, ಬರಹ, ಪ್ರಕಾಶನಗಳ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ. ಈಗ ಇವರಿಗೆ ಡಿ.ಲಿಟ್ ಗೌರವ ದೊರೆತಿರುವುದು ಸ್ವಾಗತಾರ್ಹವಾಗಿದೆ. ಇವರು ಗೃಹಿಣಿಯಾಗಿರುವುದಲ್ಲದೆ, ಸಮಾಜದ ಎಲ್ಲಾ ಸ್ಥರಗಳಿಗೆ ತೆರೆದುಕೊಂಡು ಸಾಹಿತ್ಯ ಮೊದಲಾದ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದ್ದಾರೆಂದರು. ಇದಕ್ಕೂ ಮೊದಲು ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್ ಮಾತನಾಡಿ, ಹೆಣ್ಣು ಮಕ್ಕಳಿಗೆ ಡಿಲಿಟ್ ಗೌರವ ದೊರಕುವುದು ತೀರಾ ವಿರಳ, ಹೀಗಾಗಿ ಇವರದು ಉತ್ತಮ ಸಾಧನೆಯಾಗಿದೆ. ಕುಟುಂಬದಲ್ಲಿ ಏಳನೇ ಹೆಣ್ಣು ಮಗುವಾಗಿ ಜನಿಸಿ ಬೈಗುಳಗಳನ್ನೇ ತಿಂದರೂ ಪತಿಯ ಸಹಕಾರದಿಂದ ವಿದ್ವತ್ ಕ್ಷೇತ್ರದಲ್ಲಿ ಉನ್ನತಕ್ಕೇರಿದ್ದಾರೆಂದು ಶ್ಲಾಘಿಸಿದರು. ನಂತರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಪದ್ಮ ಶೇಖರ್ ಮಾತನಾಡಿ, ಲೀಲಾ ಪ್ರಕಾಶ್ ಅವರು ಸಂಸ್ಕೃತಿಯ ರಾಯಬಾರಿಯಾಗಿದ್ದು, ದೇಶ–ವಿದೇಶಗಳಲ್ಲಿ ಅಧ್ಯಯನ ಮಾಡಿ ಅನೇಕ ಕೃತಿಗಳನ್ನು ಪರಿಚಯಿಸಿದ್ದಾರೆ. ಭಾರತೀಯ ಪರಂಪರೆಯಲ್ಲಿ ಹೆಣ್ಣನ್ನು ಪ್ರಕೃತಿಗೆ ಹೋಲಿಸುತ್ತಾರೋ ಹಾಗೇ ಹೆಣ್ಣು ತವರು ಮನೆ ಹಾಗೂ ಗಂಡನ ಮನೆಯಲ್ಲಿ ಎಲ್ಲವನ್ನು ತೂಗಿಸಿಕೊಂಡು ಹೋಗುತ್ತಾಳೆ. ಅವಳಿಗೆ ಮನೆಯ ಸಹಕಾರ ಬಹಳ ಮುಖ್ಯವಾಗಿರುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜಿ.ಪ್ರಕಾಶ್, ಮೈ.ನಾ. ಲೋಕೇಶ್, ಅನಂತ್ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಕಸಾಪದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಕೆ.ಲೀಲಾ ಪ್ರಕಾಶ್ ಅವರನ್ನು ಅಭಿನಂದಿಸಲಾಯಿತು. ಚಿತ್ರದಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್,ವಿಶ್ರಾಂತ ಕುಲಪತಿ ಡಾ.ಪದ್ಮ ಶೇಖರ್ ಮತ್ತಿತರರನ್ನು ಕಾಣಬಹುದು.

ಮೈಸೂರು ಮಿತ್ರ

ದೇವರಾಜ ಅರಸರ ಹೆಸರಿನಲ್ಲಿ ಹುಣಸೂರು ಜಿಲ್ಲೆಯಾಗಲಿ

ಪೂರ್ವಭಾವಿ ಸಭೆಯಲ್ಲಿ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್

ಹುಣಸೂರು, ಜ.23– ಭೂ ಸುಧಾರಣೆ ಕಾಯ್ದೆ ಮೂಲಕ ಬಡವರಿಗೆ 21 ಲಕ್ಷ ಎಕರೆ ಭೂಮಿ ನೀಡಿ ಭೂ ಮಾಲೀಕರನ್ನಾಗಿ ಮಾಡುವ ಮೂಲಕ ಅವರ ಬದುಕಿಗೆ ಆಸರೆಯಾದ ನಾಡಿನ ಧೀಮಂತ ನಾಯಕ ಮಾಜಿ ಮುಖ್ಯಮಂತ್ರಿ ದಿ.ಡಿ.ದೇವರಾಜ ಅರಸರ ಹೆಸರಿನಲ್ಲಿ ಹುಣಸೂರು ಜಿಲ್ಲಾ ಕೇಂದ್ರವಾಗಬೇಕು ಎಂದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಹುಣಸೂರನ್ನು ಜಿಲ್ಲಾ ಕೇಂದ್ರವಾಗಿಸುವ ಸಂಬಂಧ ಜಿಲ್ಲಾ ಹೋರಾಟ ಸಮಿತಿಯಿಂದ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಈ ಬಗ್ಗೆ 2018ರಲ್ಲೇ ನಾನು ಮತ್ತು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ದನಿ ಎತ್ತಿದ್ದೆವು. ಅರಸು ಜಿಲ್ಲೆ ಮಾಡಲು ಇಂದು ಚಾಲನೆ ದೊರೆತಿದೆ. ಹುಣಸೂರು ಸುತ್ತಮುತ್ತಲ 6 ತಾಲೂಕುಗಳ ಶಾಸಕರೊಂದಿಗೆ ಮಾತನಾಡಿ, ಎಲ್ಲರನ್ನೂ ಒಗ್ಗೂಡಿಸಿ ಸರ್ಕಾರದ ವಿಶ್ವಾಸದೊಂದಿಗೆ ಹುಣಸೂರನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಲು ಮುನ್ನಡೆಯೋಣ ಎಂದರು.



ಹುಣಸೂರಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಎಂಎಲ್‌ಸಿ ವಿಶ್ವನಾಥ್ ಮಾತನಾಡುತ್ತಿರುವುದು

ರಾಜ್ಯ ರಾಜಕೀಯ ಇತಿಹಾಸದಲ್ಲಿ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸರ ಹೆಸರು ಅಜರಾಮರ. ದೇವರಾಜ ಅರಸರು ಉಳುವವನೆ ಭೂಮಿ ಒಡೆಯ, ಜೀತ ವಿಮುಕ್ತಿ ಕಾಯ್ದೆ ಇನ್ನಿತರ ಸಮಾಜ ಮುಖಿ ಯೋಜನೆಗಳನ್ನು ಜಾರಿಗೊಳಿಸಿ ದನಿ ಇಲ್ಲದ ಶೋಷಿತ ವರ್ಗದವರ ದನಿಯಾದ ಸಮಾನತೆಯ ಹರಿಕಾರ. ಹೀಗಾಗಿ ಅವರ ಹೆಸರಿನಲ್ಲಿ ಹುಣಸೂರನ್ನು ಅರಸು ಜಿಲ್ಲೆಯನ್ನಾಗಿ ಘೋಷಿಸುವಂತೆ ಸರ್ಕಾರದ ಗಮನ ಸೆಳೆಯಲು ಆಂದೋಲನ ಅಗತ್ಯ. ಈ ಸಂಬಂಧ 26 ಪುಟಗಳ ಮನವಿಯನ್ನು ಜ.26ರಂದು ಸರ್ಕಾರಕ್ಕೆ ಉಪವಿಭಾಗಾಧಿಕಾರಿಗಳ ಮೂಲಕ ಸಲ್ಲಿಸಲಾಗುವುದು ಎಂದರು.

ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಸರ್ಕಾರದ ಸವಲತ್ತುಗಳು ಸಾಮಾನ್ಯ ಜನರಿಗೆ ತಲುಪಲು ಹಾಗೂ ಸರ್ಕಾರದ ಕೆಲಸಗಳು ಸುಲಲಿತವಾಗಿ ನಡೆಯಲು ಅಧಿಕಾರ ವಿಕೇಂದ್ರೀಕರಣವಾಗಬೇಕು. ಆಗ ಮಾತ್ರ ಉತ್ತಮ ಆಡಳಿತ ನೀಡಲು ಸಾಧ್ಯ ಹೀಗಾಗಿ ಸರ್ಕಾರ ಹುಣಸೂರನ್ನು ಜಿಲ್ಲಾ ಕೇಂದ್ರವಾಗಿ ಘೋಷಿಸಬೇಕು ಎಂದು ಒತ್ತಾಯಿಸಿದರು.

ನಮ್ಮ ಹೆಮ್ಮೆಯ ಹುಣಸೂರು ತಾಲೂಕು ಸಾಹಿತ್ಯ, ಸಂಸ್ಕೃತಿ, ವಾಣಿಜ್ಯ, ಉದ್ಯಮ, ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಮುಂದುವರೆದಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಸುತ್ತಮುತ್ತಲ ತಾಲೂಕು ಕೇಂದ್ರಗಳನ್ನು ಒಳಗೊಂಡಂತೆ ಹುಣಸೂರು ಜಿಲ್ಲಾ ಕೇಂದ್ರವಾದರೆ ನಮ್ಮೆಲ್ಲರಿಗೂ ಸಂತಸವಾಗುತ್ತದೆ ಎಂದರು.

> ರಾಜ್ಯದ ಯಾವುದೇ ತಾಲೂಕಿನಲ್ಲಿ ಇಲ್ಲದ ಜಿಟಿಟಿಎಸ್ ತರಬೇತಿ ಕೇಂದ್ರ ಹುಣಸೂರಿನಲ್ಲಿದೆ. ಈ ಹಿಂದೆ ಹುಣಸೂರು ತಾಲೂಕಿನಲ್ಲಿದ್ದ 30 ಗ್ರಾಪಂಗಳನ್ನು ಪುನರ್ ವಿಂಗಡಣೆ ಮಾಡಿ 41 ಗ್ರಾಪಂಗಳನ್ನಾಗಿ ಅಧಿಕಾರ ವಿಕೇಂದ್ರೀಕರಣ ಮಾಡಲಾಯಿತು. ಇಲ್ಲಿನ ಕೆಲಸಗಳ ಅನುಮೋದನೆಗಾಗಿ ಮೈಸೂರಿಗೆ ಅಲೆದಾಡಬೇಕು. ಇದರಿಂದ ಕೆಲಸ ಕಾರ್ಯಗಳು ವಿಳಂಬವಾಗುತ್ತಿವೆ. ಹೀಗಾಗಿ ಅಧಿಕಾರ ವಿಕೇಂದ್ರೀಕರಣ ಮಾಡಿ ಹುಣಸೂರು ಜಿಲ್ಲಾ ಕೇಂದ್ರವಾದರೆ ಎಲ್ಲಾ ಕೆಲಸಗಳಿಗೂ ವೇಗ ದೊರೆಯುತ್ತದೆ.
>
> – **ಹೆಚ್.ಪಿ.ಮಂಜುನಾಥ್**, ಮಾಜಿ ಶಾಸಕ

ವಿಶಿಷ್ಟ ತಾಣವಾಗಿರುವ ಹುಣಸೂರು ನಗರದಲ್ಲಿ ಈಗಾಗಲೇ ನಗರಸಭೆ, ನಗರ ಯೋಜನಾ ಪ್ರಾಧಿಕಾರ ಕಾರ್ಯ ನಿರ್ವಹಿಸುತ್ತಿದ್ದು, ಜಿಲ್ಲಾ ಕೇಂದ್ರಕ್ಕೆ ಬೇಕಾದ ಎಲ್ಲಾ ರೀತಿಯ ಪೂರಕ ವ್ಯವಸ್ಥೆ ಲಭ್ಯವಿದೆ. ಹೀಗಾಗಿ ಪಕ್ಷಾತೀತವಾಗಿ ಜನಪ್ರತಿನಿಧಿಗಳು, ಸಂಘ ಸಂಸ್ಥೆ ಮುಖಂಡರು ಸೇರಿದಂತೆ ಎಲ್ಲರೂ ಹುಣಸೂರನ್ನು ಜಿಲ್ಲಾ ಕೇಂದ್ರ ಮಾಡಲು ಸರ್ಕಾರವನ್ನು ಒತ್ತಾಯಿಸಬೇಕು ಎಂದರು.

ಸಭೆಯಲ್ಲಿ ದಲಿತ ಮುಖಂಡ ಹರಿಹರ ಆನಂದಸ್ವಾಮಿ, ಸತ್ಯ ಫೌಂಡೇಷನ್ ಅಧ್ಯಕ್ಷ ಸತ್ಯಪ್ಪ ಸೇರಿದಂತೆ ಅನೇಕರು ತಮ್ಮ ಸಲಹೆ ನೀಡಿದರು. ಮಾಜಿ ಜಿಪಂ ಸದಸ್ಯರಾದ ನಾಗರಾಜ್ ಮಲ್ಲಾಡಿ, ಸೋಮಶೇಖರ್, ನಗರಸಭಾ ಮಾಜಿ ಅಧ್ಯಕ್ಷೆ ಗೀತಾ, ಮಾಜಿ ಜಿಪಂ ಸದಸ್ಯರಾದ ಡಿ.ಕೆ.ಕುನ್ನೆಗೌಡ, ಅರಸು ಅಭಿಮಾನಿ ಸಂಘದ ರಾಜು, ಚಿಕ್ಕಸ್ವಾಮಿ, ಬಸವರಾಜು, ಮಂಜಣ್ಣ, ಮಾಜಿ ಜಿಪಂ ಸದಸ್ಯರಾದ ಹೆಚ್.ಎಂ.ಫಜಲುಲ್ಲಾ, ನಗರಸಭೆ ಸದಸ್ಯ ಗಣೇಶ್ ಕುಮಾರಸ್ವಾಮಿ, ಗಣೇಶ್ ಕರಿಯಪ್ಪಗೌಡ, ನಗರಸಭಾ ಮಾಜಿ ಅಧ್ಯಕ್ಷ ಹೆಚ್.ವೈ.ಮಹದೇವ್ ಸೇರಿದಂತೆ ಇನ್ನಿತರರಿದ್ದರು.

ಶೋಷಿತರ ಸ್ಥಿತಿ ಅರ್ಥಮಾಡಿಕೊಳ್ಳಲು ಜಾತಿಗಣತಿ ತುಂಬಾ ಅವಶ್ಯಕವಾಗಿದೆ

ಹಿಂದುಳಿದ ಶಾಶ್ವತ ಆಯೋಗದ ಮಾಜಿ ಸದಸ್ಯ ಕೆ.ಎನ್.ಲಿಂಗಪ್ಪ



ಹೆಚ್.ಡಿ.ಕೋಟೆಯ ಅಂಬೇಡ್ಕರ್ ಭವನದಲ್ಲಿ ದಸಂಸ ಸರ್ವ ಸದಸ್ಯರ ಸಭೆ ನಡೆಯಿತು.

ಹೆಚ್.ಡಿ.ಕೋಟೆ ಜ.23– ಉಳ್ಳವರ ಸಂಪತ್ತು ಬಹಿರಂಗವಾಗುತ್ತದೆ ಎಂಬ ಕಾರಣಕ್ಕೆ ಜಾತಿ ಗಣತಿ ಕೈ ಬಿಡಲಾಗುತ್ತಿದೆ ಎಂದು ಹಿಂದುಳಿದ ಶಾಶ್ವತ ಆಯೋಗದ ಮಾಜಿ ಸದಸ್ಯ ಕೆ.ಎನ್.ಲಿಂಗಪ್ಪ ಆರೋಪಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆದ ದಸಂಸ ಸರ್ವ ಸದಸ್ಯರ ಸಭೆಯಲ್ಲಿ ಹಿಂದುಳಿದ ವರ್ಗಗಳ ಜಾತಿ ಗಣತಿ ವಿಚಾರವಾಗಿ ವಿಚಾರ ಮಂಡಿಸಿ ಮಾತನಾಡಿದ ಅವರು, ಸಮಾಜದಲ್ಲಿರುವ ಶೋಷಿತ ಸಮುದಾಯಗಳ ಸ್ಥಿತಿ ಅರ್ಥ ಮಾಡಿಕೊಳ್ಳಲು ಜಾತಿ ಆಧ'ರಿತ ಜನಗಣತಿ ಮಾಡಬೇಕು. ಅಂಬೇಡ್ಕರ್ ಅವರನ್ನು ಇಂದಿಗೂ ಹಿಂದುಳಿದ ವರ್ಗಗಳು ಅರ್ಥ ಮಾಡಿಕೊಂಡಿಲ್ಲ. ಕೆಲವೇ ಕೆಲವು ಮಂದಿ ಮಾತ್ರ ಅವರನ್ನು ಅರ್ಥ ಮಾಡಿಕೊಂಡಿದ್ದಾರೆ ಎಂದರು.

ಹಿಂದುಳಿದ ವರ್ಗಗಳಿಗೆ ಜಾತಿ ಪ್ರಜ್ಞೆ ಇದೆ ಹೊರತು ವರ್ಗ ಪ್ರಜ್ಞೆ ಇಲ್ಲ. ಶ್ರೇಣೀಕೃತ ವ್ಯವಸ್ಥೆಯಲ್ಲಿ ಇಂದಿಗೂ ತಳ ಸಮುದಾಯಗಳು ತುಳಿತಕ್ಕೆ ಒಳಗಾಗಿವೆ. ರಾಜಕೀಯ ಕಾರಣಕ್ಕೆ ರಾಜ್ಯದಲ್ಲಿ 2 ಪ್ರಬಲ ಜಾತಿಗಳು ಜಾತಿ ಗಣತಿ ವಿರೋಧಿಸುತ್ತಿವೆ. ಜಾತಿ ಪರಿಕಲ್ಪನೆ ಋಗ್ವೇದ ಕಾಲದಲ್ಲಿ ಪ್ರಾರಂಭವಾಗಿದ್ದು, ವರ್ಣಾಶ್ರಮ ಕಾಲ ಕ್ರಮೇಣ ಜಾತಿಯಾಗಿ ಪರಿವರ್ತನೆಯಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ದಸಂಸ ಜಿಲ್ಲಾ ಸಂಚಾಲಕ ನೂತನ ಪದಾಧಿಕಾರಿಗಳಿಗೆ ಪ್ರಮಾಣ ವಚನ ಬೋಧಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸಂಘಟನಾ ಸಂಚಾಲಕರಾದ ಶಿವಕುಮಾರ್, ನಿಂಗರಾಜು, ಶಂಭುಲಿಂಗಸ್ವಾಮಿ, ಬಿ.ಡಿ.ಶಿವಬುದ್ಧಿ, ಮುತ್ತು ದಾಸಯ್ಯ, ಮಹೇಶ, ಸಿದ್ದರಾಜು, ಕುಮಾರ್, ಶಿವಶಂಕರ್, ಸೋಮಶೇಖರ್, ರಾಜಶೇಖರ, ಪುಟ್ಟರಾಜು ಇದ್ದರು.

ಕ್ರೀಡಾಪಟುಗಳ ಉತ್ತೇಜನಕ್ಕಾಗಿ ಕ್ರೀಡಾಕೂಟ ಆಯೋಜಿಸಿ

ಪುರಸಭಾ ಸದಸ್ಯ ಆರ್.ಅರ್ಜುನ್ ಸಲಹೆ

ತಿ.ನರಸೀಪುರ ಜ.23– ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಿನ್ನೆಲೆ ಹೊಂದಿರುವ ತಿ.ನರಸೀಪುರ ಪ್ರಮುಖ ಕ್ರೀಡಾ ಕ್ಷೇತ್ರವಾಗಿ ಗುರುತಿಸಿಕೊಳ್ಳಲು ಹಾಗೂ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಕ್ರೀಡಾಪಟುಗಳನ್ನು ಉತ್ತೇಜಿಸಲು ತಾಲೂಕು ಮಟ್ಟದಲ್ಲಿ ರಾಜ್ಯ ಮಟ್ಟದ ಕ್ರೀಡಾಕೂಟಗಳನ್ನು ಹೆಚ್ಚಾಗಿ ಆಯೋಜಿಸಬೇಕು ಎಂದು ಪುರಸಭಾ ಸದಸ್ಯ ಆರ್.ಅರ್ಜುನ್ ತಿಳಿಸಿದರು.

ಶ್ರೀವೆಂಕಟೇಶ್ವರ ಗ್ರಾಮೀಣಾಭಿವೃದ್ಧಿ ಟ್ರಸ್ಟ್ ಮತ್ತು ಕಾವೇರಿ ಸ್ಪೋರ್ಟ್ಸ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಪಟ್ಟಣದ ಎಪಿಎಂಸಿ ಆವರಣದಲ್ಲಿ ಜ.27 ರಿಂದ 2 ದಿನಗಳ ಕಾಲ ನಡೆಯುವ ಜಿಲ್ಲಾ ಮಟ್ಟದ ಪುರುಷರ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಐತಿಹಾಸಿಕ ಕುರುಹುಗಳನ್ನು ಒಳಗೊಂಡಿರುವ ನರಸೀಪುರ ತಾಲೂಕು ಸಾಂಸ್ಕೃತಿಕವಾಗಿ ಹೆಸರು ಗಳಿಸಿದೆ. ನಮ್ಮೆಲ್ಲರ ಹೆಮ್ಮೆಯ ಊರನ್ನು ಪ್ರಮುಖ ಕ್ರೀಡಾ ಕ್ಷೇತ್ರವಾಗಿ ಅಭಿವೃದ್ಧಿಪಡಿಸಲು ಹೆಚ್ಚಿನ ಕ್ರೀಡಾಕೂಟ ಪ್ರತಿ ವರ್ಷ ನಡೆಯಬೇಕು ಎಂದರು.

ತಾಲೂಕು ಕೇಂದ್ರ ನರಸೀಪುರದಲ್ಲಿ ಸಿ.ಡಿ.ವೆಂಕಟೇಶ್ ಮತ್ತು ಸ್ನೇಹಿತರ ತಂಡ ಜಿಲ್ಲಾ ಮಟ್ಟದ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ ಆಯೋಜಿಸಿದ್ದಾರೆ. ಪಂದ್ಯಾವಳಿ ಯಶಸ್ವಿಯಾಗಿ ನಡೆಯಲು ನಾವೆಲ್ಲರೂ ಸಹಕರಿಸೋಣ ಎಂದರು.

ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಸಿ.ಡಿ.ವೆಂಕಟೇಶ್ ಮಾತನಾಡಿ, ಪಂದ್ಯಾವಳಿಯ ವಿಜೇತರಿಗೆ ಪ್ರಥಮ 25 ಸಾವಿರ, ದ್ವಿತೀಯ 15 ಸಾವಿರ, ತೃತೀಯ 10 ಸಾವಿರ ಹಾಗೂ ನಾಲ್ಕನೇ ಬಹುಮಾನವಾಗಿ 5 ಸಾವಿರ ರೂ. ಹಾಗೂ ಟ್ರೋಫಿ ವಿತರಿಸಲಾಗುವುದು. ಪಂದ್ಯಾವಳಿಯಲ್ಲಿ ಭಾಗವಹಿಸಿದ ಕ್ರೀಡಾಪಟುಗಳಿಗೆ ಬೆಸ್ಟ್ ಬ್ಲಾಕರ್, ಬೆಸ್ಟ್ ಲಿಫ್ಟರ್, ಬೆಸ್ಟ್ ಲಿಬ್ರೋ ಹಾಗೂ ಬೆಸ್ಟ್ ಆಲ್‌ರೌಂಡರ್ ಪಾರಿತೋಷಕ ಪ್ರದಾನ ಮಾಡಲಾಗುವುದು. ಆಸಕ್ತ ತಂಡಗಳು ಹೆಸರನ್ನು ನೋಂದಾಯಿಸಲು ಮೊ. 8747932831, 9845170495 ಸಂಪರ್ಕಿಸುವಂತೆ ತಿಳಿಸಿದರು. ಈ ವೇಳೆ ತಾಪಂ ಮಾಜಿ ಸದಸ್ಯ ಬಿ.ಎಲ್.ಮಹದೇವ ಇನ್ನಿತರರಿದ್ದರು.



ತಿ.ನರಸೀಪುರದಲ್ಲಿ ಜಿಲ್ಲಾ ಮಟ್ಟದ ಪುರುಷರ ಹೊನಲು ಬೆಳಕಿನ ವಾಲಿಬಾಲ್ ಪಂದ್ಯಾವಳಿ ಪೋಸ್ಟರ್ ಅನ್ನು ಪುರಸಭೆ ಸದಸ್ಯ ಆರ್.ಅರ್ಜುನ್ ಬಿಡುಗಡೆಗೊಳಿಸಿದರು.

ಇಂದು ಏತ ನೀರಾವರಿ ಯೋಜನೆಗೆ ಸಿಎಂ ಚಾಲನೆ

ಬೈಲಕುಪ್ಪೆ, ಜ.23– ಕಾವೇರಿ ನದಿಯಿಂದ ಪಿರಿಯಾಪಟ್ಟಣ ತಾಲೂಕಿನ 79 ಗ್ರಾಮಗಳ 150 ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಗೆ ಜ.24ರಂದು ಬೆಳಗ್ಗೆ 11.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ.

ಕಾರ್ಯಕ್ರಮಕ್ಕಾಗಿ ಬೈಲಕುಪ್ಪೆಯ ಭಾರತ್ ಮಾತಾ ಶಾಲಾ ಮುಂಭಾಗದ ಮೈದಾನದಲ್ಲಿ ವೇದಿಕೆ ಸಿದ್ಧವಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಸಚಿವ ಕೆ.ವೆಂಕಟೇಶ್, ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಬೋಸರಾಜ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ಜಿಲ್ಲಾಧಿಕಾರಿ ರಾಜೇಂದ್ರ ಸೇರಿದಂತೆ ಗಣ್ಯರು ಭಾಗವಹಿಸಲಿದ್ದಾರೆ.



ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ನಂಜನಗೂಡು ತಾಲೂಕಿನ ಕಳಲೆ ಗ್ರಾಮದ ಶ್ರೀರಾಮಮಂದಿರದಲ್ಲಿ ವಿಶೇಷ ಪೂಜೆ ಏರ್ಪಡಿಸಲಾಗಿತ್ತು. ಈ ವೇಳೆ ಲಕ್ಷ್ಮಿಕಾಂತ ದೇವಾಲಯದ ಪಾರುಪತ್ತೇದಾರ ಜಯರಾಮ್, ಅರವಿಂದ, ನಾಯಕಿ ಮಹಿಳಾ ಸಂಘದ ಸದಸ್ಯರು ಮತ್ತು ಗ್ರಾಮಸ್ಥರು ಉಪಸ್ಥಿತರಿದ್ದರು.



ಸರಗೂರು ತಾಲೂಕಿನ ಎನ್.ಬೇಗೂರು ಗ್ರಾಮದಲ್ಲಿ ಬಾಕಲವಾಡಿ ಬಸವೇಶ್ವರ ಜಾತ್ರಾ ಮಹೋತ್ಸವದ ಕೊಂಡೋತ್ಸವ ವಿಜೃಂಭಣೆಯಿಂದ ನಡೆಯಿತು. ಈ ವೇಳೆ ಬಸವೇಶ್ವರ ಸೇವಾ ಸಮಿತಿ ಅಧ್ಯಕ್ಷ ಗುರುಮಲ್ಲಪ್ಪ, ಕಾರ್ಯದರ್ಶಿ ಮರಡೇಶ್, ಸದಸ್ಯ ರವಿ, ಸುರೇಶ್, ನಂಜಪ್ಪ, ಬೆಟ್ಟಸ್ವಾಮಿ, ಬಿ.ಟಿ.ನರಸಿಂಹಮೂರ್ತಿ, ಹನುಮಂತಯ್ಯ ಮರಯ್ಯ, ಶಿವಣ್ಣ, ಪುಟ್ಟಣ್ಣಚಾರ್, ಪ್ರಕಾಶ್, ಗಣೇಶ್, ಶಿವಣ್ಣನಾಯಕ ಇನ್ನಿತರರಿದ್ದರು.

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆ

ಚುಂಚನಕಟ್ಟೆ ಶ್ರೀರಾಮ ದೇವಾಲಯದಲ್ಲಿ ವಿಶೇಷ ಪೂಜೆ

ಚುಂಚನಕಟ್ಟೆ, ಜ.23– ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯ ಶ್ರೀರಾಮ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆಯಿತು.

ಇಲ್ಲಿನ ಶ್ರೀರಾಮ ದೇವಾಲಯದಲ್ಲಿ ಮುಂಜಾನೆಯಿಂದಲೇ ಶ್ರೀರಾಮ, ಲಕ್ಷ್ಮಣ ಹಾಗೂ ಸೀತಮ್ಮನ ಮೂಲ ಮೂರ್ತಿಗಳಿಗೆ ಪಂಚಾಮೃತ, ಹಾಲು, ಮೊಸರು, ಅರಿಶಿನ, ಕುಂಕುಮ, ಎಳನೀರಿನ ಅಭಿಷೇಕ, ಕಾವೇರಿ ನೀರಿನಿಂದ ಜಲಾಭಿಷೇಕ ನೆರವೇರಿಸಲಾಯಿತು. ಬಳಿಕ ಬಗೆ ಬಗೆಯ ಹೂಗಳಿಂದ ಅಲಂಕರಿಸಿ ಮಹಾಮಂಗಳಾರತಿ ನೆರವೇರಿಸಿ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಈ ವೇಳೆ ಜಿಲ್ಲೆ ಹಾಗೂ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದರು.



ದೇವರ ದರ್ಶನಕ್ಕೆ ಸರತಿ ಸಾಲಿನಲ್ಲಿ ನಿಂತಿರುವ ಭಕ್ತರು

ಇದೇ ವೇಳೆ ಅಲಂಕೃತಗೊಂಡ ಶ್ರೀರಾಮ, ಲಕ್ಷ್ಮಣ ಹಾಗೂ ಸೀತಾ ಮಾತೆಯ ಉತ್ಸವ ಮೂರ್ತಿಗಳನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಿ ಭಕ್ತರ ಸಮ್ಮುಖದಲ್ಲಿ ದೇವಾಲಯದ ಸುತ್ತ ಪ್ರದಕ್ಷಿಣೆ ಹಾಕಲಾಯಿತು. ಈ ವೇಳೆ ಭಕ್ತರು ಗೋವಿಂದಾ, ಗೋಪಾಲ ಎಂಬ ಜೈಕಾರ ಕೂಗಿದರು.

ಇದೇ ವೇಳೆ ದೇವಾಲಯಕ್ಕೆ ಶ್ರೀರಾಮ, ಲಕ್ಷ್ಮಣ ಹಾಗೂ ಸೀತೆಯ ವೇಷ ಧರಿಸಿ ಆಗಮಿಸಿದ್ದ ಮಕ್ಕಳು ಎಲ್ಲರ ಗಮನ ಸೆಳೆದರು. ಅಷ್ಟೇ ಅಲ್ಲದೇ ಕೆಲವರು ಸೆಲ್ಫಿಗೆ ಮುಗಿಬೀಳುತ್ತಿದ್ದ ದೃಶ್ಯ ಕಂಡುಬಂತು. ಈ ವೇಳೆ ದೇವಾಲಯದ ಇಓ ರಘು, ಪಾರುಪತ್ತೇದಾರ ಯತಿರಾಜು, ಅರ್ಚಕರಾದ ನಾರಾಯಣ ಅಯ್ಯಂಗಾರ್, ವಾಸುದೇವನ್ ಸೇರಿದಂತೆ ಮತ್ತಿತರರಿದ್ದರು.

ವಿವಿಧೆಡೆ ಪೂಜೆ: ಚುಂಚನಕಟ್ಟೆ ಹೋಬಳಿಯಾದ್ಯಂತ ದೇಗುಲ ಹಾಗೂ ಮುಖ್ಯ ರಸ್ತೆಗಳಲ್ಲಿ ಗ್ರಾಮದ ಮುಖಂಡರು ಹಾಗೂ ಯುವಕರು ಶ್ರೀರಾಮನ ಭಾವಚಿತ್ರ ಇಟ್ಟು ಪೂಜೆ ಸಲ್ಲಿಸಿ ಸಾರ್ವಜನಿಕರಿಗೆ ಮಜ್ಜಿಗೆ, ಪಾನಕ, ಕೋಸಂಬರಿ, ಬಾತ್ ಸೇರಿದಂತೆ ವಿವಿಧ ಬಗೆಯ ಪ್ರಸಾದ ವಿತರಿಸಿದರು.

ಹಸಿದವರಿಗೆ ಅನ್ನ ನೀಡುವ ಕಾಯಕ ಶ್ರೇಷ್ಠ : ವಾಟಾಳು ಶ್ರೀ



ತಿ.ನರಸೀಪುರದ ಶ್ರೀಗುಂಜಾನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ನೂತನ ದಾಸೋಹ ಭವನವನ್ನು ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್ ಲೋಕಾರ್ಪಣೆಗೊಳಿಸಿದರು.

ತಿ.ನರಸೀಪುರ, ಜ.23– ಹಸಿದವರಿಗೆ ಅನ್ನ ನೀಡುವ ಕಾಯಕ ಶ್ರೇಷ್ಠವಾದದ್ದು ಎಂದು ವಾಟಾಳು ಸೂರ್ಯ ಸಿಂಹಾಸನ ಮಠದ ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಶ್ರೀಗುಂಜಾನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಉದ್ಯಮಿ ಕೆ.ವಾಸುದೇವ್ ತಮ್ಮ ಸ್ವಂತ ಖರ್ಚಿನಲ್ಲಿ ನಿರ್ಮಿಸಿರುವ ದಾಸೋಹ ಭವನ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಪಟ್ಟಣದ ಶ್ರೀಗುಂಜಾನರಸಿಂಹಸ್ವಾಮಿ ದೇವಾಲಯಕ್ಕೆ ನಿತ್ಯ ಸಾವಿರಾರು ಭಕ್ತರು ಭೇಟಿ ನೀಡಿ, ದೇವರ ದರ್ಶನ ಪಡೆದು ಪ್ರಸಾದ ಸ್ವೀಕರಿಸುತ್ತಾರೆ. ಆದರೆ ದಾಸೋಹದ ವ್ಯವಸ್ಥೆ ಇರಲಿಲ್ಲ. ಪ್ರಸ್ತುತ ಎಲ್ಲಾ ದೇವಾಲಯಗಳಲ್ಲೂ ದಾಸೋಹ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಹಾಗಾಗಿ ಇಲ್ಲಿಯೂ ದಾಸೋಹ ಭವನ ನಿರ್ಮಿಸಿರುವುದರಿಂದ ಭಕ್ತರಿಗೆ ಅನುಕೂಲವಾಗಲಿದೆ. ಇಂದು ಆರಂಭಗೊಂಡಿರುವ ದಾಸೋಹ ಯಾವುದೇ ಕಾರಣಕ್ಕೂ ನಿಲ್ಲಬಾರದು. ಹಣವನ್ನು ಕೆಲಸಕ್ಕೆ ಬಾರದ ಉದ್ದೇಶಗಳಿಗೆ ಖರ್ಚು ಮಾಡುವ ಬದಲು ದಾಸೋಹಕ್ಕೆ ವ್ಯಯಿಸಿದರೆ ಅದರ ಉದ್ದೇಶ ಸಾರ್ಥಕವಾಗುತ್ತದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ತಹಸೀಲ್ದಾರ್ ಟಿ.ಜಿ.ಸುರೇಶ್ ಆಚಾರ್, ದೇವಸ್ಥಾನ, ಮಠಗಳಲ್ಲಿ ಪ್ರಸಾದ ವಿತರಿಸುವುದು ನಮ್ಮ ಸಂಪ್ರದಾಯವಾಗಿದ್ದು, ಅದನ್ನು ಮುಂದುವರೆಸಲು ದಾಸೋಹ ಭವನ ನಿರ್ಮಿಸಲಾಗಿದೆ. ಕೆ.ವಾಸುದೇವ್ ಈ ಪುಣ್ಯ ಕೆಲಸದಿಂದ ಇತರರಿಗೆ ಮಾದರಿಯಾಗಿದ್ದಾರೆ. ನಾವು ಮನುಷ್ಯರಲ್ಲಿ 3 ವಿಧಗಳನ್ನು ಗುರುತಿಸಬಹುದಾಗಿದೆ. ಸಂಪತ್ತಿದ್ದು ಕೊಡಲು ಮನಸ್ಸಿಲ್ಲದವರು, ಕೊಡಲು ಮನಸ್ಸಿದ್ದು ಸಂಪತ್ತಿಲ್ಲದೇ ಇರುವವರು ಹಾಗೂ ಸಂಪತ್ತು, ಮನಸ್ಸು ಎರಡೂ ಇರುವವರು, ಇದರಲ್ಲಿ ಸಂಪತ್ತು ಹಾಗೂ ಕೊಡಲು ಮನಸ್ಸಿರುವವರು ವಿರಳವಾಗಿದ್ದಾರೆ. ಹಾಗಾಗಿ ನಾವೆಲ್ಲರೂ ಹೆಚ್ಚಿನ ಪ್ರಮಾಣದಲ್ಲಿ ಸಹಾಯ ಮಾಡದಿದ್ದರೂ ನಮ್ಮ ಕೈಲಾದಷ್ಟು ಸಮಾಜದ ಒಳಿತಿಗೆ ಕೊಡುವಂತಹ ಔದಾರ್ಯ, ಮನಸ್ಥಿತಿ ಬೆಳೆಸಿಕೊಳ್ಳಬೇಕಿದೆ ಎಂದರು.

ಪುರಸಭೆ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ತಾಪಂ ಇಓ ಸಿ.ಕೃಷ್ಣ, ಕಸಾಪ ಅಧ್ಯಕ್ಷ ಪುಟ್ಟಸ್ವಾಮಿ, ಎಂ.ವಿ.ಶಿವಶಂಕರ್ ಮೂರ್ತಿ, ಪುರಸಭೆ ಅಧಿಕಾರಿ ಮಧು, ಪುಳ್ಳಾರಿಗೌಡ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ತೋಂಟೇಶ್, ವಕೀಲ ಜ್ಞಾನೇಂದ್ರ ಮೂರ್ತಿ, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಹೇಶ್, ಪಿಎಸಿಎಸ್ ಅಧ್ಯಕ್ಷ ಮಲ್ಲಣ್ಣ ನಿರ್ದೇಶಕ ಫಣೀಶ್‌ಕುಮಾರ್, ನಗದು ಗುಮಾಸ್ತ ಶಿವಕುಮಾರ್, ತಿರುಮಕೂಡಲು ಲಕ್ಷ್ಮಣ, ಪುರಸಭೆ ಮಾಜಿ ಸದಸ್ಯ ಶ್ರೀರಾಂಪುರ ಪ್ರಕಾಶ್ ಸೇರಿದಂತೆ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗುಂಟೂರು ಖಾರಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಹನುಮಾನ್(ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಟೇರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ರಂಗಸಮುದ್ರ (ಕ)	4 ಪ್ರದರ್ಶನಗಳು
ರಾಜಕಮಲ್	
ಹನುಮಾನ್ (ಹಿ)	4 ಪ್ರದರ್ಶನಗಳು
ಸಂಗಂ	
ಹನುಮಾನ್ (ಕ)	4 ಪ್ರದರ್ಶನಗಳು
ಲಿಡೋ	
ಹನುಮಾನ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಆಯಲನ್ (ತ)	4 ಪ್ರದರ್ಶನಗಳು
ಪ್ರಭಾ	
ಗುಂಟೂರು ಖಾರಂ(ತೆ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9.05ಕ್ಕೆ, ಮ.3.50ಕ್ಕೆ, ಕಾಟೇರ (ಕ): ಮ.12.15ಕ್ಕೆ, ರಾ.7ಕ್ಕೆ, ರಾ.10.25ಕ್ಕೆ.
ಸ್ಕ್ರೀನ್ 2	ಆಯಲಾನ್ (ತ): ಬೆ.10ಕ್ಕೆ, ಸಂ.4.05ಕ್ಕೆ, ಮೇರಿ ಕ್ರಿಸ್‌ಮಸ್ (ತ): ಮ.1.10ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.15ಕ್ಕೆ, ಅಬ್ರಾಹಂ ಓಜ್ಲರ್ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಕ್ಯಾಪ್ಟನ್ ಮಿಲ್ಲರ್ (ಕ): ಬೆ.9.55ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.1ಕ್ಕೆ, ರಾ.10.20ಕ್ಕೆ, ಹನುಮಾನ್ (ತೆ): ಸಂ.4.05ಕ್ಕೆ, ರಾ.7.10ಕ್ಕೆ.
ಸ್ಕ್ರೀನ್ 4	ಕಾಟೇರ (ಕ): ಬೆ.9.35ಕ್ಕೆ ಗುಂಟೂರು ಕಾರಂ (ತೆ): ಮ.1ಕ್ಕೆ, ರಾ.7.15ಕ್ಕೆ, ರಾ.10.25ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಸಂ.4.10ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಗುಂಟೂರು ಕಾರಂ (ತೆ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಮೇರಿ ಕ್ರಿಸ್‌ಮಸ್ (ಹಿಂ): ಬೆ.8.55ಕ್ಕೆ, ಕಾಟೇರ (ಕ): ಬೆ.11.50ಕ್ಕೆ, ಸಂ.6.50ಕ್ಕೆ, ರಾ.10.30ಕ್ಕೆ, ಆಯಲಾನ್ (ತ): ಮ.3.30ಕ್ಕೆ.
ಸ್ಕ್ರೀನ್ 3	ಕಾಟೇರ (ಕ): ಬೆ.8.50ಕ್ಕೆ, ಕ್ಯಾಪ್ಟನ್ ಮಿಲ್ಲರ್ (ತ): ಮ.12.25ಕ್ಕೆ, ರಾ.10.10ಕ್ಕೆ, ಕ್ಯಾಪ್ಟನ್ ಮಿಲ್ಲರ್ (ಕ): ಮ.3.45ಕ್ಕೆ, ಮೇರಿ ಕ್ರಿಸ್‌ಮಸ್ (ಹಿಂ): ರಾ.7.05ಕ್ಕೆ.
ಸ್ಕ್ರೀನ್ 4	ಸೈಂಧವ್ (ತೆ): ಬೆ.9.10ಕ್ಕೆ, ಮ.3.35ಕ್ಕೆ, ಹನುಮಾನ್ (ತೆ): ಮ.12.10ಕ್ಕೆ, ರಾ.10ಕ್ಕೆ, ಆಯಲಾನ್ (ತ): ಸಂ.6.40ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮ ಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅಕ್ವಾಮ್ಯಾನ್ ಅಂಡ್ ಲಾಸ್ಟ್ ಕಿಂಗ್‌ಡಮ್ (3ಡಿ)(ಇಂ): ಬೆ.9.35ಕ್ಕೆ, ಮ.3.55ಕ್ಕೆ, ರಾ.10ಕ್ಕೆ, ಡಂಕಿ (ಹಿಂ): ಬೆ.9ಕ್ಕೆ, ಬೆ.11.40ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ಸಂ.6.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ನೆರು (ಮ): ರಾ.10.10ಕ್ಕೆ, ಸಲಾರ್ –1 (ಮ): ಸಂ.6.35ಕ್ಕೆ, ಸಲಾರ್–1 (ಹಿಂ): ಮ.2.50ಕ್ಕೆ, ಸಂ.5.55ಕ್ಕೆ, ರಾ.10ಕ್ಕೆ, ಸಲಾರ್–1 (ಕ): ಬೆ.8.05ಕ್ಕೆ, ಬೆ.11.15ಕ್ಕೆ, ಮ.3ಕ್ಕೆ, ಸಂ.6.25ಕ್ಕೆ, ಸಲಾರ್– 1(ತೆ): ಬೆ.7.10ಕ್ಕೆ, ಬೆ.7.40ಕ್ಕೆ, ಬೆ.8.10ಕ್ಕೆ, ರಾ.10.45ಕ್ಕೆ, ಬೆ.11.45ಕ್ಕೆ, ಮ.12.20ಕ್ಕೆ, ಮ.3.20ಕ್ಕೆ, ಮ.2.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪ ಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ಚಳಿಗಾಲದ ರೇಸುಗಳು

9ನೇ ದಿನ, ಬುಧವಾರ 24-1-2024

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.00 ಗಂಟೆಗೆ)

I. ಆ್ಯಂಟೆಕ್ಯೂರ ಪ್ಲೇಟ್–1100 ಮೀ. ರೇಟೆಡ್ 00 ರಿಂದ 25.	ಮ.2.00ಕ್ಕೆ
1. ಹುರ್ರೆಮ್ 2. ಬಚ್ಚೂಸ್ 3. ಅಟ್ಲಾಂಟಿಸ್	
II. ಬೋಲ್ಡ್ ಮೆಜೆಸ್ಟಿ ಪ್ಲೇಟ್–1400 ಮೀ. ವರ್ಷ (ಟರ್ಮ್ಸ್).	ಮ.2.30ಕ್ಕೆ
1. ಝಾರ್ ಕ್ವಾವಿ 2. ಟೆಂಪರೆನ್ಸ್ 3. ಆಬೂಶಾನ್	
III. ಶಿರಸಿ ಪ್ಲೇಟ್ ಡಿII–1100 ಮೀ. ರೇಟೆಡ್ 20 ರಿಂದ 45.	ಮ.3.00ಕ್ಕೆ
1 ರನ್ನಿಂಗ್ ಬೋಲ್ಟ್ 2. ಓನ್ಲಿ ಸ್ಟಾರ್ 3. ಡಿ ಫರ್ಟಿನ್ ಟ್ವೆಲ್	
IV. ಹಿಮಾಲಯಾಸ್ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45.	ಮ.3.30ಕ್ಕೆ
1. ಐಕ್ಯಾನ್ 2. ಬ್ಯೂಟಿಫುಲ್ ಓಬಿಲಿವಿನ್ 3. ಆರ್ಮಾಮೆಂಟ್	
V. ಡಾ. ಐಶ್ವರಿ ಜಿ.ಕೆ.ಬಾಲಕೃಷ್ಣ ಮೆಮೋರಿಯಲ್ ಟ್ರೋಫಿ–1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ.	ಮ.4.00ಕ್ಕೆ
1. ಜೆಮಿನಿ 2. ಗ್ಯಾಮ 3. ಸೌಂಡ್ ಆಫ್ ಕ್ಯಾನಸ್	
VI. ನೆಲಮಂಗಲ ಪ್ಲೇಟ್–1100 ಮೀ. ರೇಟೆಡ್ 40 ರಿಂದ 65.	ಸಂ.4.30ಕ್ಕೆ
1. ಡಲ್ಲಾಸ್ 2. ಮ್ಯಾಜಿಕ್ ಸರ್ಕಲ್ 3. ಮಿರಾಕುಲಸ್ ಗರ್ಲ್	
VII. ಶಿರಸಿ ಪ್ಲೇಟ್ ಡಿI–1100 ಮೀ. ರೇಟೆಡ್ 20 ರಿಂದ 45.	ಸಂ.5.00ಕ್ಕೆ
1. ಕೇಸರಿ ಕ್ವೀನ್ 2. ಟ್ವಿಲೈಟ್ ಪೇಮ್ 3. ಮೆಬರ್ರಿ	

ದಿನದ ಅತ್ಯುತ್ತಮ	: ರನ್ನಿಂಗ್ ಬೋಲ್ಟ್
ಡಬ್ಬಲ್	: ಹುರ್ರೆಮ್, ಝಾರ್ ಕ್ವಾವಿ
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 4, 5, 6 ಮತ್ತು 7
I ಟ್ರಿಬಲ್	: 2, 3 ಮತ್ತು 4
II ಟ್ರಿಬಲ್	: 5, 6 ಮತ್ತು 7
ಎಕ್ಸ್‌ಆಕ್ಟ್	: 1 ರಿಂದ 7

ಟಿಪ್‌ಸ್ಟರ್ ಪಿಜಿಸಿ

STAR OF MYSORE

SPECIAL ISSUE

Star of Mysore is completing **46** years of service on **16th February 2024** and entering **47th** year of publication. As in the past, this year too we will be publishing a Special Issue.

We request our advertisers and patrons to release their advertisements before **12th February** to facilitate printing as per schedule.

HEAD OFFICE

0821-2496520 (5-LINES)
Ad Dept. - 0821-2496522 / 23
Email : ad@starofmysore.com

Maria G. Fernandes
Advt. Manager: 94485-25060

Joy Anthony Dove
Sr. Executive-Ad Sales
89516-68960

Prema
Sr. Executive Advertising
98805-49879

K.R. Circle Office : 0821-2431774
D.D. Urs Road Office : 0821-2428695
Kodagu Office : 97314-69871
Mandya Office : 87629-60325
Chamarajanagar : 92422-65657
Nanjangud :
98805-09200 / 99016-02226
T.N. Pura : 94483-05750
Hassan : 94484-01175
Bengaluru : 98440-46761

ಕಳೆದಿದೆ

ಮನೆ ನಂ. 978, ಎ ಬ್ಲಾಕ್, 3ನೇ ಮುಖ್ಯ, 5ನೇ ಕ್ರಾಸ್ 3ನೇ ಹಂತ ದಟ್ಟಗಳ್ಳಿ, ಕನಕದಾಸ ನಗರ, ಮೈಸೂರಿನಲ್ಲಿ ವಾಸವಾಗಿರುವ ಬಸವರಾಜೇ ಅರಸ್ ಬಿನ್ ಬಿ. ಬಸವರಾಜೇ ಅರಸ್ ಆದ ನಾನು ಪ್ರಮಾಣೀಕರಿಸುವುದೇನೆಂದರೇ, ನನಗೆ ಸೇರಿದ ನಿವೇಶನ ಸಂಖ್ಯೆ 978 ರ ಮೂಲ ದಾಖಲಾತಿಗಳು, ಸರಸ್ವತಿಪುರಂನ 14 ನೇ ಮೇನ್‌ನಲ್ಲಿ ಜೆರಾಕ್ಸ್ ಮಾಡಿಸಲು ತೆರಳಿದ್ದಾಗ ಕಳೆದು ಹೋಗಿರುತ್ತದೆ, ಬೇರೆ ಯಾರಿಗಾದರೂ ಸಿಕ್ಕಿದರೆ ಮೇಲ್ಕಂಡ ವಿಳಾಸಕ್ಕೆ ತಲುಪಿಸಬೇಕಾಗಿ ವಿನಂತಿ ಅಥವಾ ಸಂಪರ್ಕಿಸಿ : 99803 40327

ಬೇಕಾಗಿದ್ದಾರೆ

ಟೈಲರಿಂಗ್ (ಯಂತ್ರ ಚಾಲಿತ) ಕೆಲಸಕ್ಕೆ ಯುವತಿಯರು ಅನುಭವ ಹೊಂದಿರುವವರು ಬೇಕಾಗಿದ್ದಾರೆ.
ಶ್ರೀ ಬೋಟಿಕ್, ಕೆ.ಡಿ.ಸರ್ಕಲ್, ವಿಜಯನಗರ, ಮೈಸೂರು–17
8088361007
9844446674

DTCP SITES FOR SALE

DTCP Sites
Rs. 699 per sq.ft.,
Near Jayapura,
H.D. Kote Road, Mysore.
9590491194,9606783264

WANTED

1) HELPERS (M)
2) SALES EXECUTIVES (M)
FOR REPUTED CLOTHING BRANDS
Contact : 9740996006
277/1, Ashoka Road, Mysore - 01

SITE FOR SALE

30x50 North-East corner "crystal city layout" Srirampura wide concrete road, Ring road inside, Attached preethi layout, Mysore, contact
9739703467, 9686895205

WANTED

PRE-SCHOOL TEACHERS AND HELPERS
Female Candidates Only
Minimum Qualification :
For Teachers - any Degree/NTT
For Helpers - SSLC
Contact Radiant School of Excellence, Gundlupet
9980777633
mail id: info@raidiantschoolofexcellence.com

We Make going solar simple & affordable
ರೂಫ್‌ಟಾಪ್ ಸೋಲಾರ್‌ಗೆ ಬ್ಯಾಂಕ್ ಸಾಲ ಲಭ್ಯವಿದೆ.
SmartEco Power Systems Pvt Ltd
ಸೌರಶಕ್ತಿ ಉಪಯೋಗಿಸಿ.. ವಿದ್ಯುತ್ ಬಿಲ್ ಉಳಿಸಿ..
Go Green, Go Solar for lifelong free electricity, ev charging, cooking...
Save Rs 14k/KW/Year, RoI 22 - 50%
Accelerated Depreciation, GST benefits for commercial customers
#2660/4, Kalidasa Road, V.V.Mohalla, Mysore - 570002 | info@smarteco.in
www.smarteco.in | Ph : 0821 - 241 6022 / 98803 96022 / 98866 50240

S.S.E.T
Sri Shambhulingeshwara College of Education
ADMISSIONS OPEN 2023-24
B.Ed
Limited seats only
Duration: 2 years
Eligibility: Any degree
Most advanced laboratories · Best in class infrastructure · experienced faculties
Jayanthinagara, Pandavapura Tq, Mandya Dist
Ph:7338138083

2.5 BHK
HOME INTERIORS @ ₹ 2.5 Lacs*
Home Space Mart
TALK TO OUR DESIGN TEAM
✆ 8197310113

neem BOND PLATINUM
PLYWOOD & DOORS
@ FACTORY DEPOT RATES
10 YEARS WARRANTY*
9845426862, 9901291267

ಮದುವೆ, ಶುಭ ಸಮಾರಂಭಗಳಿಗೆ
50% ರಿಯಾಯಿತಿ
ಕಾಂಚೀಪುರಂ ರೇಷ್ಮೆ ಸೀರೆಗಳು
ಮಾರಾಟ ಮತ್ತು
ಹಳೆ ಸೀರೆಗಳ ಎಕ್ಸ್‌ಚೇಂಜ್ ಆಫರ್
ಈ ಅವಕಾಶ ಕೆಲವೇ ದಿನಗಳು ಮಾತ್ರ
ಹೋಟೆಲ್ ಮಯೂರ ಹೊಯ್ಸಳ
(ಕೆಎಸ್‌ಟಿಡಿಸಿ ಯೂನಿಟ್), ಜೆಎಲ್‌ಬಿ ರಸ್ತೆ, ಮೈಸೂರು
ಮೊ. : 9481820079

ಬೇಕಾಗಿದ್ದಾರೆ

ಮ್ಯಾನೇಜರ್, ಸೂಪರ್‌ವೈಸರ್ ಮತ್ತು ಟೆಕ್ನಿಷಿಯನ್, ಅತ್ಯುತ್ತಮ ಸಂಬಳ: + ಇಎಸ್‌ಐ, ಪಿಎಫ್,
ಸಂಪರ್ಕಿಸಿ: ಮಹೇಶ್ ಕುಮಾರ್ :
9900632749
ಸಾಯಿ ಹರ್ಬಲ್ ಪೆಸ್ಟ್ ಕಂಟ್ರೋಲ್ ಸರ್ವೀಸಸ್

VILLA FOR SALE

Ready-to-move-in brand new 4 BHK villa for sale. Behind University Layout, Srirampura 2nd Stage, Mysore.
Price: 1.85 Cr (negotiable)
For more details call:
96069 07153

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

COMMERCIAL PROPERTY FOR SALE / RENT

5750 Sqft in Ground Floor, Mittal Pride, J.P Nagar, Mysore
Contact :
Arif : **9740011608**

KONICA MINOLTA
AUTHORISED DEALER
Maruthi Enterprises
All Brands Spares & consumables available



SPECIAL FESTIVAL OFFER FOR COLOUR MACHINES
KONICA MINOLTA BIZHUB C226i & C250i
*Conditions Apply
PLEASE CALL FOR DEMO
#76/R, FOOD ZONE, HOOTAGALLI INDUSTRIAL AREA, BELVADI POST, MYSURU - 570 018.
MOB: +91 94480 77985, 93433 60044

2 DAYS TO GO


CBSE, ICSE & STATE PRIVATE SCHOOLS MANAGEMENT ASSOCIATION MYSORE [R.]
CISPMAM PRESENTS
IN ASSOCIATION WITH Chirag ads
MYSURU EDUCATION FAIR 2024
26, 27 & 28 January 2024
Time : 10 AM to 9 PM
Maharaja College Grounds, Mysuru
FOR ENQUIRIES
98806 37618

JOB OPPORTUNITY

- **COUNSELLOR : Female**
  Qualification : B.Sc., / M.Sc.
- **RECEPTIONIST : Female**
  Qualification : B.Com / M.Com.
- **GNM STAFF NURSE : Female**

for a reputed Hospital in Mysore.
Should be fluent in English and Kannada.
Should be well versed in Computer.
ATTRACTIVE SALARIES PROVIDED.
FREE ACCOMMODATION PROVIDED.
For more details contact : **98450 49079**

❀ 2ನೇ ವರ್ಷದ ಪುಣ್ಯಸ್ಮರಣೆ ❀



ಪ್ರೊ.ಎಂ.ವಿ ನಾಗರಾಜುರವರು
ನಿವೃತ್ತ ಪ್ರಾಧ್ಯಾಪಕರು, ಮಹಾರಾಜ ಕಾಲೇಜ್, ಮೈಸೂರು
ನೀವು ನಮ್ಮನ್ನಗಲಿ ಎರಡು ವರ್ಷ ಕಳೆದರೂ, ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ನೀಡಲಿ, ಸದಾ ನಿಮ್ಮ ನೆನಪಿನಲ್ಲಿರುವ
ಇಂತಿ ದುಃಖತಪ್ತರು:
ಶ್ರೀಮತಿ ಕೆ. ಅನ್ನಪೂರ್ಣಮ್ಮ ಮತ್ತು ಕುಟುಂಬವರ್ಗದವರು

